

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಫೆಬ್ರವರಿ 2 ಗುರುವಾರ 2023

ಸಂಪುಟ: 43 | ಸಂಚಿಕೆ: 285 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4





ಆದಾಯ ತೆರಿಗೆ ವಿನಾಯಿತಿ ಮಿತಿ 7 ಲಕ್ಷಕ್ಕೆ ಏರಿಕೆ

ಸರ್ಕಾರಕ್ಕೆ ಆದಾಯದ ಮೂಲಗಳು...

ಪ್ರಸಕ್ತ ಬಜೆಟ್ ಅಂದಾಜಿನಂತೆ ಸರ್ಕಾರದ ಒಟ್ಟು ಆದಾಯ ಸುಮಾರು ರೂ. 45,14,884 ಕೋಟಿ. ಅದರಲ್ಲಿ ಬಹುಪಾಲು, ಅಂದರೆ ಶೇ.34 ಸಾಲ ಮತ್ತು ಇತರೆ ಮೂಲದಿಂದ ಸರ್ಕಾರದ ಖಜಾನೆ ಸೇರಲಿದೆ. ಜಿಎಸ್‌ಟಿ ಶೇ.17ರಷ್ಟು (ರೂ. 9,56,600) ಕೋಟಿ ಆದಾಯದ ಪ್ರಮುಖ ಮೂಲವಾಗಿದೆ. ಆದಾಯ ತೆರಿಗೆಯಿಂದ ಶೇ.15, ಅಬಕಾರಿ ಸುಂಕದಿಂದ ಶೇ. 7ರಷ್ಟು ಆದಾಯ ಸರ್ಕಾರಕ್ಕೆ ಬರಲಿದೆ. ಕಾರ್ಪೊರೇಟ್ ತೆರಿಗೆ ಶೇ.15, ತೆರಿಗೆಯೇತರ ಸ್ವೀಕೃತಿ ಶೇ.6, ಸಾಲೇತರ ಬಂಡವಾಳ ಸ್ವೀಕೃತಿ ಶೇ.2, ಸುಂಕ ಶೇ.4ರಷ್ಟು ಆದಾಯದ ಮೂಲವಾಗಿದೆ.



ಪರಿಷ್ಕೃತ ಆದಾಯ ತೆರಿಗೆ ಪದ್ಧತಿ	
ರೂ. 0 ರಿಂದ 3 ಲಕ್ಷದವರೆಗೆ	0%
ರೂ. 3 ರಿಂದ 6 ಲಕ್ಷದವರೆಗೆ	5%
ರೂ. 6 ರಿಂದ 9 ಲಕ್ಷದವರೆಗೆ	10%
ರೂ. 9 ರಿಂದ 12 ಲಕ್ಷದವರೆಗೆ	15%
ರೂ. 12 ರಿಂದ 15 ಲಕ್ಷದವರೆಗೆ	20%
ರೂ. 15 ಲಕ್ಷ ಮೇಲ್ಪಟ್ಟು	30%

ನವದೆಹಲಿ, ಫೆ.1– ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ನೂತನ ಆದಾಯ ತೆರಿಗೆ ಸ್ಲಾಬ್‌ಗಳನ್ನು ವಿವರಿಸಿದ್ದು, ಇದೇ ವೇಳೆ ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು 7 ಲಕ್ಷ ರೂಗೆ ಹೆಚ್ಚಳ ಮಾಡಿದ್ದಾರೆ.

ಕೇಂದ್ರ ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ ಬುಧವಾರ ಲೋಕಸಭೆ ಯಲ್ಲಿ ಬಜೆಟ್ ಮಂಡಿಸಿದ್ದು, ಹೊಸ ತೆರಿಗೆ ಪದ್ಧತಿಯಲ್ಲಿ ವಾರ್ಷಿಕ 7 ಲಕ್ಷ ರೂ. ವರೆಗೆ ತೆರಿಗೆ ವಿನಾಯ್ತಿ ಘೋಷಿಸಲಾಗಿದೆ. ಇದು ಮಧ್ಯಮ ವರ್ಗದಲ್ಲಿ ಹರ್ಷ ತಂದಿದೆ.

ಆದಾಯ ತೆರಿಗೆಗೆ ಸಂಬಂಧಿಸಿದಂತೆ ನಿರ್ಮಲಾ ಸೀತಾರಾಮನ್ 5 ಮಹತ್ವದ ಕ್ರಮಗಳನ್ನು ಘೋಷಿಸಿದ್ದು, 7 ಲಕ್ಷ ರೂ. ವರೆಗೆ ಆದಾಯ ತೆರಿಗೆ ವಿನಾಯ್ತಿ ಪ್ರಕಟಿಸಿದ್ದಾರೆ. ಹೊಸ ತೆರಿಗೆ ಪದ್ಧತಿಯಲ್ಲಿ ಟ್ಯಾಕ್ಸ್ ಸ್ಲ್ಯಾಬ್‌ಗಳನ್ನು (ತೆರಿಗೆ ಹಂತಗಳು) 5ಕ್ಕೆ ಮಿತಗೊಳಿಸಲಾಗಿದ್ದು, 3 ಲಕ್ಷ ರೂ. ನಿಂದ ತೆರಿಗೆ ಹಂತ ಆರಂಭವಾಗಲಿದೆ. ಹೊಸ ತೆರಿಗೆ ಪದ್ಧತಿ ಆದಾಯ ತೆರಿಗೆ ವಿನಾಯ್ತಿ ಮೊತ್ತವನ್ನು ರೂ. 5 ಲಕ್ಷದಿಂದ ರೂ. 7 ಲಕ್ಷಕ್ಕೆ ಹೆಚ್ಚಿಸಲಾಗುವುದು ಎಂದು ಸಚಿವರು ಭರವಸೆ ನೀಡಿದ್ದಾರೆ. ವಾರ್ಷಿಕ ರೂ. 9 ಲಕ್ಷ ವೇತನ ಪಡೆಯುವವರು ರೂ. 45,000 ತೆರಿಗೆ ಕಟ್ಟುತ್ತಾರೆ ಎಂದು ಹೇಳಿದರು. ಹೊಸ ತೆರಿಗೆ ಪದ್ಧತಿಯೇ ಇನ್ನು ಮುಂದೆ ಡಿಫಾಲ್ಟ್ ತೆರಿಗೆ ಪದ್ಧತಿ ಆಗಿರುತ್ತದೆ. ಆದರೆ ಹಳೆಯ ತೆರಿಗೆ ಪದ್ಧತಿಯೂ ಚಾಲ್ತಿಯಲ್ಲಿರುತ್ತದೆ. ತೆರಿಗೆ ಸ್ಲ್ಯಾಬ್‌ಗಳನ್ನು 6 ಹಂತಗಳಿಂದ 5 ಹಂತಗಳಿಗೆ ಬದಲಿಸ ಲಾಗಿದೆ. ಹೊಸ ತೆರಿಗೆ ಪದ್ಧತಿ ಆರಿಸಿಕೊಳ್ಳುವವರಿಗೆ 7 ಲಕ್ಷ ರೂ. ವರೆಗಿನ ತೆರಿಗೆ ವಿನಾಯ್ತಿ ಲಭ್ಯವಾಗಲಿದೆ. ಹೊಸ ತೆರಿಗೆ ಪದ್ಧತಿಯಲ್ಲಿ ಅತೀ ಹೆಚ್ಚು ಸರ್ಚಾರ್ಜ್ ದರವನ್ನು 37% ರಿಂದ 25% ಕ್ಕೆ ಇಳಿಸಲು ಸರ್ಕಾರ ಪ್ರಸ್ತಾಪಿಸಿದೆ.

ಸ್ಟಾಂಡರ್ಡ್ ಡಿಡಕ್ಷನ್: 15.5 ಲಕ್ಷ ರೂ ಅಥವಾ ಅದಕ್ಕೂ ಹೆಚ್ಚಿನ ಆದಾಯವನ್ನು ವೇತನದಿಂದ ಪಡೆಯುವವರಿಗೆ 52,500 ರೂ ಸ್ಟಾಂಡರ್ಡ್ ಡಿಡಕ್ಷನ್ ಸೌಲಭ್ಯ ಸಿಗಲಿದೆ.

ಗರಿಷ್ಠ ತೆರಿಗೆ ಇಳಿಕೆ: ಈವರೆಗೆ ಗರಿಷ್ಠ ತೆರಿಗೆಯ ಮೇಲೆ ಶೇ.37ರಷ್ಟು ಸರ್‌ಚಾರ್ಜ್ ವಿಧಿಸಲಾಗುತ್ತಿತ್ತು. ಈ ಪ್ರಮಾಣವನ್ನು ಹೊಸ ತೆರಿಗೆ ನೀತಿಯಡಿ ಶೇ 25ಕ್ಕೆ ಇಳಿಸಲಾಗಿದೆ. ಈ ಬೆಳವಣಿಗೆಯೊಂದಿಗೆ ದೇಶದಲ್ಲಿರುವ ಗರಿಷ್ಠ ತೆರಿಗೆ ದರವು ಶೇ.39ಕ್ಕೆ ಮಿತಗೊಳ್ಳಲಿದೆ. ಪ್ರಸ್ತುತ ಅತಿ ಹೆಚ್ಚು ವೈಯಕ್ತಿಕ ತೆರಿಗೆ ▶ 9ನೇ ಪುಟಕ್ಕೆ

ಯಾವುದು ಅಗ್ಗ; ಯಾವುದು ದುಬಾರಿ

ಎನ್‌ಡಿಎ ಸರ್ಕಾರದ ಎರಡನೇ ಅವಧಿಯ ಪೂರ್ಣ ಪ್ರಮಾಣದ ಬಜೆಟ್ ಇದಾಗಿದೆ. ಈ ಬಾರಿಯ ಬಜೆಟ್‌ನಲ್ಲಿ ಜನಸಾಮಾನ್ಯರು ಬಳಸುವ ಕೆಲವು ಸರಕುಗಳ ಮೇಲಿನ ತೆರಿಗೆಯನ್ನು ಹೆಚ್ಚಿಸಿದ್ದರೆ, ಇನ್ನು ಹಲವು ಸರಕುಗಳ ಮೇಲಿನ ಸುಂಕವನ್ನು ಕಡಿಮೆ ಮಾಡಲಾಗಿದೆ.

ಮೊಬೈಲ್ ಫೋನ್, ಲ್ಯಾಪ್‌ಟಾಪ್, ಸೈಕಲ್, ಎಲ್‌ಇಡಿ ಟಿವಿ, ಟಿವಿ ಪ್ಯಾನಲ್, ಆಟೊಮೊಬೈಲ್, ಜವಳಿ, ಎಲೆಕ್ಟ್ರಿಕ್ ವಾಹನ, ಕ್ಯಾಮೆರಾ ಲೆನ್ಸ್, ಜೈವಿಕ ಅನಿಲ ಆಧಾರಿತ ಉತ್ಪನ್ನಗಳು.

ಸಿಗರೇಟ್, ಎಲೆಕ್ಟ್ರಿಕ್ ಚಿಮಣಿ, ಆಮದು ಮಾಡಿಕೊಂಡ ರಬ್ಬರ್, ಚಿನ್ನ, ಬೆಳ್ಳಿ, ಬ್ರಾಂಡೆಡ್ ಬಟ್ಟೆಗಳು, ಪ್ಲಾಟಿನಮ್ ವಜ್ರ, ಎಕ್ಸ್‌ರೇ, ಹೆಡ್‌ಫೋನ್, ಇಯರ್ ಫೋನ್, ವೈದ್ಯಕೀಯ ಉತ್ಪನ್ನಗಳು ದುಬಾರಿಯಾಗಲಿವೆ.

ಇದು ಅಮೃತ್ ಕಾಲದ ಮೊದಲ ಬಜೆಟ್



ನವದೆಹಲಿ, ಫೆ.1– ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬುಧವಾರ ಮಂಡಿಸಿದ 2023–24ನೇ ಸಾಲಿನ ಬಜೆಟ್ ಅನ್ನು ಶ್ಲಾಘಿಸಿದ ಪ್ರಧಾನಿ ನರೇಂದ್ರ ಮೋದಿ, ಇದು ಅಮೃತ್ ಕಾಲದ ಮೊದಲ ಬಜೆಟ್ ಎಂದು ಹೇಳಿದ್ದಾರೆ.

ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸಲು ಈ ಬಜೆಟ್ ಭದ್ರ ಬುನಾದಿ ಹಾಕಿದೆ. ಈ ಬಜೆಟ್ ಬಡವರು, ಮಧ್ಯಮ ವರ್ಗದ ಜನ, ರೈತರು ಸೇರಿದಂತೆ ಮಹತ್ವಾಕಾಂಕ್ಷೆಯ ಯುವ ಭಾರತದ ಕನಸುಗಳನ್ನು ಈಡೇರಿಸಲಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ದೇಶಕ್ಕಾಗಿ ಪರಂಪರಾಗತವಾಗಿ ಶ್ರಮಿಸುತ್ತಿರುವ 'ವಿಶ್ವಕರ್ಮ'ರು ಈ ದೇಶದ ಸೃಷ್ಟಿಕರ್ತರು. ಮೊದಲ ಬಾರಿಗೆ 'ವಿಶ್ವಕರ್ಮ' ತರಬೇತಿ ಮತ್ತು ಬೆಂಬಲಕ್ಕೆ ಸಂಬಂಧಿಸಿದ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ ಎಂದು ಪ್ರಧಾನಿ ತಿಳಿಸಿದರು. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಮಹಿಳೆಯರ ಜೀವನವನ್ನು ಸುಲಭಗೊಳಿಸಲು ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. ಮಹಿಳಾ ಸ್ವ–ಸಹಾಯ ಗುಂಪುಗಳನ್ನು ಇನ್ನಷ್ಟು ಹೆಚ್ಚಿಸುತ್ತವೆ. ಮನೆಯಲ್ಲಿ ಮಹಿಳೆಯರ ಸಬಲೀಕರಣಗೊಳಿಸಲು ವಿಶೇಷ ಉಳಿತಾಯ ಯೋಜನೆ ಪ್ರಾರಂಭಿಸಲಾಗುವುದು ಎಂದು ಪ್ರಧಾನಿ ಮೋದಿ ಹೇಳಿದರು. ಪರಿಸರ ಮತ್ತು ಹಸಿರೀಕರಣಕ್ಕೆ ಉತ್ತೇಜನ ನೀಡಲಾಗಿದೆ. ಹಸಿರು ಶಕ್ತಿ, ಹಸಿರು ಬೆಳವಣಿಗೆ, ಹಸಿರು ಮೂಲಸೌಕರ್ಯ ಹಾಗೂ ಹಸಿರು ಉದ್ಯೋಗಗಳನ್ನು ಮತ್ತಷ್ಟು ಸೃಷ್ಟಿಸುವ ಸುಸ್ಥಿರ ಭವಿಷ್ಯವನ್ನು ಘೋಷಿಸಲಾಗಿದೆ. ತಂತ್ರಜ್ಞಾನ ಮತ್ತು ಹೊಸ ಆರ್ಥಿಕತೆ ಮೇಲೂ ನಾವು ಗಮನಹರಿಸಿದ್ದೇವೆ ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ.

ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್‌ಗೆ ಸ್ಫೂರ್ತಿಯಾಯ್ತು ನಮ್ಮ ಇಳಕಲ್ ಸೀರೆ...!

ನವದೆಹಲಿ, ಫೆ.1– ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕರ್ನಾಟಕದ ಧಾರವಾಡ ಕಸೂತಿ ಕಲೆಯ ಆಕರ್ಷಕ ಇಳಕಲ್ ಸೀರೆ ಉಟ್ಟು 2023–24ನೇ ಸಾಲಿನ ಬಜೆಟ್ ಮಂಡಿಸಿದ್ದು ವಿಶೇಷವಾಗಿತ್ತು. ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಅವರು ಧಾರವಾಡದ ನವಲಗುಂದ ಕಸೂತಿ ಕಲೆ ಬಗ್ಗೆ ಹಾಗೂ ಅಲ್ಲಿನ ಸಾಂಸ್ಕೃತಿಕ ಶ್ರೀಮಂತಿಕೆ ಬಗ್ಗೆ ಕಾರ್ಯ ಕ್ರಮವೊಂದ ರಲ್ಲಿ ನಿರ್ಮಲಾ ಸೀತಾರಾಮನ್ ಅವರಿಗೆ ವಿವರಿಸಿ ಧಾರವಾಡ ಕಸೂತಿ ಕಲೆ ಇರುವ ಇಳಕಲ್ ಸೀರೆಗಳನ್ನು ಉಡುಗೊರೆಯಾಗಿ ನೀಡಿದ್ದರು. ಧಾರವಾಡ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಅವರು ಕೈಮಗ್ಗ ಮತ್ತು ಜವಳಿ ಇಲಾಖೆ ಅಧಿಕಾರಿ ಸೈಯದ್ ಅಹಮದ್ ಅವರ ಮೂಲಕ ಕೇಂದ್ರ ವಿತ್ತ ಸಚಿವರಿಗೆ ಉಡುಗೊರೆಯಾಗಿ ನೀಡಲಿದ್ದ ಸೀರೆಗಳಿಗೆ ವಿಶೇಷವಾದ ▶ 9ನೇ ಪುಟಕ್ಕೆ

ರೈಲ್ವೆಗೆ 2.4 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆ

ನವದೆಹಲಿ, ಫೆ.1– 2023–24ರ ಕೇಂದ್ರ ಬಜೆಟ್‌ನಲ್ಲಿ ರೈಲ್ವೆಯ ಬಂಡವಾಳದ ವೆಚ್ಚವನ್ನು 2.40 ಲಕ್ಷ ಕೋಟಿ ರೂ.ಗೆ ಹೆಚ್ಚಿಸಲಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.



ಲೋಕಸಭೆಯಲ್ಲಿ ಬಜೆಟ್ ಮಂಡಿಸಿದ ಸೀತಾರಾಮನ್, ರೈಲ್ವೆಗೆ 2013–2014ರಲ್ಲಿ ಒದಗಿಸಿದ ಮೊತ್ತಕ್ಕಿಂತ ಒಂಬತ್ತು ಪಟ್ಟು ಬಂಡವಾಳ ತೊಡಗಿಸಲಾಗಿದೆ ಎಂದು ಹೇಳಿದರು. ಕಲ್ಲಿದ್ದಲು, ರಸಗೊಬ್ಬರ ಮತ್ತು ಆಹಾರ ಧಾನ್ಯ ಕ್ಷೇತ್ರಗಳಿಗೆ ಕೊನೆಯ ಮತ್ತು ಮೊದಲ ಮೈಲಿ ಸಂಪರ್ಕಕ್ಕಾಗಿ 100 ನಿರ್ಣಾಯಕ ಸಾರಿಗೆ ಮೂಲ ಸೌಕರ್ಯ ಯೋಜನೆಗಳನ್ನು ಗುರುತಿಸಲಾಗಿದೆ ಮತ್ತು ಖಾಸಗಿ ಮೂಲಗಳಿಂದ ರೂ 15,000 ಕೋಟಿ ಸೇರಿದಂತೆ ರೂ 75,000 ಕೋಟಿ ಹೂಡಿಕೆಯೊಂದಿಗೆ ಆದ್ಯತೆಯ ಆಧಾರದ ಮೇಲೆ ತೆಗೆದುಕೊಳ್ಳಲಾಗುವುದು ಎಂದು ಅವರು ಹೇಳಿದರು. ಹೆಚ್ಚಿದ ಪ್ರಯಾಣಿಕರ ನಿರೀಕ್ಷೆಯೊಂದಿಗೆ, ರಾಜಧಾನಿ, ಶತಾಬ್ಧಿ, ಡುರೊಂಟೊ, ಹಮ್ಸಾಫರ್ ಮತ್ತು ತೇಜಸ್‌ನಂತಹ ಪ್ರೀಮಿಯರ್ ರೈಲುಗಳ 1,000 ಕ್ಕೂ ಹೆಚ್ಚು ಬೋಗಿಗಳನ್ನು ನವೀಕರಿಸಲು ರೈಲ್ವೆ ಯೋಜಿಸುತ್ತಿದೆ. ಈ ಕೋಚ್‌ಗಳ ಒಳಭಾಗವನ್ನು ಪ್ರಯಾಣಿಕರ ಅನುಕೂಲಕ್ಕೆ ತಕ್ಕಂತೆ ಆಧುನಿಕವಾಗಿ ಅಭಿವೃದ್ಧಿಪಡಿಸಲಾಗುವುದು, ರೈಲುಗಳ ವೇಗವನ್ನು ಹೆಚ್ಚಿಸಲು ಮತ್ತು ಹೆಚ್ಚಿನ ಸ್ಥಳಗಳಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್ ಅನ್ನು ಪ್ರಾರಂಭಿಸಲು ರೈಲ್ವೆಯು ಯೋಜಿಸಿರುವುದರಿಂದ ಹಳೆಯ ಹಳಿಗಳನ್ನು ಬದಲಾಯಿಸಲು ಗಮನಾರ್ಹವಾದ ಅನುದಾನ ಹಂಚಿಕೆ ಮಾಡಲಾಗುವುದು ಎಂದರು. ▶ 9ನೇ ಪುಟಕ್ಕೆ

ದೇಶಾದ್ಯಂತ 157 ಹೊಸ ನರ್ಸಿಂಗ್ ಕಾಲೇಜು ಸ್ಥಾಪನೆ

ಆರೋಗ್ಯ ಕ್ಷೇತ್ರಕ್ಕೆ 88 ಸಾವಿರ ಕೋಟಿ: ಈ ಬಾರಿ ಶೇ.2.71ರಷ್ಟು ಹೆಚ್ಚಳ

ನವದೆಹಲಿ, ಫೆ.1– ಬಜೆಟ್‌ನಲ್ಲಿ ಆರೋಗ್ಯ ಕ್ಷೇತ್ರಕ್ಕೆ 88,956 ಕೋಟಿ ರೂ. ಕಾಯ್ದಿರಿಸಲಾಗಿದೆ. ಹಿಂದಿನ ಬಜೆಟ್‌ಗೆ ಹೋಲಿಸಿದರೆ 2,350 ಕೋಟಿ ಅಂದರೆ ಶೇ. 2.71ರಷ್ಟು ಹೆಚ್ಚಳವಾಗಿದೆ. 2014ರಿಂದ ದೇಶದಲ್ಲಿ 157 ವೈದ್ಯಕೀಯ ಕಾಲೇಜುಗಳನ್ನು ತೆರೆಯಲಾಗಿದೆ. ಈಗ ಈ ವೈದ್ಯಕೀಯ ಕಾಲೇಜುಗಳಲ್ಲಿ 157 ಹೊಸ ನರ್ಸಿಂಗ್ ಕಾಲೇಜುಗಳನ್ನು ಸಹ ಸ್ಥಾಪಿಸಲಾಗುವುದು. ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಸಹಾಯದಿಂದ ಐಸಿಎಂಆರ್ ಲ್ಯಾಬ್‌ಗಳಲ್ಲಿ ಸಂಶೋಧನೆಯನ್ನು ಉತ್ತೇಜಿಸಲಾಗುತ್ತಿದೆ. ಔಷಧೀಯ ವಲಯದಲ್ಲಿ ಸಂಶೋಧನೆಯನ್ನು ಉತ್ತೇಜಿಸಲು ಹಣಕಾಸು ಸಚಿವರು ಹೊಸ ಯೋಜನೆಯನ್ನು ಘೋಷಿಸಿದ್ದು ▶ 9ನೇ ಪುಟಕ್ಕೆ



ಕೋವಿಡ್ ಸಮಯದಲ್ಲಿ 80 ಕೋಟಿ ಬಡವರಿಗೆ ಉಚಿತ ಆಹಾರ ಧಾನ್ಯ ಪೂರೈಕೆ

ನವದೆಹಲಿ: ಕೋವಿಡ್–19ರ ಸಮಯದಲ್ಲಿ 80 ಕೋಟಿ ಬಡವರಿಗೆ ಉಚಿತ ಆಹಾರ ಧಾನ್ಯಗಳನ್ನು ನೀಡುವ ಮೂಲಕ ಸಾಂಕ್ರಾಮಿಕ ಸಮಯದಲ್ಲಿ ಯಾರೂ ಹಸಿವಿನಿಂದ ಬಳಲದಂತೆ ಕೇಂದ್ರ ಸರ್ಕಾರ ಕ್ರಮವಹಿಸಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬುಧವಾರ ಹೇಳಿದ್ದಾರೆ. ಭಾರತ ಜಿ–20 ಅಧ್ಯಕ್ಷತೆ ವಹಿಸಿಕೊಂಡಿದ್ದು, ಜಾಗತಿಕ ಮಟ್ಟದಲ್ಲಿ ಭಾರತ ಸದೃಢಗೊಳ್ಳಲು ಇದು ಒಂದು ಪ್ರಮುಖ ಕಾರಣ ಎಂದರು. ಜನವರಿ 1 ರಿಂದ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ (ಪಿಎಂಜಿಕೆಎವೈ) ಅಡಿಯಲ್ಲಿ ಬಡವರಿಗೆ ಉಚಿತ ಆಹಾರ ಧಾನ್ಯಗಳನ್ನು ಪೂರೈಸುವ ಯೋಜನೆಯಡಿ 2 ಲಕ್ಷ ಕೋಟಿ ರೂ. ವೆಚ್ಚದಲ್ಲಿ ಈ ಕಾರ್ಯಕ್ರಮವನ್ನು ಜಾರಿಗೊಳಿಸಿದೆ ಎಂದು ಹೇಳಿದ್ದಾರೆ. ಇದರಿಂದ ರೈತರಿಗೆ ಕೃಷಿ ಮತ್ತು ಸಂಬಂಧಿತ ವಲಯದ ಬೆಳವಣಿಗೆಯು ವರ್ಷಗಳಿಂದ ಉತ್ಕೃಷ್ಟವಾಗಿದೆ. ಖಾಸಗಿ ಹೂಡಿಕೆಯು ಶೇ.9.3 ಹಾಗೂ 2020ರಲ್ಲಿ ಶೇ.7ರಷ್ಟು ಹೆಚ್ಚಾಗಿದೆ ಎಂದರು.

ಮಹಿಳೆಯರಿಗೆ ಹೊಸ ಉಳಿತಾಯ ಯೋಜನೆ



ನವದೆಹಲಿ, ಫೆ.1– ಎರಡು ವರ್ಷಗಳ ಕಾಲ ಶೇ 7.5ರಷ್ಟು ಸ್ಥಿರಬಡ್ಡಿಯೊಂದಿಗೆ ಮಹಿಳೆಯರಿಗಾಗಿ "ಮಹಿಳಾ ಸಮ್ಮಾನ್ ಉಳಿತಾಯ ಪ್ರಮಾಣಪತ್ರ" ಹೊಸ ಉಳಿತಾಯ ಯೋಜನೆಯನ್ನು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲಿ ಘೋಷಿಸಿದ್ದಾರೆ.

ಮಹಿಳೆ ಅಥವಾ ಹೆಣ್ಣು ಮಗುವಿನ ಹೆಸರಿನಲ್ಲಿ ಈ ಯೋಜನೆಯಲ್ಲಿ ಗರಿಷ್ಠ ರೂ. 2 ಲಕ್ಷ ಮೊತ್ತದ ಹಣವನ್ನು ಠೇವಣಿಯಾಗಿ ಇರಿಸಬಹುದು. ಭಾಗಶಃ ಹಿಂಪಡೆಯುವ ಸೌಲಭ್ಯವೂ ಯೋಜನೆಯಲ್ಲಿದೆ. ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ದೀನ್ ದಯಾಳ್ ಅಂತ್ಯೋದಯ ಯೋಜನೆ, ರಾಷ್ಟ್ರೀಯ ಜೀವನೋಪಾಯ ಮಿಷನ್ ಅಡಿಯಲ್ಲಿ 81 ಲಕ್ಷ ಸ್ವ–ಸಹಾಯ ಮಹಿಳಾ ಗುಂಪುಗಳನ್ನು ರಚಿಸಲಾಗಿದೆ. ಹಲವು ಸಾವಿರ ಸದಸ್ಯರನ್ನು ಹೊಂದಿರುವ ದೊಡ್ಡ ಉತ್ಪಾದಕ ಉದ್ಯಮಗಳು ಅಥವಾ ಸಮೂಹಗಳ ರಚನೆಯ ಮೂಲಕ ಈ ಗುಂಪುಗಳನ್ನು ಆರ್ಥಿಕ ಸಬಲೀಕರಣದ ಮುಂದಿನ ಹಂತವನ್ನು ತಲುಪಲು ಸಕ್ರಿಯಗೊಳಿಸಲಾಗುವುದು ಎಂದು ▶ 9ನೇ ಪುಟಕ್ಕೆ

ವಿಶ್ವಕರ್ಮರಿಗೆ ವಿಶೇಷ ಪ್ಯಾಕೇಜ್: ಕೌಶಲ್ ಸಮ್ಮಾನ್

ನವದೆಹಲಿ, ಫೆ.1– ಇಂದು ಮಂಡಿಸಲಾದ ಕೇಂದ್ರ ಬಜೆಟ್‌ನಲ್ಲಿ ಭಾರತಾದ್ಯಂತ ನೂರಾರು ವರ್ಷಗಳಿಂದ ಕರಕುಶಲ ಕೆಲಸ, ವಸ್ತುಗಳ ತಯಾರಿಕೆಯಲ್ಲಿ ನಿಷ್ಣಾತರಾಗಿರುವ ವಿಶ್ವಕರ್ಮ ಜನಾಂಗದವರಿಗೆ ವಿಶೇಷ ಪ್ಯಾಕೇಜ್ ಘೋಷಿಸಲಾಗಿದೆ.




ಪಿಎಂ ವಿಕಾಸ್ ಅಡಿ 'ಪ್ರಧಾನ ಮಂತ್ರಿ ವಿಶ್ವಕರ್ಮ ಕೌಶಲ್ ಸಮ್ಮಾನ್' ಯೋಜನೆಯನ್ನು ಘೋಷಿಸಲಾಗಿದ್ದು, ಈ ಯೋಜನೆಯಡಿ ಫಲಾನುಭವಿಗಳು ಸಹಾಯಧನ, ಸಾಲಸೌಲಭ್ಯ, ತರಬೇತಿ, ಆಧುನಿಕ ಕೌಶಲ್ಯ ಅಳವಡಿಕೆಗೆ ಹಣಕಾಸು ನೆರವು ವಿಶ್ವಕರ್ಮಿಗಳಿಗೆ ಸಿಗಲಿದೆ. ಆತ್ಮನಿರ್ಭರ್‌ಗೆ ಅನುಗುಣವಾಗಿ ವಿಶ್ವಕರ್ಮರಿಗೆ ಈ ಯೋಜನೆಯನ್ನು ಹೊರತರಲಾಗಿದ್ದು ರಾಷ್ಟ್ರಮಟ್ಟದಲ್ಲಿ ವಿಶ್ವಕರ್ಮರಿಗಾಗಿಯೇ ಘೋಷಿಸಿದ ಮೊದಲ ಪ್ಯಾಕೇಜ್ ಇದಾಗಿದೆ. ಇದರಿಂದ ವಿಶ್ವಕರ್ಮ ಸಮುದಾಯದ ಕೆಳಹಂತದ ಜನರಿಗೆ ಅನುಕೂಲವಾಗಲಿದೆ ಎಂದು ವಿಶ್ಲೇಷಿಸಲಾಗಿದೆ.

ದುರ್ಬಲ ಬುಡಕಟ್ಟು ಗುಂಪುಗಳ ಅಭಿವೃದ್ಧಿಗೆ ರೂ. 15,000 ಕೋಟಿ

ನವದೆಹಲಿ, ಫೆ.1– ನಿರ್ದಿಷ್ಟ ದುರ್ಬಲ ಬುಡಕಟ್ಟು ಗುಂಪುಗಳ (ಪಿವಿಟಿಜಿ)



ಸಾಮಾಜಿಕ–ಆರ್ಥಿಕ ಪರಿಸ್ಥಿತಿ ಸುಧಾರಣೆಗಾಗಿ ಪ್ರಧಾನಮಂತ್ರಿ ಪಿವಿಟಿಜಿ ಅಭಿವೃದ್ಧಿ ಮಿಷನ್ ಪ್ರಾರಂಭಿಸುವುದಾಗಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಬುಧವಾರ ಮಂಡಿಸಿರುವ ಕೇಂದ್ರ ಬಜೆಟ್‌ನಲ್ಲಿ ಘೋಷಿಸಿದ್ದಾರೆ. ಮುಂದಿನ ಮೂರು ವರ್ಷಗಳಲ್ಲಿ ಈ ಯೋಜನೆ ಅನುಷ್ಠಾನಕ್ಕಾಗಿ ಪರಿಶಿಷ್ಟರಿಗಾಗಿ ಅಭಿವೃದ್ಧಿ ಕ್ರಿಯಾಯೋಜನೆಯಡಿಯಲ್ಲಿ ರೂ. 15,000 ಕೋಟಿ ಮೀಸಲು ಇಡಲಾಗುವುದು. ಈ ಮೂಲಕ ಪಿವಿಟಿಜಿ ವಿಭಾಗದವರಿಗೆ ಸುರಕ್ಷಿತ ವಸತಿ, ಶುದ್ಧ ಕುಡಿಯುವ ನೀರು, ನೈರ್ಮಲ್ಯ, ಶಿಕ್ಷಣ, ಆರೋಗ್ಯ, ಪೋಷಣೆಯಂತಹ ಮೂಲಭೂತ ಸೌಲಭ್ಯ ಮತ್ತು ರಸ್ತೆ, ದೂರ ಸಂಪರ್ಕ ಮತ್ತು ಸುಸ್ಥಿರ ಜೀವನೋಪಾಯದ ಬೇಡಿಕೆಗಳನ್ನು ಈಡೇರಿಸಲಾಗುವುದು.



ರಾಷ್ಟ್ರೀಯ ಡಿಜಿಟಲ್ ಲೈಬ್ರರಿ

ನವದೆಹಲಿ, ಫೆ.1– ಮಕ್ಕಳು ಮತ್ತು ಹದಿಹರೆಯದವರ ಬೌದ್ಧಿಕ ವಿಕಾಸ, ಓದು ಸಂಸ್ಕೃತಿ ಬೆಳೆಸುವ ದೃಷ್ಟಿಯಿಂದ "ರಾಷ್ಟ್ರೀಯ ಡಿಜಿಟಲ್ ಗ್ರಂಥಾಲಯ" ಸ್ಥಾಪಿಸುವುದಾಗಿ ಕೇಂದ್ರ ಸರ್ಕಾರ ಹೇಳಿದೆ. ಭೌಗೋಳಿಕತೆ, ಭಾಷೆಗಳು, ಪ್ರಕಾರಗಳು, ಗುಣಮಟ್ಟದ ಪುಸ್ತಕಗಳು ಮತ್ತು ಸಾಧನಗಳು ಮಕ್ಕಳಿಗೆ ಸಿಗುವಂತೆ ಮಾಡಲಾಗುವುದು. ಪಂಚಾಯತ್ ಮತ್ತು ವಾರ್ಡ್ ಮಟ್ಟದಲ್ಲಿ ಭೌತಿಕ ರೂಪದ ಗ್ರಂಥಾಲಯಗಳನ್ನು ಸ್ಥಾಪಿಸಲು ಮತ್ತು ಸಂಪನ್ಮೂಲ, ಮೂಲಸೌಕರ್ಯಗಳನ್ನು ಒದಗಿಸಲು ರಾಜ್ಯಗಳಿಗೆ ಪ್ರೋತ್ಸಾಹ ನೀಡಲಾಗುವುದು ಎಂದು ತಿಳಿಸಿದರು. ಮಕ್ಕಳಲ್ಲಿ ಓದುವ ▶ 9ನೇ ಪುಟಕ್ಕೆ



ಸಹಕಾರ ಕ್ಷೇತ್ರಕ್ಕೆ ತೆರಿಗೆ ವಿನಾಯಿತಿ

ನವದೆಹಲಿ, ಫೆ.1–ಸಹಕಾರಿ ಕ್ಷೇತ್ರದ ಬಲವರ್ಧನೆಗೆ ಕೇಂದ್ರ ಸರ್ಕಾರವು ಬುಧವಾರ ಬಜೆಟ್‌ನಲ್ಲಿ ಹಲವು ಉತ್ತೇಜನಕಾರಿ ಕ್ರಮಗಳನ್ನು ಘೋಷಿಸಿದೆ. ಉತ್ಪಾದನೆ ಕೇಂದ್ರಿತ ಹೊಸ ಸಹಕಾರಿ ಸಂಘಗಳನ್ನು ಪ್ರೋತ್ಸಾಹಿಸಲು ತೆರಿಗೆಯಲ್ಲಿ ಶೇ 15ರಷ್ಟು ರಿಯಾಯಿತಿ, ಟಿಡಿಎಸ್ ಇಲ್ಲದೇ ರೂ. 3 ಕೋಟಿವರೆಗೆ ನಗದು ಹಿಂಪಡೆಯುವಂತಹ ಸೌಲಭ್ಯಗಳನ್ನು ಪ್ರಕಟಿಸಲಾಗಿದೆ. ಸಹಕಾರ ಸಚಿವಾಲಯಕ್ಕೆ ಸರ್ಕಾರವು 2023–24ರಲ್ಲಿ ಒಟ್ಟು ರೂ. 1,150.38 ಕೋಟಿ ಅನುದಾನ ಮೀಸಲಿಟ್ಟಿದೆ. ಕಳೆದ ಬಾರಿ ರೂ. 1,624.74 ಕೋಟಿ ಅನುದಾನ ನೀಡಲಾಗಿತ್ತು. ಪ್ರಾಥಮಿಕ ಕೃಷಿ ಸಹಕಾರ ಸಂಘಗಳ ಸದಸ್ಯರು ಪಿಎಸಿಎಸ್ ಮತ್ತು ಪಿಸಿಎಆರ್‌ಡಿಬಿಎಸ್‌ನಲ್ಲಿ ಇಡುವ ನಗದು ಠೇವಣಿ ಮತ್ತು ಪಡೆಯುವ ನಗದು ಸಾಲದ ಮಿತಿಯನ್ನು ಗರಿಷ್ಠ ರೂ. 2 ಲಕ್ಷಕ್ಕೆ ಹೆಚ್ಚಿಸಿ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಸಹಕಾರಿ ವಲಯದಲ್ಲಿ ಉತ್ಪಾದನೆಯ ಬೆಳವಣಿಗೆಯನ್ನು ಉತ್ತೇಜಿಸುವ ಸಲುವಾಗಿ, ಏಪ್ರಿಲ್ ನಂತರ ಹೊಸ ▶ 9ನೇ ಪುಟಕ್ಕೆ

50 ಹೆಚ್ಚುವರಿ ವಿಮಾನ ನಿಲ್ದಾಣ, ಏರೋಡ್ರಮ್, ಹೆಲಿಪೋರ್ಟ್ ನಿರ್ಮಾಣ

ನವದೆಹಲಿ: ಪ್ರಾದೇಶಿಕ ಸಂಪರ್ಕ ಸುಧಾರಣೆಗೆ 50ಕ್ಕೂ ಹೆಚ್ಚು ವಿಮಾನ ನಿಲ್ದಾಣ, ಏರೋಡ್ರೋಮ್, ಹೆಲಿಪೋರ್ಟ್‌ಗಳನ್ನು ಸ್ಥಾಪಿಸಲಾಗುವುದು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬುಧವಾರ ಘೋಷಿಸಿದ್ದಾರೆ.

2023–24ರ ಕೇಂದ್ರ ಬಜೆಟ್ ಮಂಡನೆ ವೇಳೆ ಅವರು ಈ ಘೋಷಣೆ ಮಾಡಿದ್ದಾರೆ. ದೇಶದಾದ್ಯಂತ ಪ್ರಾದೇಶಿಕ ಸಂಪರ್ಕವನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ಉಡಾನ್ ಯೋಜನೆಗೆ ಈ ಕ್ರಮದಿಂದ ಮತ್ತಷ್ಟು ಉತ್ತೇಜನ ಸಿಗುವ ನಿರೀಕ್ಷೆಯಿದೆ. ಸಂಪರ್ಕ ವ್ಯವಸ್ಥೆಯನ್ನು ಬಲಪಡಿಸಲು 50 ಹೆಚ್ಚುವರಿ ವಿಮಾನ ನಿಲ್ದಾಣಗಳು, ಏರೋಡ್ರೋಮ್, ಹೆಲಿಪ್ಯಾಡ್‌ಗಳು ಮತ್ತು ಜಲ ಮಾರ್ಗಗಳನ್ನು ರೂಪಿಸಲಾಗುವುದು ಎಂದು ಅವರು ಹೇಳಿದರು.





ಉಚಿತ ಉಡುಗೊರೆಗಳ ಮೇಲೆ ನಿಗಾ ಇಡಿ

● ಅಧಿಕಾರಿಗಳಿಗೆ ಮುಖ್ಯ ಚುನಾವಣಾಧಿಕಾರಿ ಆದೇಶ ● ಚುನಾವಣಾ ಪೂರ್ವ 'ಉಡುಗೊರೆ' ಬಗ್ಗೆ ಮಾಧ್ಯಮಗಳ ವರದಿ ಆಧರಿಸಿ ಸೂಚನೆ

ಬೆಂಗಳೂರು, ಫೆ.1(ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ವಿವಿಧ ರಾಜಕೀಯ ಪಕ್ಷಗಳು ಜನಸಾಮಾನ್ಯರಿಗೆ ವಿವಿಧ ರೀತಿಯ ಉಚಿತ ಉಡುಗೊರೆ, ಆಮಿಷಗಳನ್ನು ಒಡ್ಡುತ್ತಿದ್ದು ಈ ಬಗ್ಗೆ ಕಾನೂನು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಮುಖ್ಯ ಚುನಾವಣಾಧಿಕಾರಿಗಳು ಆದೇಶಿಸಿದ್ದಾರೆ.

ಮುಂಬರುವ ಸಾರ್ವತ್ರಿಕ ವಿಧಾನಸಭಾ ಚುನಾವಣೆಯ ಪೂರ್ವ ಸಿದ್ಧತೆಯ ಕುರಿತು ಮುಖ್ಯ ಚುನಾವಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಅಧಿಕಾರಿಗಳು ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ಮುಖ್ಯಸ್ಥರ ಸಭೆಯನ್ನು ಇಂದು ಹಮ್ಮಿಕೊಳ್ಳಲಾಗಿತ್ತು. ಚುನಾವಣಾ ಪೂರ್ವವೇ ಉಡುಗೊರೆಗಳನ್ನು ನೀಡುತ್ತಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಗಳು ಬರುತ್ತಿವೆ. ಇದನ್ನು ಆಧರಿಸಿ, ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಮುಖ್ಯ ಚುನಾವಣಾಧಿಕಾರಿಗಳು ಸೂಚನೆ ನೀಡಿದರು.

ಮತದಾರರಿಗೆ ಮದ್ಯಪಾನ ಸೇರಿದಂತೆ ವಿವಿಧ ರೀತಿಯ ಉಡುಗೊರೆಗಳ ಆಮಿಷಗಳನ್ನು ಕೂಪನ್‌ಗಳ ಮೂಲಕ ವಿತರಿಸುತ್ತಿರುವ ಬಗ್ಗೆ ಸಹ ಮಾಧ್ಯಮಗಳ ಮೂಲಕ ವರದಿಯಾಗುತ್ತಿದೆ. ಕಳೆದ ವರ್ಷದ ಈ ಸಮಯದಲ್ಲಿ ಮಾರಾಟವಾದ ಮದ್ಯ ಹಾಗೂ ಪ್ರಸ್ತುತ ಈಗ ಮಾರಾಟವಾಗುತ್ತಿರುವ ಮದ್ಯ ಕುರಿತಂತೆ ಅಬಕಾರಿ ಇಲಾಖೆ ಕಟ್ಟುನಿಟ್ಟಿನ ನಿಗಾವಹಿಸಬೇಕು. ಅಂತರ ರಾಜ್ಯ ಚೆಕ್‌ಪೋಸ್ಟ್‌ಗಳನ್ನು ತೆರೆಯಬೇಕು. ಸಮಾಜದಲ್ಲಿ ನಡೆಯುತ್ತಿರುವ ಆಮಿಷಗಳ ಕುರಿತಂತೆ ಸಂಬಂಧಿತ ಇಲಾಖೆಗಳು ತಮ್ಮಲ್ಲಿರುವ ಮಾಹಿತಿಯನ್ನು ಅಂತರ ಇಲಾಖಾ ಮಟ್ಟದಲ್ಲಿ ಹಂಚಿಕೊಳ್ಳುವ ಮೂಲಕ ಸುಗಮ ಚುನಾವಣೆಗೆ ಎಲ್ಲರೂ ಕರ್ತವ್ಯ ನಿರ್ವಹಿಸಬೇಕು ಎಂದು ಸೂಚಿಸಿದರು. ವಿವಿಧ ಇಲಾಖೆಗಳ ಮೂಲಕ ಸ್ವೀಕರಿಸಲಾಗುವ ನೋಂದಾಯಿತ ಪ್ರಕರಣಗಳ ಕುರಿತು ಜಾರಿ ನಿರ್ದೇಶನಾಲಯ ಕ್ರಮ ಕೈಗೊಳ್ಳಲಿದೆ. ಹಣ ಮತ್ತು ಬಂಗಾರ ದಂತಹ ಬೆಲೆ ಬಾಳುವ ವಸ್ತುಗಳ ಸಾಗಾಣಿಕೆ ಮೇಲೆ ನಿಗಾ ವಹಿಸಬೇಕು. ಮಾದಕ ವಸ್ತುಗಳ ▶ 9ನೇ ಪುಟಕ್ಕೆ

ಶಾಲಾ-ಕಾಲೇಜು, ಆಸ್ಪತ್ರೆಗಳ ಬಳಿ ತಂಬಾಕು ಉತ್ಪನ್ನ ಮಾರಲು ಬಿಡಬೇಡಿ

ಪ್ರಕರಣ ದಾಖಲಿಸಿ, ಅಂಗಡಿ ಮುಚ್ಚಿಸಿ: ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಆದೇಶ

ಮೈಸೂರು,ಫೆ.1(ಆರ್‌ಕೆ)-ಶಾಲಾ-ಕಾಲೇಜು, ಆಸ್ಪತ್ರೆಗಳ 100 ಮೀ. ವ್ಯಾಪ್ತಿಯಲ್ಲಿ ತಂಬಾಕು ಹಾಗೂ ತಂಬಾಕು ಉತ್ಪನ್ನ ಮಾರಾಟ ಮಾಡಲು ಬಿಡಬೇಡಿ ಎಂದು ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಇಂದಿಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಎಲ್ಲಾ ತಾಲೂಕು, ಹೋಬಳಿ ಕೇಂದ್ರಗಳ ಶಾಲಾ-ಕಾಲೇಜು ಮತ್ತು ಆಸ್ಪತ್ರೆಗಳ ಬಳಿ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳ ಸಾಮಾನ್ಯ ಅಂಗಡಿಗಳಲ್ಲಿ ತಂಬಾಕು ಉತ್ಪನ್ನಗಳನ್ನು ರಾಜಾರೋಷವಾಗಿ ಮಾರಾಟ ಮಾಡುತ್ತಿರುವುದು ನಿಮ್ಮ ಗಮನಕ್ಕೆ ಬಂದಿಲ್ಲವೇ ಎಂದು ಪ್ರಶ್ನಿಸಿದರು.

ಕೋಟ್ಪಾ ಕಾಯ್ದೆಯನ್ವಯ ಶಾಲಾ-ಕಾಲೇಜು, ಶಿಕ್ಷಣ ಸಂಸ್ಥೆಗಳ ಸುತ್ತ 100 ಮೀ. ವ್ಯಾಪ್ತಿಯಲ್ಲಿ ಬೀಡಿ, ಸಿಗರೇಟ್ ಇನ್ನಿತರ ತಂಬಾಕು ಉತ್ಪನ್ನಗಳನ್ನು ಮಾರುವುದು, ಸೇವಿಸುವುದು ಕಾನೂನುಬಾಹಿರವಾಗಿದ್ದು, ನೀವು ಆಗಿಂದಾಗ್ಗೆ ಕಾರ್ಯಾಚರಣೆ ನಡೆಸಿ ಪ್ರಕರಣ ದಾಖಲಿಸಿ, ಅಂತಹ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿಸಬೇಕೆಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚನೆ ನೀಡಿದರು.

ಆರೋಗ್ಯ ಇಲಾಖೆಯೊಂದಿಗೆ ಇನ್ನಿತರ ಸಂಬಂಧಿಸಿದ ಇತರ ಇಲಾಖೆ ಅಧಿಕಾರಿಗಳೂ ಸಮನ್ವಯ ಸಾಧಿಸಿ ನಿಯಮಿತವಾಗಿ ದಾಳಿ ನಡೆಸಿ ಪರಿಶೀಲನೆ ಮಾಡಿ ಕೋಟ್ಪಾ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು, ನಿಮ್ಮ ಅಧಿಕಾರ ಬಳಸಿ ವಿದ್ಯಾರ್ಥಿಗಳು, ರೋಗಿಗಳಿಗೆ ತಂಬಾಕು ಉತ್ಪನ್ನಗಳು ಸಿಗದಂತೆ ಎಚ್ಚರ ವಹಿಸಬೇಕು ಎಂದ ಡಾ.ರಾಜೇಂದ್ರ, ನಮ್ಮ ಆರೋಗ್ಯ ನೋಡಿಕೊಳ್ಳುವಂತೆಯೇ ಸಾರ್ವಜನಿಕರ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಬೇಕೆಂದು ಸಲಹೆ ನೀಡಿದರು.

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ದಾಳಿ ಮಾಡಿ 65 ವಾರ್ಡ್‌ಗಳಲ್ಲೂ ಪರಿಶೀಲಿಸಲಾಗಿದ್ದು, ಈಗಾಗಲೇ 17 ಹುಕ್ಕಾ ಬಾರ್‌ಗಳನ್ನು ಬಂದ್ ಮಾಡಿಸಲಾಗಿದೆ. ಆ ಪೈಕಿ ಕೆಲವರು, ಸ್ಥಳೀಯ ಸಂಸ್ಥೆ ವಿರುದ್ಧವೇ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ನಿಮ್ಮ ತಂಬಾಕು ನಿಯಂತ್ರಣ ಕಾಯ್ದೆಯು ನಮಗೆ ಅನ್ವಯಿಸುವುದಿಲ್ಲ ಎಂದು ವಾದಿಸುತ್ತಾರೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

ನೀವು ತಂಡಗಳನ್ನು ರಚಿಸಿಕೊಂಡು ದಾಳಿ ನಡೆಸಿ, ಅಲ್ಲಿ ಏನನ್ನು ಮಾರಾಟ ಮಾಡುತ್ತಾರೆ. ಅವು ಕಾಯ್ದೆಯಡಿ ಬರುತ್ತವೆಯೇ ಇಲ್ಲವೆ ಎಂಬುದನ್ನು ನೋಡಿ. ಒಂದು ವೇಳೆ ಕಾನೂನು ಉಲ್ಲಂಘನೆಯಾಗಿದ್ದರೆ ಪ್ರಕರಣ ದಾಖಲಿಸಿ ಅಂತಹ ಅಂಗಡಿಗಳನ್ನು ಬಂದ್ ಮಾಡಿಸುವಂತೆ ಜಿಲ್ಲಾಧಿಕಾರಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂಬಂಧ ಕ್ಷಿಪ್ರ ಕಾರ್ಯಾಚರಣೆ ಮಾಡಿ ಅಗತ್ಯ ಕ್ರಮ ಕೈಗೊಂಡವರನ್ನು ಸರ್ವೋತ್ತಮ ಪ್ರಶಸ್ತಿಗೆ ಶಿಫಾರಸು ಮಾಡುತ್ತೇನೆ. ನೀವು ಪ್ರಾಮಾಣಿಕವಾಗಿ ಕೆಲಸ ಮಾಡಿ, ಏಕೆಂದರೆ ಇದು ಗಂಭೀರ ವಿಚಾರ. ನಮ್ಮ ಆರೋಗ್ಯದಂತೆಯೇ ಇತರರ ಆರೋಗ್ಯ ಎಂಬುದನ್ನು ಪರಿಗಣಿಸಿ ಕೆಲಸ ಮಾಡಿ ಎಂದು ಸಲಹೆ ನೀಡಿದರು.

ಸಿಗರೇಟ್ ಮತ್ತು ಇತರ ತಂಬಾಕು ಉತ್ಪನ್ನ ಪ್ರೋತ್ಸಾಹಿಸುವ ಜಾಹೀರಾತುಗಳ ಬಗ್ಗೆ ಎಚ್ಚರ ವಹಿಸಲಾಗುತ್ತಿದೆ. ಈಗಾಗಲೇ ಜಿಲ್ಲೆಯಾದ್ಯಂತ 1,218 ಪ್ರಕರಣ ದಾಖಲಿಸಿ 1,34,820 ರೂ. ದಂಡ ವಸೂಲಿ ಮಾಡಲಾಗಿದೆ. 2022ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ 48 ಕಡೆ ದಾಳಿ ನಡೆಸಿ 1,735 ಪ್ರಕರಣಗಳನ್ನು ಕೋಟ್ಪಾದಡಿ ದಾಖಲಿಸಿ 1,91,270 ರೂ. ದಂಡ ವಸೂಲಿ ಮಾಡಲಾಗಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ತಂಬಾಕು ನಿಯಂತ್ರಣ ಕುರಿತಾದ ಗಂಭೀರ ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಶೋಕಾಸ್ ನೋಟೀಸ್ ನೀಡಿ ಕೈಗೊಂಡ ಕ್ರಮದ ಬಗ್ಗೆ ಅನುಪಾಲನಾ ವರದಿ ನೀಡುವಂತೆ ಅಧೀನಾಧಿಕಾರಿಗಳಿಗೆ ಸೂಚಿಸಿದ ಡಾ. ರಾಜೇಂದ್ರ, ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸುವುದಾಗಿ ಎಚ್ಚರಿಸಿದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್. ಪ್ರಸಾದ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರ ರಾಜೇ ಅರಸ್, ಪಾಲಿಕೆ ಹಿರಿಯ ಆರೋಗ್ಯಾಧಿಕಾರಿ ಡಾ.ಡಿ.ಜಿ. ನಾಗರಾಜ್ ಸೇರಿದಂತೆ ಹಲವು ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.



ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಮಾತನಾಡಿದರು.

> "ಬೀಡಿ, ಸಿಗರೇಟ್, ತಂಬಾಕು ಉತ್ಪನ್ನಗಳ ಸೇವನೆ ಆರೋಗ್ಯಕ್ಕೆ ಹಾನಿಕಾರಕ ಎಂಬುದರ ಬಗ್ಗೆ ಜನಜಾಗೃತಿ ಮೂಡಿಸಿ ತಂಬಾಕು ನಿಯಂತ್ರಣ ಕಾಯ್ದೆ ಕುರಿತಂತೆ ಹೆಚ್ಚು ಪ್ರಚಾರ ಮಾಡಬೇಕು, ಪ್ರತೀ ಅಂಗಡಿಗಳಲ್ಲಿ ಬೃಹತ್ ಎಚ್ಚರಿಕೆ ಫಲಕಗಳನ್ನು ಅಳವಡಿಸುವಂತೆ ನೋಡಿಕೊಳ್ಳಬೇಕು. ಪೊಲೀಸ್, ಶಿಕ್ಷಣ, ಆರೋಗ್ಯ ಇಲಾಖೆ, ಜಿಲ್ಲಾ ಪಂಚಾಯ್ತಿ, ಮೈಸೂರು ಮಹಾನಗರ ಪಾಲಿಕೆ, ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ತಂಬಾಕು ನಿಯಂತ್ರಣ ಕುರಿತು ಜಾಗೃತಿ ಮೂಡಿಸಬೇಕು. **-ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ**



ನೇತಾಜಿನಗರ ಬಡಾವಣೆಯ ನಾಗರಿಕ ಸೌಲಭ್ಯಗಳ ಕುಂದು ಕೊರತೆಗಳನ್ನು ತಕ್ಷಣ ನಿವಾರಿಸುವಂತೆ ಬಡಾವಣೆ ನಿವಾಸಿಗಳು ಶಾಸಕ ಜಿ.ಟಿ.ದೇವೇಗೌಡರಿಗೆ ಮನವಿ ಸಲ್ಲಿಸಿದರು. ಚುನಾವಣೆಯ ನೀತಿ ಸಂಹಿತೆ ಜಾರಿಯಾಗುವ ಮುನ್ನವೇ ಬಡಾವಣೆಯ ಅಭಿವೃದ್ಧಿ ಕಾರ್ಯ ಪ್ರಾರಂಭಿಸಲು ಸಹ ಮನವಿ ಮಾಡಲಾಯಿತು. ಈ ಸಂದರ್ಭದಲ್ಲಿ ನೇತಾಜಿನಗರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಚ್.ಎಂ.ಉಮೇಶ್, ಪರಿಸರ ಬಳಗದ ಸಂಸ್ಥಾಪಕ ಸದಸ್ಯ ಪರಶುರಾಮೇಗೌಡ, ನಿವಾಸಿಗಳಾದ ನರಸಿಂಹ, ರಾಜಗೋಪಾಲ್, ಜವರೇಶ್, ಗಂಟಯ್ಯ, ಆನಂದಮೂರ್ತಿ, ಬಸಪ್ಪ, ನಾಗಪ್ಪ, ಸವಿತಾ, ಜಯಲಕ್ಷ್ಮಿ, ವನಜಾ, ಆಶಾ, ಸತೀಶ್ ಮಹಂತ, ಗಣೇಶ್ ಕಿಣಿ, ಚಂದ್ರಶೇಖರ್, ವಿನೋದಿನಿ, ಸುಜಾತ, ಚಿಕ್ಕತಾಯಮ್ಮ ಪುಟ್ಟಸ್ವಾಮಿ, ಕುಮಾರ್, ಶಿವರಾಂ ಉಪಸ್ಥಿತರಿದ್ದರು.



ಮೈಸೂರು ತಾಲೂಕಿನ ಜಯಪುರ ಗ್ರಾಮ ಪಂಚಾಯತಿ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸೋಲಿಗರ ಕಾಲೋನಿ ಜಯಮ್ಮ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಜಯಪುರ ಹೋಬಳಿ ವಿಕಾಸ ವೇದಿಕೆ ಅಧ್ಯಕ್ಷ ದಾರಿಪುರ ಡಿ.ಚಂದ್ರಶೇಖರ್, ಮಾಜಿ ಅಧ್ಯಕ್ಷೆ ಹೆಚ್.ಎನ್.ಮಹದೇವಿ, ನವೀನಮ್ಮ, ಉಪಾಧ್ಯಕ್ಷ ಬರಡನಪುರ ಬಿ.ಡಿ.ಬಸವಣ್ಣ, ಮಾಜಿ ಉಪಾಧ್ಯಕ್ಷ ಕೆಲ್ಲಹಳ್ಳಿ ಭೈರೇಶ್, ಸದಸ್ಯರಾದ ಜಯಪುರ ರೇಣುಕ, ಮಹದೇವಯ್ಯ, ಕೆಲ್ಲಹಳ್ಳಿ ಮಂಜುನಾಥ್, ಗುಮಚನಹಳ್ಳಿ ಚಿಕ್ಕಣ್ಣ, ಗ್ರಾಪಂ ಸದಸ್ಯರು ಹಾಗೂ ಮುಖಂಡರಾದ ಸೋಲಿಗರ ಕಾಲೋನಿ ನಂಜುಂಡಸ್ವಾಮಿ, ಪ್ರಭು, ಶ್ರೀನಿವಾಸ್ ಉಪಸ್ಥಿತರಿದ್ದರು.

ಮುಂದಿನ ಪಾಲಿಕೆ ಬಜೆಟ್‌ನಲ್ಲಿ ಮಡಿವಾಳ ಸಮಾಜದವರ ವೃತ್ತಿಗೆ ಪ್ರೋತ್ಸಾಹ ಧನ: ಮೇಯರ್ ಶಿವಕುಮಾರ್ ಭರವಸೆ

ಮೈಸೂರು, ಫೆ.1(ಆರ್‌ಕೆಬಿ)- ಮುಂಬರುವ ಮಹಾನಗರಪಾಲಿಕೆ ಬಜೆಟ್‌ನಲ್ಲಿ ಹಿಂದುಳಿದ ಮಡಿವಾಳ ಸಮಾಜದವರಿಗೆ ಅವರ ವೃತ್ತಿಗೆ ಅನುಗುಣವಾಗಿ ಪ್ರೋತ್ಸಾಹ ಧನ ನೀಡಲು ಅನುದಾನ ಮೀಸಲಿರಿಸಲಾಗುವುದು ಎಂದು ಮೈಸೂರು ಮೇಯರ್ ಶಿವಕುಮಾರ್ ಇಂದಿಲ್ಲಿ ಭರವಸೆ ನೀಡಿದರು.

ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಮೈಸೂರಿನ ಕಲಾಮಂದಿರದಲ್ಲಿ ಬುಧವಾರ ಆಯೋಜಿಸಿದ್ದ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. 12ನೇ ಶತಮಾನದಲ್ಲಿ ಮೂಢ ನಂಬಿಕೆಯಿಂದಾಗಿ ಶಿಕ್ಷಣ ವಂಚಿತರಾಗಿದ್ದ ಬಡವರು, ದೀನ ದಲಿತರನ್ನು ವಚನಗಳ ಮೂಲಕ ಎಚ್ಚರಿಸಿದ ಮಡಿವಾಳ ಮಾಚಿದೇವರು, ನುಡಿದಂತೆ ನಡೆದು, ನಡೆದದ್ದನ್ನು ನುಡಿದವರು ಎಂದು ತಿಳಿಸಿದರು.

ಉಪಮೇಯರ್ ಜಿ.ರೂಪಾ ಮಾತನಾಡಿ, ತಮ್ಮ ವಚನಗಳ ಮೂಲಕ ಅಸಮಾನತೆಯನ್ನು ಹೋಗಲಾಡಿಸಲು ಮಡಿವಾಳ ಮಾಚಿದೇವರು ಶ್ರಮಿಸಿದರು. ದೇವರ ನಾಮ ಸ್ಮರಿಸದಿದ್ದರೆ ಮಾನವ ಜನ್ಮ ಸಾರ್ಥಕಗೊಳಿಸಲು ಸಾಧ್ಯವಿಲ್ಲ ಎಂದು ಮಾಚಿದೇವರು ಹೇಳಿದ್ದರು ಎಂದರು.

ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಮುಖಂಡರಾದ ನಂಜಪ್ಪ, ಜಗದೀಶ್, ದ್ಯಾವಪ್ಪನಾಯಕ, ಮೈಸೂರು ಜಿಲ್ಲಾ ಮಡಿವಾಳ ಸಮಾಜದ ಪದಾಧಿಕಾರಿಗಳಾದ ಸಿಂಗರಿಶೆಟ್ಟಿ, ಮಂಜು ಬಿ.ಶೆಟ್ಟಿ, ಹನೂರು ನಾಗರಾಜು, ಜಗದೀಶ್‌ಕುಮಾರ್, ಕೇಶವ್, ಕಡಕೊಳ ನಂಜಪ್ಪ, ಕಿರಣ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಏರ್ಪಡಿಸಿದ್ದ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್ ಮಾಚಿದೇವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಯಶಸ್ವಿ ಗುರಿ ತಲುಪಿದ ಭಾರತ್ ಜೋಡೋ ಯಾತ್ರೆ

ಆರಂಭದ ದಿನದಿಂದಲೂ ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಮೈಸೂರಿನ ಡಾ. ಸುಶ್ರುತ್‌ಗೆ ಅಭಿನಂದನೆ



ಮೈಸೂರು ಫೆ.1- ರಾಹುಲ್‌ಗಾಂಧಿಯವರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಹಮ್ಮಿಕೊಂಡಿದ್ದ ಭಾರತ್ ಜೋಡೋ ಜನಜಾಗೃತಿ ಯಾತ್ರೆ ಯಶಸ್ವಿಯಾಗಿದೆ ಎಂದು ಕಾಂಗ್ರೆಸ್ ನಾಯಕರೂ ಆದ ಗೋಪಾಲಗೌಡ ಆಸ್ಪತ್ರೆಯ ನ್ಯೂರೋ ಜೋನ್‌ನ ಮುಖ್ಯಸ್ಥ ಡಾ. ಸುಶ್ರುತ್ ತಿಳಿಸಿದರು.

ನಗರದ ಶಾಂತವೇರಿಗೋಪಾಲಗೌಡ ಆಸ್ಪತ್ರೆಯಲ್ಲಿ ನಡೆದ ಸಮಾರಂಭದಲ್ಲಿ ಭಾರತ್ ಜೋಡೋ ಯಾತ್ರೆಯಲ್ಲಿ ಭಾಗವಹಿಸಿ ಮೈಸೂರಿಗೆ ಆಗಮಿಸಿದ ಅವರು, ಅಭಿನಂದನೆ ಸ್ವೀಕರಿಸಿ ಮಾತನಾಡಿದರು. ಭಾರತ್ ಜೋಡೋ ಯಾತ್ರೆ ಪಕ್ಷಾತೀತ, ಧರ್ಮಾತೀತ, ಜಾತ್ಯಾತೀತ ಯಾತ್ರೆಯಾಗಿದ್ದು, 150 ದಿನಗಳಲ್ಲಿ 3570 ಕಿ.ಮೀ. ಪಾದಯಾತ್ರೆ 13ರಾಜ್ಯ, 2 ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಂಚರಿಸಿತ್ತು. ಚಳಿ, ಮಳೆ, ಗಾಳಿ, ಬಿಸಿಲು, ಹಿಮವನ್ನು ಲೆಕ್ಕಿಸದೆ ಗುರಿ ತಲುಪಿದೆವು. ಜೋಡೋಯಾತ್ರೆಗೆ ದೇಶದಲ್ಲಿ ಆಯ್ಕೆಯಾದವರು 200 ಜನ. ರಾಜ್ಯದಿಂದ 6 ಜನ, ಅದರಲ್ಲಿ ಮೈಸೂರಿನಿಂದ ನಾನು ಸೇರಿದಂತೆ ಇಬ್ಬರು ಆಯ್ಕೆಯಾಗಿದ್ದೆವು.

ಈ ಪಾದಯಾತ್ರೆಯ ಉದ್ದೇಶ ದೇಶದಲ್ಲಿ ಕೆಲವು ರಾಜಕೀಯ ಪಕ್ಷಗಳು ಧರ್ಮದ ಹೆಸರಿನಲ್ಲಿ ಸಮಾಜವನ್ನು ಒಡೆಯುವ ಕೆಲಸ ಮಾಡುತ್ತಿದ್ದು ಇದನ್ನು ತಡೆಗಟ್ಟಲು ಜನರಲ್ಲಿ ಜಾಗೃತಿ ಮೂಡಿಸುವುದಾಗಿದೆ. ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದೆ. ಮಹಿಳೆಯರಿಗೆ ರಕ್ಷಣೆ ಇಲ್ಲದಂತಾಗಿದೆ. ಭಯೋತ್ಪಾದನೆ ಹೆಚ್ಚಾಗಿದೆ. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲೂ ಸುಧಾರಣೆ ಆಗಬೇಕಾಗಿದೆ. ಕಾಶ್ಮೀರದ ಜನರ ಪರಿಸ್ಥಿತಿಯಂತು ಚಿಂತಾಜನಕವಾಗಿದೆ. ಸರ್ಕಾರದ ಯೋಜನೆಗಳು, ಭರವಸೆಗಳೆಲ್ಲಾ ಭಾಷಣಗಳಲ್ಲಿ ಪತ್ರಿಕೆ, ದೃಶ್ಯಮಾಧ್ಯಮದ ಅಂಕಿ ಅಂಶಗಳಲ್ಲಿ ಮಾತ್ರವೇ ಉಳಿದಿವೆ. ದೇಶದ ಆರ್ಥಿಕ ಪರಿಸ್ಥಿತಿ ಅಧೋಗತಿಗಿಳಿದಿದೆ. ಇಂತಹ ಸಂದರ್ಭದಲ್ಲಿ ಭಾರತ್ ಜೋಡೋ ಯಾತ್ರೆಗೆ ಅಭೂತಪೂರ್ವ ಬೆಂಬಲ ನೀಡಿದ್ದಕ್ಕೆ ದೇಶದ ಜನತೆಗೆ ಧನ್ಯವಾದ ತಿಳಿಸಿದರು.

ಸಮಾರಂಭದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಮಾಜಿ ಮೇಯರ್‌ಗಳಾದ ಪ್ರಕಾಶ್, ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ ಸಿಂಡಿಕೇಟ್ ಮಾಜಿ ಸದಸ್ಯರಾದ ಗೋಪಿನಾಥ್, ಮಾರ್ಬಳ್ಳಿ ಕುಮಾರ್, ಕಾಂಗ್ರೆಸ್ ಮುಖಂಡರಾದ ಹರೀಶ್‌ಗೌಡ, ಬಿ.ಎಂ. ರಾಮು, ತಿವಾರಿ, ಹಳೆಕಾಮನಕೊಪ್ಪಲುಕರೀಗೌಡ, ಹರೀಶ್ ಮೊಗಣ್ಣ, ಭಾಸ್ಕರ್, ಸತ್ಯನಾರಾಯಣ್, ನ್ಯೂರೋಜೋನ್‌ನ ಆಡಳಿತಾಧಿಕಾರಿ ಧನ್ಯಾ ಸುಶ್ರುತ್, ರೇಖಾಮೂರ್ತಿ, ಯಶೋಧ, ಸುಶೀಲ ಕೇಶವಮೂರ್ತಿ, ಪಂಕಜಾಕ್ಷಿ, ಡಾ.ಉಮೇಶ್, ಡಾ.ರಘುನಾಥ್, ಡಾ.ಲಕ್ಷ್ಮೀಕಾಂತ್, ಡಾ.ಶಿವು, ಡಾ.ವಿಜಯ ಕುಮಾರ್ ಇದ್ದರು. ಡಾ.ಆನಂದ್ ಆರಾಧ್ಯ ಸ್ವಾಗತಿಸಿದರು.

ಫೆ.8ರಂದು ಮಹಾರಾಣಿ ವಿಜ್ಞಾನ ಕಾಲೇಜಲ್ಲಿ ಬೃಹತ್ ಉದ್ಯೋಗ ಮೇಳ

ಮೈಸೂರು,ಫೆ.1-ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಮತ್ತು ಸಮರ್ಥನಂ ಅಂಗವಿಕಲರ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಫೆ.8ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 2 ಗಂಟೆವರೆಗೆ ಬೃಹತ್ ಉದ್ಯೋಗ ಮೇಳವನ್ನು ನಗರದ ಮಹಾರಾಣಿ ವಿಜ್ಞಾನ ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿದೆ. 18 ವರ್ಷದಿಂದ 35 ವರ್ಷದ ಒಳಗಿನ ನಿರುದ್ಯೋಗಿ ಯುವಕ-ಯುವತಿಯರು ಸದರಿ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದಾಗಿದೆ. ಎಸ್‌ಎಸ್‌ಎಲ್‌ಸಿ ಉತ್ತೀರ್ಣ, ಪಿಯುಸಿ, ಡಿಪ್ಲೊಮಾ, ಯಾವುದೇ ಪದವಿ ವಿದ್ಯಾರ್ಹತೆ ಹೊಂದಿರುವವರು ಭಾಗವಹಿಸಬಹುದು.

ಮೇಳದಲ್ಲಿ ಭಾಗವಹಿಸುವವರು ಬಯೋಡೇಟಾದ ಕನಿಷ್ಠ 8 ಪ್ರತಿಗಳು, ಕನಿಷ್ಠ 5 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು, ಶೈಕ್ಷಣಿಕ ಅರ್ಹತೆಯ ನೆರಳಚ್ಚು (ಜೆರಾಕ್ಸ್) ಪ್ರತಿಗಳು, ಆಧಾರ್ ಕಾರ್ಡ್ ತರಬೇಕು. ಮಾಹಿತಿಗಾಗಿ ಕಾಲೇಜಿನ ಉದ್ಯೋಗ ಮಾಹಿತಿ ಕೋಶದ ಸಂಚಾಲಕ ಡಾ.ಪರಶುರಾಮ ಮೂರ್ತಿ-7829299400, ಡಾ.ಕಿರಣ್ ಕೆ.ಯು-9483032052, ಸಮರ್ಥನಂ ಸಹಾಯವಾಣಿ 080 -68333999 ಅಥವಾ 9480812121, 6364867818 ಅವರನ್ನು ಸಂಪರ್ಕಿಸಬಹುದು.

ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ

ಮೈಸೂರು,ಫೆ.1-ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಫೆ.2ರಿಂದ 9ರವರೆಗೆ ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ ಹಮ್ಮಿಕೊಳ್ಳಲಾಗಿದೆ. ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ಕೀಲುನೋವು, ಅಲರ್ಜಿ, ಚರ್ಮದ ರೋಗಗಳು, ಒತ್ತಡ, ಆತಂಕ, ಬಾಲನೆರೆ, ವಯೋಸಹಜ ಗುಣಗಳು, ದೃಷ್ಟಿಮಾಂದ್ಯ, ತಲೆನೋವು, ಕೆಮ್ಮು, ಅಸ್ತಮಾ, ಪಿಸಿಓಡಿ ಸಮಸ್ಯೆಗಳಿಗೆ ವೈದ್ಯರಿಂದ ತಪಾಸಣೆ, ಸಲಹೆ ಮತ್ತು ಚಿಕಿತ್ಸೆ ನೀಡಲಾಗುವುದು. ಶಿಬಿರವು ಬೆಳಗ್ಗೆ 9.30ರಿಂದ 4.30ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9844549152, 9741513392 ಸಂಪರ್ಕಿಸಬಹುದು.

ಫೆ.5 ಕಗ್ಗತ್ತಲೆಯ ಖಂಡದಲ್ಲಿ ಕೃತಿ ಲೋಕಾರ್ಪಣೆ

ಮೈಸೂರು,ಫೆ.1-ವೈದ್ಯವಾರ್ತಾ ಪ್ರಕಾಶನದ ಬಳಗದ ವತಿಯಿಂದ ಡಾ. ಅರಕಲಗೂಡು ನೀಲಕಂಠಮೂರ್ತಿ ಅವರ 'ಕಗ್ಗತ್ತಲೆಯ ಖಂಡದಲ್ಲಿ' ಕೃತಿ ಲೋಕಾರ್ಪಣೆ ಸಮಾರಂಭವನ್ನು ಫೆ.5ರಂದು ಬೆಳಗ್ಗೆ 11 ಗಂಟೆಗೆ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಮೈಸೂರು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಎಸ್.ರಂಗಪ್ಪ ಕಾರ್ಯಕ್ರಮ ಉದ್ಘಾಟಿಸುವರು. ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕ ಡಾ.ಸತೀಶ್‌ಕುಮಾರ್ ಎಸ್.ಹೊಸಮನಿ ಕೃತಿ ಲೋಕಾರ್ಪಣೆ ಮಾಡುವರು. ಅರಸು ಮಂಡಲಿ ಅಧ್ಯಕ್ಷ ಹೆಚ್.ಎಂ.ಟಿ.ಲಿಂಗ ರಾಜೇ ಅರಸ್ ಅಧ್ಯಕ್ಷತೆ ವಹಿಸುವರು.

ಸಿಎಫ್‌ಟಿಆರ್‌ಐ ವಿಶ್ರಾಂತ ವಿಜ್ಞಾನಿ ಕೊಳ್ಳೇಗಾಲ ಶರ್ಮ, ಚುಟುಕು ಯೋಗಾಚಾರ್ಯ ಡಾ.ಎಂ.ಜಿ.ಆರ್.ಅರಸ್ ಕೃತಿ ಕುರಿತು ಮಾತನಾಡುವರು. ಮುಖ್ಯ ಅತಿಥಿಗಳಾಗಿ ಅನ್ವೇಷಣಾ ಸೇವಾ ಟ್ರಸ್ಟ್‌ನ ಸ್ಥಾಪಕ ಅಧ್ಯಕ್ಷ ಅಮರನಾಥರಾಜೇ ಅರಸ್ ಮತ್ತು ಕೃತಿಕಾರ ಡಾ.ಅರಕಲಗೂಡು ನೀಲಕಂಠಮೂರ್ತಿ ಉಪಸ್ಥಿತರಿರುವರು.

ನಿವೇಶನ ನೀಡುವುದಾಗಿ ನಂಬಿಸಿ ನಾಲ್ವರಿಗೆ 45 ಲಕ್ಷ ವಂಚನೆ

ಕ್ರೈಂ ಬಾಕ್ಸ್

ಮೈಸೂರು,ಫೆ.1-ನಿವೇಶನ ನೀಡುವುದಾಗಿ ನಂಬಿಸಿ ನಾಲ್ವರಿಗೆ ಒಟ್ಟು 45 ಲಕ್ಷ ರೂ. ವಂಚಿಸಿರುವ ಆರೋಪದ ಮೇರೆಗೆ ಮೈಸೂರಿನ ಜ್ವಾಲಾಮುಖಿ ತ್ರಿಪುರ ಸುಂದರಿ ಸೇವಾ ಸಂಘದ ಅಧ್ಯಕ್ಷ ಎನ್.ರಾಮಚಂದ್ರ ಹಾಗೂ ಅವರ ಕುಟುಂಬದವರ ವಿರುದ್ಧ ಪ್ರಕರಣ ದಾಖಲಾಗಿದೆ. ಎನ್.ರಾಮಚಂದ್ರ, ಅವರ ಪತ್ನಿ ಆಶಾ, ಮಕ್ಕಳಾದ ಕುಲದೀಪ್ ಮತ್ತು ಪುಣ್ಯಶ್ರೀ ಆರೋಪಕ್ಕೆ ಒಳಗಾದವರಾಗಿದ್ದು, ಗಾಂಧಿನಗರದ ಗೋವಿಂದರಾಜು ಎಂಬುವರು ಇವರ ವಿರುದ್ಧ ದೂರು ದಾಖಲಿಸಿದ್ದಾರೆ.

ವಿವರ: 2010ನೇ ಸಾಲಿನಲ್ಲಿ ಜ್ವಾಲಾಮುಖಿ ತ್ರಿಪುರ ಸುಂದರಿ ಸೇವಾ ಸಂಘಕ್ಕೆ ಲಲಿತಾದ್ರಿಪುರ ಸರ್ವೆ ನಂ.30ರಲ್ಲಿ 9 ಎಕರೆ 1 ಗುಂಟೆ ಭೂಮಿ ಸರ್ಕಾರದಿಂದ ಮಂಜೂರಾಗಿತ್ತು ಎಂದು ಹೇಳಲಾಗಿದ್ದು, ಎನ್.ರಾಮಚಂದ್ರ ಅವರು ಈ ಭೂಮಿಯಲ್ಲಿ ನಿವೇಶನಗಳನ್ನು ರಚಿಸಿ ನೀಡುವುದಾಗಿ ನಂಬಿಸಿ ಹಲವರಿಂದ ಹಣ ವಸೂಲಿ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಗೋವಿಂದರಾಜು ಅವರು ನೀಡಿರುವ ದೂರಿನಲ್ಲಿ ತನ್ನ ಹಾಗೂ ಶ್ರೀನಾಥ್, ಸುಂಕಲಿಂಗೇಗೌಡ ಮತ್ತು ಶಿವಮಲ್ಲು ಎಂಬುವರಿಂದ ರಾಮಚಂದ್ರ ಒಟ್ಟು 45 ಲಕ್ಷ ರೂ.ಗಳನ್ನು ಪಡೆದಿದ್ದಾರೆ. ನಿವೇಶನ ವಿಚಾರವಾಗಿ ಕೇಳಲು ಹೋದಾಗ ಅವರು, ಅವರ ಪತ್ನಿ ಆಶಾ, ಮಕ್ಕಳಾದ ಕುಲದೀಪ್ ಮತ್ತು ಪುಣ್ಯಶ್ರೀ ಅವರುಗಳು ತಮ್ಮನ್ನು ಜಾತಿ ನಿಂದನೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ನೀಡಿರುವ ದೂರನ್ನು ದಾಖಲಿಸಿಕೊಂಡಿರುವ ಆಲನಹಳ್ಳಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಬಾಗಿಲು ಮುರಿದು ಚಿನ್ನಾಭರಣ ಕಳವು

ಮೈಸೂರು, ಫೆ. 1- ಮನೆಯ ಬಾಗಿಲು ಮುರಿದು ಚಿನ್ನಾಭರಣ ಹಾಗೂ ಬೆಳ್ಳಿ ಪದಾರ್ಥ ಕಳವು ಮಾಡಿರುವ ಘಟನೆ ಮೈಸೂರಿನ ಮಾನಸ ಗಂಗೋತ್ರಿ ಕ್ವಾರ್ಟರ್ಸ್‌ನಲ್ಲಿ ನಡೆದಿದೆ. ಮೈಸೂರು ವಿವಿ ತೋಟಗಾರಿಕಾ ವಿಭಾಗದಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿರುವ ಚೆಲುವೇಶ್(45) ಎಂಬುವರು ಮೈಸೂರು ವಿವಿ ವಸತಿ ಗೃಹದ ಎಲ್-36 ಸಂಖ್ಯೆಯ ಮನೆಯಲ್ಲಿ ವಾಸವಿದ್ದು, ಇವರು ಕುಟುಂಬ ಸಮೇತ ಜನವರಿ 26ರಂದು ಸ್ವಗ್ರಾಮವಾದ ಮೈಲಾನಾಯಕನಹಳ್ಳಿಗೆ ತೆರಳಿದ್ದು, ಜನವರಿ 29ರಂದು ರಾತ್ರಿ ಹಿಂದಿರುಗಿದಾಗ ಇವರ ಮನೆ ಬಾಗಿಲು ಮುರಿದು 6 ಗ್ರಾಂ ತೂಕದ ಚಿನ್ನಾಭರಣ ಮತ್ತು 1 ಕೆಜಿ ತೂಕದ ಬೆಳ್ಳಿ ಪದಾರ್ಥ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಜಯಲಕ್ಷ್ಮಿಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಕಾರು ಡಿಕ್ಕಿ: ಬೈಕ್ ಸವಾರ ಸಾವು

ಮೈಸೂರು,ಫೆ.1-ಅಪರಿಚಿತ ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸಾವನ್ನಪ್ಪಿದ ಘಟನೆ ಮೈಸೂರು-ತಿ.ನರಸೀಪುರ ಮುಖ್ಯ ರಸ್ತೆಯಲ್ಲಿ ಶ್ರೀ ಲಕ್ಷ್ಮಿ ಕಲ್ಯಾಣ ಮಂಟಪದ ಬಳಿ ಸಂಭವಿಸಿದೆ. ಶ್ರೀರಂಗಪಟ್ಟಣ ತಾಲೂಕು ಕ್ಯಾತನಹಳ್ಳಿ ಗ್ರಾಮದ ಜಗದೀಶ್(31) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಜನವರಿ 29ರಂದು ಸಂಜೆ 6.45ರಲ್ಲಿ ಬೈಕ್‌ನಲ್ಲಿ (ಕೆಎ 11-ಇಪಿ 9673) ವಸಂತನಗರದ ಕಡೆಯಿಂದ ತಿ.ನರಸೀಪುರ ಮುಖ್ಯ ರಸ್ತೆ ಕಡೆಗೆ ತೆರಳುತ್ತಿದ್ದಾಗ, ತಿ.ನರಸೀಪುರ ರಸ್ತೆಯಲ್ಲಿ ರಿಂಗ್ ರಸ್ತೆ ಕಡೆಯಿಂದ ವೇಗವಾಗಿ ಬಂದ ಟಾಟಾ ಕಂಪನಿಯ ಕಾರು ಇವರ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಜಗದೀಶ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಸಿದ್ಧಾರ್ಥನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.2.2023 ಗುರುವಾರ, ಮಳೆ ನಕ್ಷತ್ರ: ಶ್ರವಣ, 24.01.2023ರಿಂದ 05.02.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

- **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ತ್ರಿಣೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಬುಧವಾರ ಹಗಲು ರಾತ್ರಿ ಪೂಜೆ, ಬಲಿಪ್ರದಾನ ಉತ್ಸವ, ಸ್ಥಳ: ಶ್ರೀ ತ್ರಿಣೇಶ್ವರಸ್ವಾಮಿ ದೇವಸ್ಥಾನ, ಮೈಸೂರು ಅರಮನೆ ಆವರಣ.
- **ಶ್ರೀ ಅವಧೂತ ದತ್ತಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ವರ್ಷದ ಜನ್ಮದಿನೋತ್ಸವದ ಪ್ರಯುಕ್ತ ಸಹಸ್ರ ಚಂದ್ರ ದರ್ಶನ ಶಾಂತಿ ಹೋಮ, ಬೆಳಗ್ಗೆ 7 ಗಂಟೆಗೆ ಪವಮಾನ ಹೋಮ, ಬೆಳಗ್ಗೆ 10ಕ್ಕೆ ಸಕಲ ದೇವತಾ ಹೋಮ, ಮ. 12ಕ್ಕೆ ಶ್ರೀ ಸಚ್ಚಿದಾನಂದೇಶ್ವರ ಸ್ವಾಮಿಗೆ ಏಕಾವರ ರುದ್ರಾಭಿಷೇಕ, ಮಧ್ಯಾಹ್ನ 3ಕ್ಕೆ ರುದ್ರ ಹೋಮ, ಸಂಜೆ 7ಕ್ಕೆ ರುದ್ರ ಹೋಮ ಪೂರ್ಣಾವತಿ, ಸ್ಥಳ: ಆಶ್ರಮದ ಆವರಣ, ಊಟಿ ರಸ್ತೆ.
- **ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂ ಧರ್ಮ ಪ್ರಚಾರ ಪರಿಷತ್ ಹಾಗೂ ಶ್ರೀ ಗುರು ರಾಘವೇಂದ್ರ ಸೇವಾ ಸಮಿತಿ, ಟಿ ಕೆ ಬಡಾವಣೆ :** ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 6 ಗಂಟೆಗೆ- 'ಹರಿನಾಮ ಸಂಕೀರ್ತನೆ". ಗಾಯನ- ಕು॥ ನಾಗಶ್ರೀ ಶ್ರೀರಾಮ ಭಟ್, ಕೀ ಬೋರ್ಡ್-ರವಿಶಂಕರ್, ತಬಲಾ-ಸುಜಯೀಂದ್ರರಾವ್.
- **ಮೈಸೂರು ವಿಶ್ವವಿದ್ಯಾನಿಲಯ, ಸಂಜೆ ಕಾಲೇಜು :** ವಿಶೇಷ ಉಪನ್ಯಾಸ ಮಾಲಿಕೆ, ವಿಷಯ: ಕುವೆಂಪು ಅವರ ಸಾಹಿತ್ಯದಲ್ಲಿ ವಿಶ್ವಮಾನವ ಪರಿಕಲ್ಪನೆ, ಉದ್ಘಾಟನೆ : ಮಹಾಜನ ಕಾಲೇಜು ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ಅಧ್ಯಕ್ಷತೆ : ಮೈಸೂರು ವಿವಿ ಸಂಜೆ ಕಾಲೇಜು ಪ್ರಾಂಶುಪಾಲ ಡಾ. ಬಿ.ಎನ್. ಯಶೋಧ, ಮುಖ್ಯ ಭಾಷಣಕಾರರು : ಲೇಖಕ ಡಾ. ಎಚ್.ಆರ್.ತಿಮ್ಮೇಗೌಡ, ಉಪಸ್ಥಿತರು : ಸಂಜೆ ಕಾಲೇಜು ಅಧ್ಯಾಪಕರ ಬಳಗದ ಕಾರ್ಯದರ್ಶಿ ಡಾ.ಎನ್. ಪ್ರಕಾಶ್, ಸ್ಥಳ: ಕೊಠಡಿ ಸಂಖ್ಯೆ 21, ಹೊಸ ಕಟ್ಟಡ, ವಿವಿ ಸಂಜೆ ಕಾಲೇಜು, ಸಂಜೆ 6ಕ್ಕೆ
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜೀ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಚಿನ್ಮಯ ಮಿಷನ್ :** ಕೃಷ್ಣರಾವ್ ಪ್ರಕಾಶ್ ಅವರಿಂದ ಬದುಕು ಮತ್ತು ಜೀವನ ಕುರಿತು ಉಪನ್ಯಾಸ, ಸ್ಥಳ: ಮೈಸೂರು ಆಶ್ರಮದ ದತ್ತ ಸನ್ನಿಧಿ, ಯಜ್ಞಶಾಲೆ, ಚಿನ್ಮಯ ಮಿಷನ್, ಸಂಜೆ 6ಕ್ಕೆ.
- **ಶ್ರೀ ಚಿಕ್ಕಲಿಂಗೇಶ್ವರಸ್ವಾಮಿ ದೇವಸ್ಥಾನ :** ಶ್ರೀ ಮದ್ರಾಜಯೋಗಿ ಶ್ರೀ ಶ್ರೀ ಚಿಕ್ಕಲಿಂಗಣ್ಣಸ್ವಾಮಿಗಳವರ 86ನೇ ವರ್ಷದ ಆರಾಧನಾ ಮಹೋತ್ಸವ, ಸಂಜೆ 5.30ರಿಂದ ವಿಷ್ಣು ಸಹಸ್ರನಾಮ ಪಾರಾಯಣ, ಸಂಜೆ 6.30ರಿಂದ ವಿದುಷಿ ನಾಗಲಕ್ಷ್ಮಿ ಚಂದ್ರಶೇಖರ್ ಅವರಿಂದ ಕಾಳಿದಾಸ ವಿರಚಿತ 'ಕುಮಾರ ಸಂಭವ' ಕುರಿತು ಪ್ರವಚನ, ಸ್ಥಳ: ಶ್ರೀಚಿಕ್ಕಲಿಂಗೇಶ್ವರಸ್ವಾಮಿ ದೇವಸ್ಥಾನ, ಮಂಡಿ ಮೊಹಲ್ಲಾ.
- **ಕದಂಬ ರಂಗ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು :** ಕದಂಬ ರಾಜ್ಯ ಮಟ್ಟದ ಏಕವ್ಯಕ್ತಿ ಮಹಿಳಾ ನಾಟಕೋತ್ಸವ, ಉದ್ಘಾಟನೆ : ಹಿರಿಯ ರಂಗನಟಿ ಶ್ರೀಮತಿ ಸುಂದರಶ್ರೀ, ಅತಿಥಿಗಳು: ಹಿರಿಯ ರಂಗಕರ್ಮಿ ಶ್ರೀಮತಿ ರಾಜೇಶ್ವರಿ ವರ್ಮ, ರಂಗಾಯಣ ಉಪ ನಿರ್ದೇಶಕರಾದ ಶ್ರೀಮತಿ ನಿರ್ಮಲಾ ಮಠಪತಿ, ಉಪಸ್ಥಿತರು : ಕದಂಬ ರಂಗ ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ, ಸಂಜೆ 6.30ಕ್ಕೆ ಸಾಣೇಹಳ್ಳಿ ಗ್ರಾಮರಂಗ ಸಾಂಸ್ಕೃತಿಕ ಟ್ರಸ್ಟ್ ಕಲಾವಿದರಿಂದ ವಸುಂಧರೆ (ಭೂಮಿಯ ಅಂತರಾಳದ ಅನಾವರಣ) ನಾಟಕ ಪ್ರದರ್ಶನ, ರಚನೆ : ಹೆಚ್.ಎಸ್. ದ್ಯಾವೇಶ್, ಅಭಿನಯ : ಮಂಜುಳಾ ಬಾದಾಮಿ, ನಿರ್ದೇಶನ : ವೈ.ಡಿ. ಬಾದಾಮಿ, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.
- **ಲಯನ್ಸ್ ಇಂಟರ್‌ನ್ಯಾಷನಲ್, ಲಯನ್ಸ್ ಕ್ಲಬ್ ಆಫ್ ಮೈಸೂರು ಅಂಬಾಸಡರ್ಸ್:** ನೂತನ ಪದಾಧಿಕಾರಿಗಳಿಗೆ ಪದಗ್ರಹಣ ಸಮಾರಂಭ, ಉದ್ಘಾಟನೆ : ಲಯನ್ ಕೆ.ದೇವೇಗೌಡ, ಮುಖ್ಯ ಅತಿಥಿಗಳು : ಲಯನ್ ಡಾ.ಜಿ.ಎ.ರಮೇಶ್, ಅಧ್ಯಕ್ಷತೆ: ಎಲ್‌ಸಿಎಂಎ ಅಧ್ಯಕ್ಷ ಲಯನ್ ಎಂ.ಶಿವಕುಮಾರ್, ಸ್ಥಳ: ಹೋಟೆಲ್ ಕಲ್ಯಾಣಿ, ರಿಂಗ್ ರಸ್ತೆ, ಸಂಜೆ 7ಕ್ಕೆ.

ಮೈಸೂರಲ್ಲಿ 4 ಲಕ್ಷ ಆಸ್ತಿಗಳ ಸರ್ವೇ ಕಾರ್ಯ ಪೂರ್ಣ

ಮೈಸೂರು, ಫೆ.1(ಎಂಕೆ)– ಮೈಸೂರು ನಗರದಲ್ಲಿ 4 ಲಕ್ಷ ಆಸ್ತಿಗಳ(ಪ್ರಾಪರ್ಟಿ) ಸರ್ವೇ ಕಾರ್ಯ ಮುಗಿದಿದ್ದು, ಆಸ್ತಿ ಮಾಲೀಕರಿಗೆ ಮಾಲೀಕತ್ವ ಕಾರ್ಡ್ (ಪ್ರಾಪರ್ಟಿ ಕಾರ್ಡ್) ವಿತರಣೆ ಮಾಡಲಾಗುತ್ತಿದೆ. ಇನ್ನೂ ಶೇ.40 ರಷ್ಟು ಮಂದಿ ಮಾಲೀಕತ್ವ ಕಾರ್ಡ್ ಪಡೆದಿಲ್ಲ ಎಂದು ಭೂ ದಾಖಲೆಗಳ ಇಲಾಖೆ ಅಧೀಕ್ಷಕ ಎಂ.ವಿ.ನಾಗೇಶ್ ತಿಳಿಸಿದರು.

ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ನ್ಯಾಷನಲ್ ರಿಯಲ್ ಎಸ್ಟೇಟ್ ಡೆವಲಪ್ಮೆಂಟ್ ಕೌನ್ಸಿಲ್(ನರೆಡ್ಕೊ) ಮೈಸೂರು ವಿಭಾಗದ ವತಿಯಿಂದ ಆಯೋಜಿಸಿದ್ದ



ಸಂವಾದ ಕಾರ್ಯಕ್ರಮದಲ್ಲಿ 'ಭೂ ದಾಖಲೆಗಳ' ಕುರಿತು ಮಾತನಾಡಿದ ಅವರು, ನಗರ ಪ್ರದೇಶದಲ್ಲಿ ಆಸ್ತಿ ದಾಖಲೆ ಪತ್ರಗಳ ಡಿಜಿಟಲೀಕರಣಕ್ಕೆ 2010ರಿಂದಲೇ ಯುಪಿಒಆರ್(ಅರ್ಬನ್ ಪ್ರಾಪರ್ಟಿ ಒನರ್‌ಷಿಪ್ ರೆಕಾರ್ಡ್ಸ್) ವಿಧಾನ ಜಾರಿಗೊಂಡಿದ್ದು, ಮೈಸೂರು, ಮಂಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಪ್ರಾರಂಭಿಕವಾಗಿ ಅನುಷ್ಠಾನಗೊಳಿಸಲಾಗಿತ್ತು ಎಂದರು.

ಪ್ರಾಪರ್ಟಿ ಕಾರ್ಡ್ ಡಿಜಿಟಲೀಕೃತವಾಗಿ ಜಾಗದ ಸಮಗ್ರ ಮಾಹಿತಿಯೊಂದಿಗೆ ಕಾರ್ಡ್ ಸಿದ್ಧಪಡಿಸಲಾಗಿದ್ದರೂ ಇನ್ನೂ ಶೇ.30ರಿಂದ ಶೇ.40ರಷ್ಟು ಜನರು ಪಡೆದಿಲ್ಲ. ಸರ್ವೆ ವೇಳೆ ಮಾಲೀಕರಿಗೆ ದಾಖಲೆ ಪತ್ರ ನೀಡಲಾಗಿತ್ತು. ಅದನ್ನು ಹಾಜರುಪಡಿಸಿ ಪ್ರಾಪರ್ಟಿ ಕಾರ್ಡ್ ಅನ್ನು ಜಿಲ್ಲಾಧಿಕಾರಿ ಕಚೇರಿ ಬಳಿಯ ಭೂ ದಾಖಲೆ ಕಚೇರಿ ಕೇಂದ್ರದಿಂದ ಪಡೆಯಬಹುದು ಎಂದರು.

ನರೆಡ್ಕೊ ಮೈಸೂರು ವಿಭಾಗದ ಅಧ್ಯಕ್ಷ ಆದಿಶೇಷನ್‌ಗೌಡ ಮಾತನಾಡಿ, ರಿಯಲ್ ಎಸ್ಟೇಟ್ ಉದ್ಯಮದ ಹೊಸಬರಿಗೆ ಭೂ ದಾಖಲೆಗಳು ಹಾಗೂ ಇನ್ನಿತರ ಜಮೀನು ವಿಷಯಗಳ ಅರಿವಿಗಾಗಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ನರೆಡ್ಕೊ ಪದಾಧಿಕಾರಿಗಳಾದ ವಿ.ಸಿ.ರವಿಕುಮಾರ್, ಎನ್.ದಿವ್ಯೇಶ್, ಎಸ್.ಫಣಿರಾಜ್ ಜಿ.ಕೆ. ಸುಧೀಂದ್ರ, ಉಲ್ಲಾಸ್ ಮತ್ತಿತರರಿದ್ದರು.



ಹುಟ್ಟುಹಬ್ಬ ಆಚರಿಸಿಕೊಂಡ ಜೆಡಿಎಸ್ ಯುವ ವಕ್ತಾರರಾದ ಹೆಚ್.ಎಸ್.ರಮೇಶ್ ಅವರಿಗೆ ಎಪಿಎಂಸಿ ಮಾಜಿ ಅಧ್ಯಕ್ಷ ಎಚ್.ಎಸ್.ನಾಗರಾಜು, ಜೆಡಿಎಸ್ ಯುವ ಅಧ್ಯಕ್ಷ ಗಂಗಾಧರಗೌಡ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಂಯ ಕೋರಿದರು. ಈ ವೇಳೆ ಮುಖಂಡರಾದ ಭೈರೇಗೌಡ, ನಾಗ, ನಾಗರಾಜು, ಶಿವಲಿಂಗೇಗೌಡ, ಶುಭಾಷ್, ಪುನೀತ್‌ಗೌಡ, ಪ್ರಸನ್ನ, ರಘು, ರವಿ, ಸತೀಶ್, ಅಮೃತ್‌ಗೌಡ, ಪತ್ರಿಕಾ ವಿತರಕ ಇಲವಾಲದ ಆನಂದ್ ಇನ್ನಿತರರು ಉಪಸ್ಥಿತರಿದ್ದರು.

ಬಿಜೆಪಿಗೆ ಸಂದೇಶ್ ನಾಗರಾಜ್ ರಾಜೀನಾಮೆ

ಇಂದು ಕಾಂಗ್ರೆಸ್ ಸೇರ್ಪಡೆ ಸಂಭವ



ಮೈಸೂರು, ಫೆ.1– ವಿಧಾನ ಪರಿಷತ್ ಮಾಜಿ ಸದಸ್ಯರು, ಚಿತ್ರ ನಿರ್ಮಾಪಕರು ಹಾಗೂ ಪ್ರಸಿದ್ಧ ಉದ್ಯಮಿ ಸಂದೇಶ್ ನಾಗರಾಜ್ ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಈ ಮಧ್ಯೆ ಸಂದೇಶ್ ಅವರು ನಾಳೆ(ಗುರುವಾರ) ಕಾಂಗ್ರೆಸ್ ಸೇರುವ ಸಾಧ್ಯತೆ ಇದೆ ಎಂದು ಬಲ್ಲ ಮೂಲಗಳು ತಿಳಿಸಿವೆ. ಇತ್ತೀಚೆಗೆ ಮಾಧ್ಯಮದೊಂದಿಗೆ ಮಾತನಾಡುತ್ತಾ ಬಿಜೆಪಿ ತೊರೆಯುವ ಇಂಗಿತ ವ್ಯಕ್ತಪಡಿಸಿದ್ದರು. ಇಂದು ಬಿಜೆಪಿ ರಾಜ್ಯಾಧ್ಯಕ್ಷರಿಗೆ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ. ಎರಡು ಬಾರಿ ಜಾತ್ಯತೀತ ಜನತಾದಳದ ಮೂಲಕ ಸ್ಥಳೀಯ ಸಂಸ್ಥೆಗಳ ಮೂಲಕ ವಿಧಾನಪರಿಷತ್ ಪ್ರವೇಶಿಸಿದ್ದರು. ಆದರೆ ಆ ಪಕ್ಷದ ಕೆಲವು ಮುಖಂಡರ ವರ್ತನೆಯಿಂದ ಬೇಸತ್ತು ಪಕ್ಷದಿಂದ ಹೊರಬಂದು ಕಳೆದ ವರ್ಷವಷ್ಟೇ ಬಿಜೆಪಿ ಸೇರಿದ್ದರು.

ನೆಟ್, ಕೆ–ಸೆಟ್ ಪರೀಕ್ಷೆಗಳಿಗೆ ತರಬೇತಿ ಶಿಬಿರ

ಮೈಸೂರು,ಫೆ.1–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ನವದೆಹಲಿಯ ವಿವಿ ಧನಸಹಾಯ ಆಯೋಗದವರು ನಡೆಸಲಿರುವ ಕಿರಿಯ ಶಿಷ್ಯವೇತನ ಸಂಶೋಧಕ ಸಹಾಯಕರ (ಜೆಆರ್‌ಎಫ್) ಮತ್ತು ಪದವಿ ಕಾಲೇಜು ಸಹಾಯಕ ಪ್ರಾಧ್ಯಾಪಕರ ರಾಷ್ಟ್ರ ಮಟ್ಟದ ಅರ್ಹತಾ ಪರೀಕ್ಷೆ (ಯುಜಿಸಿ–ನೆಟ್)ಗೆ ಮತ್ತು ಕರ್ನಾಟಕ ಸರ್ಕಾರವು ನಡೆಸಲಿರುವ ರಾಜ್ಯ ಮಟ್ಟದ ಪದವಿ ಕಾಲೇಜು ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (ಕೆ–ಸೆಟ್)ಗೆ 45 ದಿನಗಳ ತರಬೇತಿ ಶಿಬಿರ ಏರ್ಪಡಿಸಲಾಗಿದೆ. ಫೆ.8ರೊಳಗೆ ಕರಾಮುವಿ ಆವರಣದಲ್ಲಿರುವ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಕಚೇರಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ವಿವರಗಳಿಗೆ ದೂ.ಸಂ 0821–2515944 ಸಂಪರ್ಕಿಸಬಹುದಾಗಿದೆ.

ಭಾರತೀಯ ವಾಯುಪಡೆ ಏರ್‌ಮನ್ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು,ಫೆ.1– ಭಾರತೀಯ ವಾಯುಪಡೆಯು ಭಾರತೀಯ ಮತ್ತು ಗೂರ್ಖಾ(ನೇಪಾಳ) ಪುರುಷ ಅಭ್ಯರ್ಥಿಗಳಿಂದ, ವೈ (ತಾಂತ್ರಿಕೇತರ) ಗುಂಪಿನಲ್ಲಿ ವೈದ್ಯಕೀಯ ಸಹಾಯಕ (Medical Assistant) ಮತ್ತು ವೈದ್ಯಕೀಯ ಸಹಾಯಕ ಫಾರ್ಮಸಿ (Medical Assistant Pharmacy) ಗುಂಪಿನಲ್ಲಿ ಏರ್‌ಮನ್ ಆಗಿ ಸೇವೆ ಸಲ್ಲಿಸಲು ನೇರ ನೇಮಕಾತಿ ರ‍್ಯಾಲಿಯನ್ನು, ಫೆ.4ರಂದು ಏರ್ ಫೋರ್ಸ್ ಸ್ಟೇಷನ್ ತಾಂಬರು ಚೆನ್ನೈನಲ್ಲಿ ಆಯೋಜಿಸಲಾಗಿದೆ. ಮಾಹಿತಿಗಾಗಿ www.airmen selection. cdac.inಗೆ ಭೇಟಿ ನೀಡಬಹುದು. ಅಥವಾ ದೂ.ಸಂಖ್ಯೆ 0821–2489972ಕ್ಕೆ ಕರೆ ಮಾಡಬಹುದು.

ಬಿಜೆಪಿಗೆ ನೇಮಕ



ಮೈಸೂರು, ಫೆ. 1– ಮೈಸೂರು ಜಿಲ್ಲಾ ಬಿಜೆಪಿ ಎಸ್‌ಟಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷರನ್ನಾಗಿ ಟಿ.ನರಸೀಪುರದ ಮಹೇಶ್ ನಾಯಕರನ್ನು ನೇಮಿಸಲಾಗಿದೆ.

ನಾಳೆ ಸಾಮಾನ್ಯ ಕೌನ್ಸಿಲಿಂಗ್ ಸಭೆ

ಮೈಸೂರು: ನಗರಪಾಲಿಕೆ ವತಿಯಿಂದ ಫೆ.3ರಂದು ಮಧ್ಯಾಹ್ನ 3ಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ 2023ನೇ ಜನವರಿ ತಿಂಗಳ ಸಾಮಾನ್ಯ ಕೌನ್ಸಿಲಿಂಗ್ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ

ಮೈಸೂರಿನಲ್ಲಿ... ಮೈ-ಸೂರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಪ್ರತಿಷ್ಠಿತ ಬಡಾವಣೆಗಳಲ್ಲಿ ಮೂಲೆ ಮತ್ತು ಮಧ್ಯಂತರ ನಿವೇಶನಗಳ ಇ–ಹರಾಜು ಪ್ರಕಟಣೆ ಸಂಖ್ಯೆ/ಮೈ.ನ.ಪ್ರಾ/ಇ.ಹ.ಪ್ರ/05/2022–23 ದಿನಾಂಕ: 31.01.2023 ರ ಪ್ರಕಟಣೆ ಹೊರಡಿಸಲು ಉದ್ದೇಶಿಸಿರುವ ವಿವರ.

1) ಇ–ಹರಾಜನ್ನು ತೆರೆಯುವ ಹಾಗೂ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 06.02.2023 ರ ಭಾರತೀಯ ಕಾಲಮಾನ 18.00 ಗಂಟೆಯ ನಂತರ
2) ಕ್ರಸಂ.1 ರಿಂದ 50 ರವರೆಗೆ ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 17.02.2023 ರ ಭಾರತೀಯ ಕಾಲಮಾನ 18.00 ಗಂಟೆವರೆಗೆ ಮತ್ತು ಇ–ಹರಾಜು ಮುಕ್ತಾಯಗೊಳ್ಳಲು ಕೊನೆಯ ದಿನಾಂಕ: 21.02.2023 ರ ಭಾರತೀಯ ಕಾಲಮಾನ 18.00 ಗಂಟೆಗೆ (ಡೆಲ್ಟಾ ಟೈಮ್ 5.00 ನಿಮಿಷ).
3) ಕ್ರಸಂ.51 ರಿಂದ 100 ರವರೆಗೆ ಇ–ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 20.02.2023 ರ ಭಾರತೀಯ ಕಾಲಮಾನ 18.00 ಗಂಟೆವರೆಗೆ ಮತ್ತು ಇ–ಹರಾಜು ಮುಕ್ತಾಯಗೊಳ್ಳಲು ಕೊನೆಯ ದಿನಾಂಕ: 22.02.2023 ರ ಭಾರತೀಯ ಕಾಲಮಾನ 18.00 ಗಂಟೆಗೆ (ಡೆಲ್ಟಾ ಟೈಮ್ 5.00 ನಿಮಿಷ).

ಕ್ರ.ಸಂ.	ಬಡಾವಣೆ ಹೆಸರು	ನಿವೇಶನ ಸಂಖ್ಯೆ	ಮಧ್ಯಂತರ/ಮೂಲೆ	ರಸ್ತೆ ಅಭಿಮುಖ ದಿಕ್ಕು ಹಾಗೂ ಅಗಲ (ಮೀ.ಗಳಲ್ಲಿ)	ಅಳತೆ ಮೀ ಗಳಲ್ಲಿ ಉ–ದ	ಅಳತೆ ಮೀ ಗಳಲ್ಲಿ ಪೂ–ಪ	ವಿಸ್ತೀರ್ಣ ಚ.ಮೀ. ಗಳಲ್ಲಿ	ನಿವೇಶನದ ಮೌಲ್ಯ (ರೂ.ಲಕ್ಷ ಗಳಲ್ಲಿ)
	ಮೂಲೆ ಹಾಗೂ ಮಧ್ಯಂತರ ನಿವೇಶನಗಳು							
	24 ಮೀ (80 ಅಡಿ) ರಸ್ತೆ							
1	ಸರಸ್ವತಿಪುರಂ ವೆಸ್ಟ್ ಆಫ್ ತೊಣಚಿಕೊಪ್ಪಲು 4ನೇ ಹಂತ	1008/ಎ	ಮೂಲೆ	ದ–ಪ24–9	(11.10+11.30)/2	12.00	134.40	84.91
2	ವಿಜಯನಗರ 4ನೇ ಹಂತ 2ನೇ ಫೇಸ್	4055	ಮೂಲೆ	ಉ–ಪ24–9	9.00	12.50	112.50	49.43
3	ವಿಜಯನಗರ 4ನೇ ಹಂತ 2ನೇ ಫೇಸ್	4056	ಮೂಲೆ	ಉ–ಪೂ24–12	10.20	18.00	183.60	80.67
4	ವಿಜಯನಗರ 4ನೇ ಹಂತ 2ನೇ ಫೇಸ್	5884	ಮೂಲೆ	ಉ–ಪೂ24–9	24.00	(6.00+19.00)/2	300.00	131.81
5	ವಿಜಯನಗರ 4ನೇ ಹಂತ 2ನೇ ಫೇಸ್	9842	ಮೂಲೆ	ಪ–ದ24–18	(11.50+22.00)/2	18.00	301.50	132.47
6	ವಿಜಯನಗರ 4ನೇ ಹಂತ 2ನೇ ಫೇಸ್	9890	ಮೂಲೆ	ಪ–ಉ24–12	17.50	(14.00+2.00)/2	140.00	61.51
7	ವಿಜಯನಗರ 4ನೇ ಹಂತ 2ನೇ ಫೇಸ್	9931	ಮೂಲೆ	ಪ–ದ24–12	17.50	(6.00+18.00)/2	210.00	92.27
8	ವಿಜಯನಗರ 4ನೇ ಹಂತ 2ನೇ ಫೇಸ್	9932	ಮೂಲೆ	ಪ–ಉ24–12	14.50	(15.00+6.00)/2	152.25	66.90
9	ವಿಜಯನಗರ 2ನೇ ಹಂತ	2939	ಮೂಲೆ	ಉ–ಪೂ24–9	24.00	(26.00+15.00)/2	492.00	259.41
	18 ಮೀ (60 ಅಡಿ) ರಸ್ತೆ							
10	ವಿಜಯನಗರ 4ನೇ ಹಂತ 2ನೇ ಫೇಸ್	4225	ಮಧ್ಯಂತರ	ಪೂರ್ವ 18.00	8.00	18.00	144.00	62.24
11	ದಟ್ಟಗಳ್ಳಿ 'ಹೆಚ್' ಬ್ಲಾಕ್ (ರಾಮಕೃಷ್ಣನಗರ)	106/ಸಿ	ಮೂಲೆ	ದ–ಪ18.00	(13.00+18.50)/2	18.00	283.50	154.19
12	ದಟ್ಟಗಳ್ಳಿ 'ಹೆಚ್' ಬ್ಲಾಕ್ (ರಾಮಕೃಷ್ಣನಗರ)	176/ಡಿ	ಮೂಲೆ	ದ–ಪ18.00	(11.80+18.00)/2	18.00	268.20	145.87
13	ರಾಮಕೃಷ್ಣನಗರ ದಟ್ಟಗಳ್ಳಿ 2ನೇ ಹಂತ 'ಹೆಚ್' ಬ್ಲಾಕ್	299	ಮೂಲೆ	ದ–ಪೂ18–9	(15.50+19.50)/2	12.00	210.00	114.21
14	ದೇವನೂರು 2ನೇ ಹಂತ 2ನೇ ಫೇಸ್	1688/7	ಮೂಲೆ	ಪೂ–ಉ18–9	6.00	9.00	54.00	16.56
15	ದೇವನೂರು 2ನೇ ಹಂತ 2ನೇ ಫೇಸ್	1688/8	ಮೂಲೆ	ಉ–ಪ18–9	6.00	9.00	54.00	16.56
16	ದೇವನೂರು 2ನೇ ಹಂತ 2ನೇ ಫೇಸ್	3065	ಮೂಲೆ	ದ–ಪೂ18–9	24.00	15.00	360.00	110.43
17	ದೇವನೂರು 3ನೇ ಹಂತ	1924	ಮಧ್ಯಂತರ	ಪೂರ್ವ18.00	12.00	18.00	216.00	52.16
18	ದೇವನೂರು 3ನೇ ಹಂತ	1972	ಮಧ್ಯಂತರ	ಪಶ್ಚಿಮ18.00	12.00	18.00	216.00	52.16
	12 ಮೀ (40 ಅಡಿ) ರಸ್ತೆ							
19	ಶ್ರೀರಾಂಪುರ 2ನೇ ಹಂತ	1782/ಎ	ಮೂಲೆ	ಪೂ–ಉ12–9	7.90	(13.25+13.40)/2	105.27	38.75
20	ನಾಚನಹಳ್ಳಿ–ಕುಪ್ಪಲೂರು 3ನೇ ಹಂತ 'ಎ' ವಲಯ	181/ಎ	ಮೂಲೆ	ದ–ಪೂ12–7.50	(2.50+5.50)/2	12.00	48.00	18.24
21	ಜೆ.ಪಿ.ನಗರ 2ನೇ ಹಂತ	803	ಮೂಲೆ	ಪೂ–ದ12.00	18.00	(8.50+5.00)/2	121.50	46.17
22	ದಟ್ಟಗಳ್ಳಿ 'ಕೆ' ಬ್ಲಾಕ್ (ರಾಮಕೃಷ್ಣನಗರ)	1213/ಎ	ಮೂಲೆ	ಉ–ಪ12.00	17.75	(9.50+20.00)/2	261.81	139.91
23	ದಟ್ಟಗಳ್ಳಿ (ರಾಮಕೃಷ್ಣನಗರ) 2ನೇ ಹಂತ 'ಐ' ಬ್ಲಾಕ್	999/ಸಿ	ಮೂಲೆ	ಉ,ದ–ಪ10–12	18.00	(0+17.00)/2	153.00	81.76
24	ರಾಮಕೃಷ್ಣನಗರ ದಟ್ಟಗಳ್ಳಿ 2ನೇ ಹಂತ 'ಹೆಚ್' ಬ್ಲಾಕ್	313	ಮೂಲೆ	ದ–ಪೂ12–9	(11.50+12.30)/2	12.00	142.80	76.31
25	ರಾಮಕೃಷ್ಣನಗರ ದಟ್ಟಗಳ್ಳಿ 2ನೇ ಹಂತ 'ಹೆಚ್' ಬ್ಲಾಕ್	520	ಮೂಲೆ	ದ–ಪ13–9	(14.50+17.50)/2	19.00	304.00	162.45
26	ದಟ್ಟಗಳ್ಳಿ 3ನೇ ಹಂತ	4907	ಮೂಲೆ	ಉ–ಪೂ12–9	4.50	12.00	54.00	27.96
27	ದಟ್ಟಗಳ್ಳಿ 3ನೇ ಹಂತ	5237	ಮೂಲೆ	ಉ–ಪೂ12.00	(18.00+22.00)/2	27.00	540.00	277.02
28	ಸರಸ್ವತಿಪುರಂ ಟಿ.ಕೊಪ್ಪಲು	910	ಮೂಲೆ	ಉ–ಪ12–9	9.00	12.00	108.00	56.43
29	ಸರಸ್ವತಿಪುರಂ ಟಿ.ಕೊಪ್ಪಲು	911	ಮೂಲೆ	ಉ–ಪೂ12–9	9.00	12.00	108.00	56.43
30	ವಿಜಯನಗರ 4ನೇ ಹಂತ 2ನೇ ಫೇಸ್	10010	ಮೂಲೆ	ಉ–ಪ12.00	12.00	(10.50+6.25)/2	100.50	42.73
31	ಹೆಬ್ಬಾಳು 1ನೇ ಹಂತ	26	ಮೂಲೆ	ಪ–ಉ 12–9	18.00	15.00	270.00	141.08
32	ಹೆಬ್ಬಾಳು 2ನೇ ಹಂತ	1418	ಮೂಲೆ	ಪ–ದ12–9	19.50	(19.00+17.00)/2	351.00	183.40
33	ಹೆಬ್ಬಾಳು 2ನೇ ಹಂತ	1443	ಮೂಲೆ	ಪ–ಉ12–9	18.00	(9.00+10.00)/2	171.00	89.35
34	ಹೆಬ್ಬಾಳು 2ನೇ ಹಂತ	1491	ಮೂಲೆ	ಪ–ಉ12–9	18.00	(14.50+19.50)/2	306.00	159.89
35	ಹೆಬ್ಬಾಳು 2ನೇ ಹಂತ	1492	ಮೂಲೆ	ಪ–ದ12–9	18.00	(19.50+22.00 +14.50)/3	336.00	175.56
36	ಹೆಬ್ಬಾಳು 2ನೇ ಹಂತ	1514	ಮೂಲೆ	ಉ–ಪ12.00	18.00	(24.50+14.50)/2	351.00	183.40
37	ಹೆಬ್ಬಾಳು 2ನೇ ಹಂತ	1515	ಮೂಲೆ	ದ–ಪ12.00	18.00	(14.50+7.00)/2	193.50	101.10
38	ದೇವನೂರು 3ನೇ ಹಂತ	1730	ಮೂಲೆ	ದ–ಪೂ12–9	12.00	18.00	216.00	51.60
39	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	666	ಮಧ್ಯಂತರ	ದಕ್ಷಿಣ12.00	12.00	9.00	108.00	31.51
40	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	668	ಮಧ್ಯಂತರ	ದಕ್ಷಿಣ12.00	12.00	9.00	108.00	31.51
41	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	671	ಮಧ್ಯಂತರ	ದಕ್ಷಿಣ12.00	12.00	9.00	108.00	31.51
	9 ಮೀ (30 ಅಡಿ) ರಸ್ತೆ							
42	ಜೆ.ಪಿ.ನಗರ 1ನೇ ಹಂತ 'ಎಫ್' ಬ್ಲಾಕ್	72	ಮೂಲೆ	ಪೂ–ಉ9.00	24.00	(18.00+19.00)/2	444.00	166.61
43	ನಾಚನಹಳ್ಳಿ–ಕುಪ್ಪಲೂರು 3ನೇ ಹಂತ 'ಸಿ' ವಲಯ	9/ಎ	ಮೂಲೆ	ಪ–ದ9.00	2.00	12.00	24.00	9.01
44	ನಾಚನಹಳ್ಳಿ–ಕುಪ್ಪಲೂರು 3ನೇ ಹಂತ 'ಸಿ' ವಲಯ	10/ಎ	ಮೂಲೆ	ಪೂ–ದ9.00	3.00	12.00	36.00	13.51
45	ನಾಚನಹಳ್ಳಿ–ಕುಪ್ಪಲೂರು 3ನೇ ಹಂತ 'ಸಿ' ವಲಯ	125/ಇ	ಮೂಲೆ	ಪ–ದ9.00	(7.00+3.50)/2	9.00	47.25	17.73
46	ನಾಚನಹಳ್ಳಿ–ಕುಪ್ಪಲೂರು 3ನೇ ಹಂತ 'ಸಿ' ವಲಯ	143/ಸಿ	ಮೂಲೆ	ಪೂ–ದ9.00	(5.30+8.50)/2	8.50	58.65	22.01
47	ನಾಚಹನಹಳ್ಳಿ–ಕುಪ್ಪಲೂರು 3ನೇ ಹಂತ 'ಡಿ' ಬ್ಲಾಕ್	99	ಮೂಲೆ	ಪ–ದ9.00	13.00	18.00	234.00	87.81
48	ಶ್ರೀರಾಂಪುರ 3ನೇ ಹಂತ	2226	ಮೂಲೆ	ಉ–ಪ9.00	2.50	12.00	30.00	10.76
49	ಶ್ರೀರಾಂಪುರ 3ನೇ ಹಂತ	2718	ಮಧ್ಯಂತರ	ಪಶ್ಚಿಮ9.00	9.00	15.00	135.00	48.09
50	ಶ್ರೀರಾಂಪುರ 3ನೇ ಹಂತ	2721	ಮಧ್ಯಂತರ	ಪಶ್ಚಿಮ9.00	9.00	15.00	135.00	48.09
51	ಶ್ರೀರಾಂಪುರ 3ನೇ ಹಂತ	2724	ಮಧ್ಯಂತರ	ಪಶ್ಚಿಮ9.00	9.00	15.00	135.00	48.09
52	ಶ್ರೀರಾಂಪುರ 3ನೇ ಹಂತ	2725	ಮಧ್ಯಂತರ	ಪಶ್ಚಿಮ9.00	9.00	15.00	135.00	48.09
53	ಶ್ರೀರಾಂಪುರ 3ನೇ ಹಂತ	2730	ಮಧ್ಯಂತರ	ಪಶ್ಚಿಮ9.00	9.00	15.00	135.00	48.09
54	ಶ್ರೀರಾಂಪುರ 3ನೇ ಹಂತ	2731	ಮಧ್ಯಂತರ	ಪಶ್ಚಿಮ9.00	9.00	15.00	135.00	48.09
55	ಶ್ರೀರಾಂಪುರ 3ನೇ ಹಂತ	2733	ಮಧ್ಯಂತರ	ಪಶ್ಚಿಮ9.00	9.00	15.00	135.00	48.09
56	ಶ್ರೀರಾಂಪುರ 3ನೇ ಹಂತ	2748	ಮಧ್ಯಂತರ	ಪೂರ್ವ9.00	9.00	17.80	160.20	57.07
57	ಶ್ರೀರಾಂಪುರ 3ನೇ ಹಂತ	2751	ಮಧ್ಯಂತರ	ಪೂರ್ವ9.00	9.00	17.80	160.20	57.07
58	ಶ್ರೀರಾಂಪುರ 3ನೇ ಹಂತ	2757	ಮಧ್ಯಂತರ	ಪೂರ್ವ9.00	9.00	16.00	144.00	51.30
59	ಶ್ರೀರಾಂಪುರ 3ನೇ ಹಂತ	2758	ಮಧ್ಯಂತರ	ಪೂರ್ವ9.00	9.00	16.00	144.00	51.30
60	ಶ್ರೀರಾಂಪುರ 3ನೇ ಹಂತ	2759	ಮಧ್ಯಂತರ	ಪೂರ್ವ9.00	9.00	16.00	144.00	51.30
61	ಚಿಕ್ಕಹರದನಹಳ್ಳಿ 1ನೇ ಹಂತ	751	ಮೂಲೆ	ಪೂ–ದ9.00	(4.50+5.50)/2	18.70	93.50	26.43
62	ದಟ್ಟಗಳ್ಳಿ 'ಕೆ' ಬ್ಲಾಕ್ (ರಾಮಕೃಷ್ಣನಗರ)	6/ಎ	ಮೂಲೆ	ಉ–ಪೂ9.00	(0.00+13.50)/2	15.40	103.95	55.06
63	ದಟ್ಟಗಳ್ಳಿ 'ಐ' ಬ್ಲಾಕ್ (ರಾಮಕೃಷ್ಣನಗರ)	21/ಬಿ	ಮೂಲೆ	ದ–ಪ9.00	18.00	(14.50+15.30)/2	268.20	142.05
64	ದಟ್ಟಗಳ್ಳಿ (ರಾಮಕೃಷ್ಣನಗರ) 2ನೇ ಹಂತ 'ಹೆಚ್' ಬ್ಲಾಕ್	529	ಮೂಲೆ	ಪೂ–ಪ–ದ9.00	4.50	(10.00+13.00)/2	51.75	27.41
65	ದಟ್ಟಗಳ್ಳಿ (ರಾಮಕೃಷ್ಣನಗರ) 2ನೇ ಹಂತ 'ಹೆಚ್' ಬ್ಲಾಕ್	534/ಎ	ಮಧ್ಯಂತರ	ಪಶ್ಚಿಮ9.00	9.00	(9.00+12.00)/2	94.50	49.83
66	ದಟ್ಟಗಳ್ಳಿ (ರಾಮಕೃಷ್ಣನಗರ) 2ನೇ ಹಂತ 'ಐ' ಬ್ಲಾಕ್	1001/ಎ	ಮೂಲೆ	ಪೂ–ದ9–10	(7.50+20.00)/2	18.00	247.50	131.08
67	ದಟ್ಟಗಳ್ಳಿ 3ನೇ ಹಂತ 2ನೇ ಘಟ್ಟ	28	ಮೂಲೆ	ಪೂ–ದ9–11.50	12.00	(8.50+19.50)/2	168.00	86.18
68	ದಟ್ಟಗಳ್ಳಿ 3ನೇ ಹಂತ 2ನೇ ಘಟ್ಟ	56/ಎ	ಮೂಲೆ	ಪ–ದ9.00	9.00	(6.00+11.30)/2	77.85	39.94
69	ದಟ್ಟಗಳ್ಳಿ 3ನೇ ಹಂತ 2ನೇ ಘಟ್ಟ	79/ಎ	ಮೂಲೆ	ಪೂ–ದ9.00	9.00	(4.40+12.50)/2	76.05	39.01
70	ದಟ್ಟಗಳ್ಳಿ 3ನೇ ಹಂತ 2ನೇ ಘಟ್ಟ	80/ಎ	ಮೂಲೆ	ಪೂ–ಉ9.00	9.90	(4.20+12.50)/2	82.66	42.40
71	ದಟ್ಟಗಳ್ಳಿ 3ನೇ ಹಂತ 2ನೇ ಘಟ್ಟ	121/ಎ	ಮೂಲೆ	ಪೂ–ದ9.00	9.00	(8.00+16.50)/2	110.25	56.56
72	ದಟ್ಟಗಳ್ಳಿ 3ನೇ ಹಂತ 2ನೇ ಘಟ್ಟ	213	ಮೂಲೆ	ಪೂ–ದ9–11.50	(5.30+20.00)/2	18.00	227.70	116.81
73	ದಟ್ಟಗಳ್ಳಿ 3ನೇ ಹಂತ 2ನೇ ಘಟ್ಟ	214	ಮೂಲೆ	ಪ–ದ9–11.50	(11.50+20.00)/2	9.50	149.62	76.76
74	ದಟ್ಟಗಳ್ಳಿ 3ನೇ ಹಂತ	3968	ಮೂಲೆ	ದ–ಪೂ9.00	(11.50+9.50)/2	18.00	189.00	96.96
75	ಹೆಬ್ಬಾಳು 1ನೇ ಹಂತ	1195/ಇ	ಮಧ್ಯಂತರ	ಉತ್ತರ9.00	12.00	9.00	108.00	51.30
76	ಹೆಬ್ಬಾಳು 1ನೇ ಹಂತ	3069/ಸಿ	ಮೂಲೆ	ಪ–ದ9.00	7.00	9.00	63.00	32.92
77	ಹೆಬ್ಬಾಳು 1ನೇ ಹಂತ	3071/ಎ	ಮೂಲೆ	ದ–ಪ9.00	(12.00+9.00)/2	6.00	63.00	32.92
78	ಹೆಬ್ಬಾಳು 2ನೇ ಹಂತ	1533	ಮೂಲೆ	ಉ–ಪೂ9.00	(8.00+10.50)/2	19.00	175.75	91.83
79	ಹೆಬ್ಬಾಳು 2ನೇ ಹಂತ	1566	ಮೂಲೆ	ಉ–ಪ9.00	(12.00+10.50)/2	17.80	200.25	104.63
80	ಹೆಬ್ಬಾಳು 2ನೇ ಹಂತ	1718	ಮೂಲೆ	ಉ–ಪ9.00	(13.20+28.00)/2	18.00	370.80	193.74
81	ದೇವನೂರು 1ನೇ ಹಂತ	794	ಮಧ್ಯಂತರ	ಪಶ್ಚಿಮ9.00	(4.00+10.00)/2	18.00	126.00	38.96
82	ದೇವನೂರು 1ನೇ ಹಂತ	1198	ಮೂಲೆ	ದ–ಪ9–6	9.00	(14.50+27.00)/2	186.75	59.61
83	ದೇವನೂರು 1ನೇ ಹಂತ	1741	ಮೂಲೆ	ಉ–ಪೂ9.00	12.00	18.00	216.00	68.95
84	ದೇವನೂರು 1ನೇ ಹಂತ	1782	ಮೂಲೆ	ದ–ಪೂ9.00	15.00	17.00	255.00	81.40
85	ದೇವನೂರು 1ನೇ ಹಂತ	2169	ಮೂಲೆ	ದ–ಪೂ9.00	9.00	(4.50+7.00)/2	51.75	16.65
86	ದೇವನೂರು 1ನೇ ಹಂತ	2133	ಮೂಲೆ	ಉ–ಪ9.00	6.50	(7.00+9.00)/2	52.00	16.60
87	ದೇವನೂರು 2ನೇ ಹಂತ 2ನೇ ಫೇಸ್	1688/5	ಮಧ್ಯಂತರ	ಪೂರ್ವ9.00	6.00	9.00	54.00	15.62
88	ದೇವನೂರು 2ನೇ ಹಂತ 2ನೇ ಫೇಸ್	2595/ಬಿ	ಮಧ್ಯಂತರ	ದಕ್ಷಿಣ9.00	(0+15.00)/2	21.00	157.50	45.56
89	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	613	ಮಧ್ಯಂತರ	ದಕ್ಷಿಣ9.00	12.00	9.00	108.00	31.24
90	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	637	ಮಧ್ಯಂತರ	ದಕ್ಷಿಣ9.00	12.00	9.00	108.00	31.24
91	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	640	ಮಧ್ಯಂತರ	ದಕ್ಷಿಣ9.00	12.00	9.00	108.00	31.24
92	ಹಂಚ್ಯಾ–ಸಾತಗಳ್ಳಿ 'ಬಿ' ವಲಯ	641	ಮಧ್ಯಂತರ	ದಕ್ಷಿಣ9.00	12.00	9.00	108.00	31.24
	6 ಮೀ (20 ಅಡಿ) ರಸ್ತೆ							
93	ಜಯನಗರ 1ನೇ ಹಂತ ಹುಡ್ಕೋ (ಕುವೆಂಪುನಗರ)	33/ಎ	ಮಧ್ಯಂತರ	ದಕ್ಷಿಣ6.50	(11.45+13.80)/2	10.10	127.51	59.79
94	ವಿಜಯನಗರ 2ನೇ ಹಂತ	4886	ಮಧ್ಯಂತರ	ಪೂರ್ವ6.00	6.00	9.00	54.00	20.52
95	ವಿಜಯನಗರ 2ನೇ ಹಂತ	4888	ಮಧ್ಯಂತರ	ಪೂರ್ವ6.00	6.00	9.00	54.00	20.52
96	ವಿಜಯನಗರ 2ನೇ ಹಂತ	4889	ಮಧ್ಯಂತರ	ಪೂರ್ವ6.00	6.00	9.00	54.00	20.52
97	ವಿಜಯನಗರ 2ನೇ ಹಂತ	4890	ಮಧ್ಯಂತರ	ಪೂರ್ವ6.00	6.00	9.00	54.00	20.52
98	ವಿಜಯನಗರ 2ನೇ ಹಂತ	4891	ಮಧ್ಯಂತರ	ಪೂರ್ವ6.00	6.00	9.00	54.00	20.52
99	ವಿಜಯನಗರ 2ನೇ ಹಂತ	5404	ಮಧ್ಯಂತರ	ದಕ್ಷಿಣ6.00	9.00	7.50	67.50	25.65
100	ವಿಜಯನಗರ 2ನೇ ಹಂತ	5405	ಮಧ್ಯಂತರ	ದಕ್ಷಿಣ6.00	9.00	7.50	67.50	25.65

ಇ–ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ

1) ಹರಾಜಿನಲ್ಲಿ ಪಾಲ್ಗೊಳ್ಳುವವರು ಭಾರತೀಯ ಪ್ರಜೆಯಾಗಿರಬೇಕು, ಭಾರತ ದೇಶದಲ್ಲಿ ನೋಂದಣಿಯಾಗಿರುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪೆನಿಗಳು/ಟ್ರಸ್ಟ್‌ಗಳು ಭಾಗವಹಿಸಬಹುದಾಗಿದೆ. 2) ಇ–ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಇ–ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು https://www.eproc.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಸಿಟಿಜನ್ ವಿಭಾಗದಲ್ಲಿ ಲಭ್ಯವಿರುವ Simplified e-auction user guide ನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. 3) ಹರಾಜಿನಲ್ಲಿ ಪಾಲ್ಗೊಳ್ಳುವವರು **https://www.eproc.karnataka.gov.in ವೆಬ್‌ಸೈಟ್ ನಿಂದ ನಿಗಧಿತ ಮಾದರಿ ಸಹಿಯ ನಮೂನೆ (ಇದರಲ್ಲಿ ಅರ್ಜಿದಾರರ ಹೆಸರು ಮತ್ತು ತಂದೆಯ ಹೆಸರನ್ನು ಕನ್ನಡ ಹಾಗೂ ಅಂಗ್ಲ ಭಾಷೆಯಲ್ಲಿ ನಮೂದಿಸುವುದು) ಹಾಗೂ ಸಂಪರ್ಕದ ಮಾಹಿತಿಯ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್‌ನಲ್ಲಿ ಅಪಲೋಡ್ ಮಾಡಬೇಕಾಗಿರುತ್ತದೆ. 4) ಇ–ಹರಾಜಿನ ಮೂಲಕ ನಿವೇಶನವನ್ನು ಜಂಟಿಯಾಗಿ ಖರೀದಿಸುವವರು ಜಂಟಿಯಾಗಿ ದಾಖಲೆಗಳನ್ನು ಇ–ಹರಾಜಿನ ಪೋರ್ಟಲ್‌ನಲ್ಲಿ ಅಪಲೋಡ್ ಮಾಡಬೇಕು. 5) ಹರಾಜಿಗೊಳಪಡಿಸಿರುವ ನಿವೇಶನಗಳು ಎಲ್ಲಿ ಹೇಗೆ ಇವೆಯೋ ಅದೇ ಸ್ಥಿತಿಯಲ್ಲಿ ಯಶಸ್ವಿ ಬಿಡ್ಡುದಾರರಿಗೆ ಹಂಚಿಕೆ ಮಾಡಲಾಗುವುದು, ಹರಾಜಿನಲ್ಲಿ ಹಂಚಿಕೆಯಾದ ನಿವೇಶನಗಳಿಗೆ ಬದಲಿ ನಿವೇಶನ ನೀಡಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ.** 6) ಪ್ರತಿ ನಿವೇಶನದ ಹರಾಜಿನಲ್ಲಿ ಕನಿಷ್ಠ ಇಬ್ಬರು ಬಿಡ್ಡುದಾರರು ಭಾಗವಹಿಸಬೇಕಾಗಿರುತ್ತದೆ. ಒಬ್ಬರೇ ಬಿಡ್ಡುದಾರರು ಇದ್ದಲ್ಲಿ ಅಂತಹ ಬಿಡ್ಡನ್ನು ತಿರಸ್ಕರಿಸಲಾಗುವುದು. 7) ಇ–ಹರಾಜಿನ ಅಂತಿಮ ದಿನಾಂಕದ ಅಂತಿಮ ಸಮಯ/ಕ್ಷಣದಲ್ಲಿ ಪ್ರಗತಿಯಲ್ಲಿರುವ ಬಿಡ್ಡುಗಳಿಗೆ ಪ್ರತಿ ಬಿಡ್ಡಿಗೆ 5 ನಿಮಿಷ ಡೆಲ್ಟಾ ಟೈಂ ಇದ್ದು, ಉದಾ: ಹರಾಜು ಅಂತ್ಯವಾಗುವ ವೇಳೆ 18.00 ಆಗಿದ್ದು, ನೀವು 17.57 ಕ್ಕೆ ಬಿಡ್ ಮಾಡಿದಾಗ 18.02 ರವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಇದು ಅಂತಿಮವಾಗುವವರೆಗೆ ವಿಸ್ತರಣೆಯಾಗುತ್ತಾ ಹೋಗುತ್ತದೆ. 8) ಹರಾಜಿಗೊಳಪಡಿಸಲ್ಪಟ್ಟಿರುವ ನಿವೇಶನ/ಮನೆಗಳ ದರ ರೂ.1.00 ಕೋಟಿಗಿಂತ ಕಡಿಮೆ ಇದ್ದರೆ ರೂ.2.00 ಲಕ್ಷ ಇ.ಎಂ.ಡಿ ಮತ್ತು ನಿವೇಶನ/ಮನೆಗಳ ದರ ರೂ.1.00 ಕೋಟಿ ಹಾಗೂ ಅಧಿಕವಿದ್ದಲ್ಲಿ ರೂ.4.00 ಲಕ್ಷ ಇ.ಎಂ.ಡಿ ಶುಲ್ಕವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ICICI ಬ್ಯಾಂಕ್‌ಗೆ DEBIT CARD/CREDIT CARD/NET BANKING ಮೂಲಕ ಅಥವಾ ಡಿಡಿ/ ಚಲನ್ ಮೂಲಕ ಪಾವತಿಸಬೇಕಾಗಿರುತ್ತದೆ. ಇದರೊಂದಿಗೆ ಹರಾಜು ಸೇವಾ ಶುಲ್ಕವನ್ನು ಬಿಡ್ಡುದಾರರೇ ಭರಿಸತಕ್ಕದ್ದು. 9) ರೂ.1.00 ಕೋಟಿಗಿಂತ ಕಡಿಮೆ ಮೌಲ್ಯದ ನಿವೇಶನಗಳಿಗೆ ಕನಿಷ್ಠ ಬಿಡ್ ಏರಿಕೆ ಮೊತ್ತ ರೂ.10,000/– ಮತ್ತು ರೂ.1.00 ಕೋಟಿ ಹಾಗೂ ಮೇಲ್ಪಟ್ಟ ಮೌಲ್ಯದ ನಿವೇಶನಗಳಿಗೆ ರೂ.1,00,000/–ಗಳಾಗಿರುತ್ತದೆ. 10) ಅತ್ಯಧಿಕ ಮೊತ್ತದ ಬಿಡ್ಡುದಾರರು ಬಿಡ್ ಅಂಗೀಕೃತವಾದ ಬಗ್ಗೆ https://www.eproc.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿಕೊಂಡು ಬಿಡ್ ಮೌಲ್ಯದ ಶೇ.25 ರಷ್ಟು ಹಣವನ್ನು ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಅಥವಾ ಡಿ.ಡಿ ಮೂಲಕ (ಇ.ಎಂ.ಡಿ. ರೂ.4.00 ಲಕ್ಷ ಅಥವಾ ರೂ.2.00 ಲಕ್ಷ ಹೊರತು ಪಡಿಸಿ) ಬಿಡ್ಡು ಅಂಗೀಕರಿಸಿದ 72 ಗಂಟೆಯೊಳಗಾಗಿ ಖಾತೆದಾರರು ಆಯುಕ್ತರು, ಮೈ.ನ.ಪ್ರಾ, ಮೈಸೂರು ರವರ ಹೆಸರಿನಲ್ಲಿರುವ **Commissioner MUDA Mysore, Bank of Baroda, Account No.89260100004660 (IFSC Code No. BARB0VJMUDA, 5ನೇ ಅಕ್ಷರ ಸೊನ್ನೆ ಆಗಿರುತ್ತದೆ)**, ಖಾತೆಗೆ ವರ್ಗಾವಣೆ/ಪಾವತಿ ಮಾಡಬಹುದಾಗಿರುತ್ತದೆ ಹಾಗೂ ಡಿ.ಡಿ.ಯನ್ನು ಸಹ ಪಡೆದು ಸಲ್ಲಿಸಬಹುದಾಗಿರುತ್ತದೆ. ಶೇಕಡ 25 ರಷ್ಟು ಹಣ ಪಾವತಿಸಿದ ಬಗ್ಗೆ ದಾಖಲಾತಿ ಒದಗಿಸುವ ಸಂದರ್ಭದಲ್ಲಿ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಸಲ್ಲಿಸುವುದು. ಯಶಸ್ವಿ ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 25 ಭಾಗ ಹಣ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. **11) ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹಿಂಪಡೆಯುವ ಹಕ್ಕನ್ನು ಮೈ.ನ.ಪ್ರಾ. ಕಾಯ್ದಿರಿಸಿಕೊಂಡಿದೆ. 12) ಹರಾಜಾದ ನಿವೇಶನಗಳನ್ನು 1991ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂಲೆ ಮತ್ತು ವಾಣಿಜ್ಯ ನಿವೇಶನಗಳ ಹಂಚಿಕೆ) ನಿಯಮ ಕಲಂ 6(2) ರನ್ವಯ ಅಂತಿಮ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು, ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರು ಹೊಂದಿರುತ್ತಾರೆ. 13) ಇ–ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಂಡ ನಂತರ ಇ.ಎಂ.ಡಿ ಮೊತ್ತವನ್ನು www.eproc.karnataka.gov.in ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿ ಮಾಡಲು ಕ್ರಮವಹಿಸುತ್ತಾರೆ.** 14) ಬಿಡ್ಡುದಾರರಿಗೆ ಬಿಡ್ಡಿನಲ್ಲಿ ಅಂತಿಮಗೊಂಡ ನಿವೇಶನಗಳನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಒಟ್ಟು ವಿಸ್ತೀರ್ಣದಲ್ಲಿ ಕಡಿಮೆ ಇದ್ದಲ್ಲಿ ಪಾವತಿಸಲ್ಪಟ್ಟಿರುವ ಹೆಚ್ಚುವರಿ ಮೊತ್ತವನ್ನು ಮರುಪಾವತಿಸಲಾಗುವುದು ಹಾಗೂ ಹೆಚ್ಚುವರಿ ವಿಸ್ತೀರ್ಣವಿದ್ದಲ್ಲಿ, ಸದರಿ ವಿಸ್ತೀರ್ಣಕ್ಕೆ ಹೆಚ್ಚುವರಿ ಹಣ ಪಾವತಿಸಲು ತಿಳುವಳಿಕೆ ನೀಡಲಾಗುವುದು. ಇದಕ್ಕೆ ಬಿಡ್ಡುದಾರರು ಒಪ್ಪದಿದ್ದಲ್ಲಿ ಸದರಿಯವರು ಪಾವತಿಸಿರುವ ಶೇ.25 ರಷ್ಟು ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ಹರಾಜನ್ನು ರದ್ದುಗೊಳಿಸಲಾಗುವುದು. 15) ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 75 ರಷ್ಟು ಹಣವನ್ನು ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಪಾವತಿಸಿದ ನಂತರ ಹಣ ಪಾವತಿಸಿರುವ ರಸೀದಿ ಪ್ರತಿಯೊಂದಿಗೆ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸುವುದು. 16) ಬಿಡ್ಡುದಾರರಿಗೆ ಬಿಡ್ಡು ಮೊತ್ತದ ಉಳಿಕೆ ಶೇ.75 ರಷ್ಟು ಮೊತ್ತ ಪಾವತಿಸಲು ಬಡ್ಡಿರಹಿತವಾಗಿ ಹರಾಜು ಸ್ಥಿರೀಕರಣ ಪತ್ರ ಸ್ವೀಕರಿಸಿದ ದಿನಾಂಕದಿಂದ 45 ದಿವಸಗಳು ಅವಕಾಶವಿದ್ದು, ನಂತರದ 90 ದಿನಗಳ ಅವಧಿಗೆ ಶೇ.18 ರ ಬಡ್ಡಿ ದರದಲ್ಲಿ ಹಾಗೂ ತದನಂತರದ 30 ದಿನಗಳ ಅವಧಿಗೆ ಶೇ.21 ರ ಬಡ್ಡಿ ದರದಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಪಾವತಿಸಲು ಅವಕಾಶವಿರುತ್ತದೆ. 17) ನಿವೇಶನಗಳ ಸ್ಥಳ ಮಾಹಿತಿ, ಅಭಿಮುಖ, ರಸ್ತೆ ಅಳತೆ ಇನ್ನಿತರೆ ವಿವರಗಳನ್ನು https://www.eproc.karnataka.gov.in ಅಥವಾ www.mudamysore.gov.in ವೆಬ್‌ಸೈಟ್‌ನಿಂದ ತಿಳಿದುಕೊಳ್ಳಬಹುದಾಗಿರುತ್ತದೆ ಅಥವಾ ದೂರವಾಣಿ ಸಂಖ್ಯೆ– 0821–2421629 ಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ. 18) ನಿವೇಶನಗಳ ಸ್ಥಳದ (Location) ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬೇಕಾದ ಅಭಿಯಂತರರ ವಿವರ –ಅ) ವಲಯ ಕಛೇರಿ–1 – 1. ಶ್ರೀರಾಂಪುರ 2ನೇ ಮತ್ತು 3ನೇ ಹಂತ ಬಡಾವಣೆ – ಶ್ರೀ.ಪ್ರಸಾದ್, ಸ.ಅ., ಮೊಬೈಲ್ ನಂ.9880434585, 2. ಹಂಡುವಿನಹಳ್ಳಿ (ನಂಜನಗೂಡು), ನಂಜನಗೂಡು ಬಸವನಗುಡಿ ಬ್ಲಾಕ್, ಬೆಸ್ತರ್ ಬ್ಲಾಕ್‌ಬಡಾವಣೆ, ಚಿಕ್ಕಹರದನಹಳ್ಳಿ – ಶ್ರೀ. ಲೋಕೇಶ್, ಸ.ಅ., ಮೊಬೈಲ್ ನಂ.9972431398. ಆ) ವಲಯ ಕಛೇರಿ–2 – ದಟ್ಟಗಳ್ಳಿ 3ನೇ ಹಂತ– ಶ್ರೀ. ಲೋಹಿತ್, ಸ.ಅ., ಮೊಬೈಲ್ ನಂ.9632294840 ಮತ್ತು ಶ್ರೀ. ದೇವೇಂದ್ರ, ಸ.ಅ., ಮೊಬೈಲ್ ನಂ.8495049246.ಇ) ವಲಯ ಕಛೇರಿ–3 – ವಿಜಯನಗರ 4ನೇ ಹಂತ ಬಡಾವಣೆ – ಶ್ರೀ. ನಂದೀಶ್, ಸ.ಅ., ಮೊಬೈಲ್ ನಂ..9845153643.ಈ) ವಲಯ ಕಛೇರಿ–4– ಹೆಬ್ಬಾಳು 1, 2 ಮತ್ತು 3ನೇ ಹಂತ ಬಡಾವಣೆ, ವಿಜಯನಗರ 2ನೇ ಹಂತ ಬಡಾವಣೆ – ಶ್ರೀ.ಪುಟ್ಟನಾಗರಾಜು, ಸ.ಅ., ಮೊಬೈಲ್ ನಂ.9886975792 ಮತ್ತು ಶ್ರೀ. ಸಂಪತ್ ಕುಮಾರ್, ಸ.ಅ., ಮೊಬೈಲ್ ನಂ.9343530052. ಉ) ವಲಯ ಕಛೇರಿ–5ಬಿ – ದೇವನೂರು 1, 2 & 3ನೇ ಹಂತ – ಶ್ರೀ. ರಾಜಶೇಖರ್, ಕಿ.ಅ., ಮೊಬೈಲ್ ನಂ.9880929640, ಊ) ವಲಯ ಕಛೇರಿ–7 – ದಟ್ಟಗಳ್ಳಿ 2ನೇ ಹಂತ ಎಲ್ಲಾ ಬ್ಲಾಕ್ (ರಾಮಕೃಷ್ಣನಗರ) – ಶ್ರೀ. ಹೆಚ್.ಇ.ನಾಗರಾಜ್, ಸ.ಅ., ಮೊಬೈಲ್ ನಂ.9448673434 ಮತ್ತು ಶ್ರೀ. ಕಾಂತರಾಜ್ ಆಚಾರಿ, ಸ.ಅ., ಮೊಬೈಲ್ ನಂ.8660240351.ಎ) ವಲಯ ಕಛೇರಿ–8 – ಸಾತಗಳ್ಳಿ 1ನೇ & 2ನೇ ಹಂತ, ಹಂಚ್ಯಾ–ಸಾತಗಳ್ಳಿ 'ಬಿ' ವಲಯ ಬಡಾವಣೆ – ಶ್ರೀ. ಚೇತನ್‌ಬಾಬು..ಎಂ, ಸ.ಅ., ಮೊಬೈಲ್ ನಂ.9008071575 ಮತ್ತು ಶ್ರೀ. ಪ್ರಸಾದ್, ಸ.ಅ., ಮೊಬೈಲ್ ನಂ.9880434585

ಸಹಿ/– ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ನಕ್ಕರೆ ಅದೇ ಸ್ವರ್ಗ

ಪ್ರಯಾಣಿಕ : ಚಿಲ್ಲರೆಯನ್ನೇ ಕೊಡಲಿಲ್ಲ. 50 ರೂ. ಕೊಟ್ಟು ಆಟೋ ಮಾಡ್ಕೊಂಡು ನಿಮ್ಮ ಬಸ್ ಹಿಡಿದದ್ದಾಯಿತು.
ಕಂಡಕ್ಟರ್ : ಆಯ್ತು ಚಿಲ್ಲರೆ ಎಷ್ಟು ಕೊಡಬೇಕು?
ಪ್ರಯಾಣಿಕ : 3 ರೂಪಾಯಿ!"

ಮೈಸೂರು ಮಿತ್ರ

ಗುರುವಾರ, 2 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಕಂಡದ್ದನ್ನು ಬಯಸುವುದೇ ಕಾಮ. ಬಯಸಿದ್ದು ಸಿಗದಾಗ ಉಂಟಾಗುವುದೇ ಕ್ರೋಧ ದೊರೆತರೂ ಇನ್ನಷ್ಟು ಬೇಕೆಂಬುದೇ ಲೋಭ ಇನ್ನಷ್ಟು ದೊರೆತಾಗ, ಕೈಬಿಟ್ಟು ಹೋಗಬಾರದೆಂಬುದೇ ಮೋಹ. ತನ್ನ ಬಳಿ ಮಾತ್ರ ಇದೆ ಎಂಬ ಜಂಭವೇ ಮದ. ತನ್ನಲ್ಲಿರುವುದು ಬೇರೊಬ್ಬನಲ್ಲಿ ಇದೆ ಎಂದು ತಿಳಿದುಬಂದಾಗ ಉಂಟಾಗುವುದೇ ಮತ್ಸರ.

–ಶ್ರೀಕೃಷ್ಣ ಪರಮಾತ್ಮ ಬೋಧೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪಂಜರದಲ್ಲಿ ಕಾಗೆ ಇಟ್ಟರೆ ಪಂಚಮ ಸ್ವರ ಕೊಟ್ಟೀತೆ?

ನಿಮ್ಮ ಪತ್ರಗಳು

ಮಾಲ್ಗುಡಿ ಎಕ್ಸ್‌ಪ್ರೆಸ್‌ನಲ್ಲಿ ತಪ್ಪು ಬೋಗಿ ನಂಬರ್‌ನಿಂದ ಗೊಂದಲ



ಮಾನ್ಯರೇ,

ಪ್ರತಿದಿನ ಮೈಸೂರಿನಿಂದ ಬೆಂಗಳೂರಿಗೆ ಚಲಿಸುವ ಮಾಲ್ಗುಡಿ ಎಕ್ಸ್‌ಪ್ರೆಸ್ ರೈಲಿನ ಹವಾನಿಯಂತ್ರಿತ ಬೋಗಿಗೆ ಬೇಡಿಕೆ ಇದ್ದೇ ಇದೆ. ಹೀಗಾಗಿ ರೈಲ್ವೆ ತನ್ನ 'ಸ್ಲೀಪರ್' ಬೋಗಿಯನ್ನೇ 'ಚೇರ್ ಕಾರ್' ಬದಲು ಬಳಸುತ್ತಿದೆ.

ರೈಲ್ವೆ ತನ್ನ ಮುಂಗಡ ಬುಕ್ಕಿಂಗ್ ವ್ಯವಸ್ಥೆಯಲ್ಲಿ ಬೋಗಿ ಸಂಖ್ಯೆ ಅ1, ಅ2 ಇತ್ಯಾದಿ ತೋರಿಸಿದರೆ ವಾಸ್ತವದಲ್ಲಿ ಬಂದಾಗ ಬೋಗಿ ಸಂಖ್ಯೆ S1, S2 ಕಾಣಿಸುತ್ತದೆ. ಇದರಿಂದ ಪ್ರಯಾಣಿಕರು B1, B2ಗಾಗಿ ಅರಸುತ್ತಾ ಸಾಗುವ ಅಥವಾ ಗೊಂದಲಕ್ಕೊಳಗಾಗುವ ಸನ್ನಿವೇಶ ಸೃಷ್ಟಿಯಾಗುತ್ತಿದೆ. ವಯೋವೃದ್ಧರು ಅಥವಾ ಲಗೇಜ್‌ನೊಂದಿಗೆ ಬಂದ ಕುಟುಂಬದವರಿಗೆ ಇದರಿಂದ ಅತೀ ಧಾವಂತ ಹಾಗೂ ಆತಂಕ. ರೈಲ್ವೆ ತನ್ನ ಎಲ್‌ಇಡಿ ಫಲಕದಲ್ಲಿ C1, B1 ಎಂದು ಪ್ರದರ್ಶಿಸುವ ಮೂಲಕ ತೇಪೆ ಹಚ್ಚುವ ಕೆಲಸ ಮಾಡಿದ್ದರೂ, ದೃಢೀಕರಣಕ್ಕಾಗಿ ಪ್ರಯಾಣಿಕರು ಟಿ.ಟಿ.ಯೆಡೆ ಹೋಗುವ ದೃಶ್ಯ ಪ್ರತೀ ದಿನ ಸಾಮಾನ್ಯ. ಟಿ.ಟಿ. ಸೂಕ್ತವಾಗಿ ಸಹಕರಿಸಿ ಮಾರ್ಗದರ್ಶನ ನೀಡುತ್ತಿದ್ದರೂ, ರೈಲ್ವೆ ಪ್ರಯಾಣಿಕರ ಹಿತದೃಷ್ಟಿಯಿಂದ ದಿನನಿತ್ಯದ ಗೊಂದಲಕ್ಕೆ ಮಂಗಳಹಾಡಲಿ.

–ಅನಿಲ್ ಕುಮಾರ್ ನಾಡಿಗೇರ್, ಇಂಧನ ಹಾಗೂ ಪರಿಸರ ಸಲಹೆಗಾರರು, ಮೈಸೂರು.

ಶಬ್ದ ನಿಷೇಧ ಸೂಚನಾ ಫಲಕ ಅಳವಡಿಸಿ



ಮಾನ್ಯರೆ,

ಮೈಸೂರಿನ ಕುವೆಂಪುನಗರದ ಗ್ರಂಥಾಲಯದಲ್ಲಿ ಪ್ರತಿದಿನ ವಿದ್ಯಾರ್ಥಿಗಳು, ಓದುಗರು ಸಾಕಷ್ಟು ಸಂಖ್ಯೆಯಲ್ಲಿ ಬರುತ್ತಾರೆ. ಗ್ರಂಥಾಲಯದ ಮುಂದೆ ಮುಖ್ಯ ರಸ್ತೆ ಇರುವುದರಿಂದ ಹಲವಾರು ವಾಹನಗಳು ಓಡಾಡುತ್ತವೆ. ಇಂತಹ ವಾಹನಗಳು ಕರ್ಕಶವಾದ, ಭಾರೀ ಸದ್ದಾಗುವ ಹಾರ್ನ್ ಮಾಡುವುದರಿಂದ ಓದುಗರಿಗೆ ತೊಂದರೆಯಾಗುತ್ತಿದೆ. ರಸ್ತೆಯಲ್ಲಿ ಓಡಾಡುವುದನ್ನು ನಿಲ್ಲಿಸಿ ಅಂತಲ್ಲ. ಆದಷ್ಟು ಹಾರ್ನ್ ಮಾಡುವುದನ್ನು ಕಮ್ಮಿ ಮಾಡುವಂತೆ ಸೂಚನಾ ಫಲಕವನ್ನು ಅಳವಡಿಸಬೇಕೆಂದು ಮನವಿ. –ಮಹಾಂತೇಶ್ ಬಸಪ್ಪ, ಬಳ್ಳೂರುಹುಂಡಿ, ನಂಜನಗೂಡು ತಾ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಟೋಲ್‌ನಲ್ಲಿ ಉಲ್ಟಾ ಅಂಕಿ

ಮಾನ್ಯರೇ



ಮೈಸೂರು–ಬೆಂಗಳೂರು ದಶಪಥ ರಸ್ತೆ ಇದೀಗ ಚಾಲ್ತಿಯಲ್ಲಿರುವ ವಿಷಯ. ಈ ರಸ್ತೆಯಲ್ಲಿ ಎರಡು ಟೋಲ್ ಸಂಗ್ರಹಗಳು ಬರುತ್ತವೆ. ಆದರೆ, ರಾಜ್ಯದ ಇತರ ಹೆದ್ದಾರಿಗಳ ಟೋಲ್‌ಗಳಲ್ಲಿ ಬೂತ್ ಸಂಖ್ಯೆ 1,2,3 ಎಂದು ಬಲದಿಂದ ಎಡಕ್ಕೆ ಬರೆದಿದ್ದರೆ, ಈ ದಶಪಥ ರಸ್ತೆಯಲ್ಲಿ ಮಾತ್ರ ಉಲ್ಟಾ ಅಂದರೆ ಬಲದಿಂದ ಎಡಕ್ಕೆ 1, 2, 3 ಎಂದಿದೆ ಬಹುಶಃ ಇದರ ಕಾಮಗಾರಿಯನ್ನು ತೆಗೆದುಕೊಂಡವರಿಗೆ ಹೇಗೆ, ಯಾವ ಕಡೆಯಿಂದ ಬರೆಯಬೇಕೆಂಬ ಅರಿವಿಲ್ಲ. ಹಾಗಾಗಿ ಹೀಗೆ ಉಲ್ಟಾ ಬರೆದಿರಬಹುದೇ? ಹಾಗೆಯೇ ಮೈಸೂರು ಹೊರವಲಯದ ಕಳಸ್ತವಾಡಿಯ ಬಳಿ ಮೈಸೂರು ಪ್ರವೇಶ ಕಮಾನಿಗೆ ಕಾಲಸ್ತವಡಿ ಎಂದೂ ತಪ್ಪಾಗಿ ಬರೆಯಲಾಗಿದೆ. –ವಿಜಯ್ ಹೆಮ್ಮಿಗೆ, ಮೈಸೂರು

ಕ್ಯಾಮರಾ v/s ಕುವೆಂಪು: ರಸಋಷಿಗೆ ಸಲ್ಲಿಸುವ ಕಾಣಿಕೆ

ಮಾನ್ಯರೆ,

ಕೃಪಾಕರ ಮತ್ತು ಸೇನಾನಿ ಅವರು ಹೊರತಂದಿರುವ ಕ್ಯಾಮರಾ v/s ಕುವೆಂಪು ಚಿತ್ರಪಟ ಸಂಪುಟ ತುಂಬಾ ಅದ್ಭುತವಾಗಿ ಮೂಡಿಬಂದಿದೆ. ಸಂಪುಟದಲ್ಲಿ ಇರುವ ಚಿತ್ರಗಳು ಮತ್ತು ಸಂಕ್ಷಿಪ್ತ ಮಾಹಿತಿ ಪ್ರತಿಯೊಬ್ಬರ ಮನವನ್ನು ಮುಟ್ಟುತ್ತವೆ ಮತ್ತು ಸೆಳೆಯುತ್ತವೆ. ಮಾನಸಗಂಗೋತ್ರಿಯ ಬಿ.ಎಂ.ಶ್ರೀ.ಸಭಾಂಗಣದಲ್ಲಿ ಪುಸ್ತಕ ಬಿಡುಗಡೆ ಮಾಡಿದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಮಾತನಾಡುತ್ತಾ ಶಿಸ್ತು, ಸಮಯ ಪಾಲನೆಗೆ ಮತ್ತು ಬರೆದ ಹಾಗೆಯೇ ಬದುಕಿದ ದಾರ್ಶನಿಕ ಕವಿಯ ಭಾವನೆ ಮತ್ತು ಸಂವೇದನೆಗಳು ಈ ಸಂಪುಟದಲ್ಲಿವೆ. ಇಂತಹ ವಿಶಿಷ್ಟವಾದ ಪುಸ್ತಕ ಕುವೆಂಪು ಅವರಿಗೆ ಸಲ್ಲಿಸಬಹುದಾದ ಕಾಣಿಕೆ. ನಟ ಪ್ರಕಾಶ್ ರಾಜ್ ಮಾತನಾಡಿ, ಕಾವ್ಯ, ಸಾಹಿತ್ಯ, ಕಾದಂಬರಿ, ಕಥೆಯ ಪ್ರಕಾರಗಳೊಂದಿಗೆ ಈ ಪುಸ್ತಕ ವಿಭಿನ್ನ, ಲೇಖಕರು ನೋಡಿದ ಕಣ್ಣುಗಳು ಬಹಳ ಆಸಕ್ತಿ ಎನಿಸಿ ಆಳವಾದ ನೋಟ, ನೋಡುವ ದೃಷ್ಟಿಯನ್ನು ಕಲಿಸಿದೆ ಎಂದು ತಿಳಿಸಿದರು. ಪುಸ್ತಕ ಪ್ರಕಾಶನದ ಬಿ.ಎನ್.ಶ್ರೀರಾಮ್ ಅವರು ಕುವೆಂಪು ಅವರ ವ್ಯಕ್ತಿಚಿತ್ರ ಮತ್ತು ವ್ಯಕ್ತಿತ್ವವನ್ನು ಅರ್ಥಪೂರ್ಣವಾಗಿ ಹಿಡಿದಿಟ್ಟಿದ್ದು, ಈ ಪುಸ್ತಕ ಸಂಚಲನ ಮೂಡಿಸಿದೆ ಎಂದು ಹೇಳಿದರು.

ಕೃಪಾಕರ ಮತ್ತು ಸೇನಾನಿ ಅವರು ಪಟ್ಟಿರುವ 30 ವರ್ಷಗಳ ಪರಿಶ್ರಮ ಫಲಪ್ರಾಯಕವಾಗಿದೆ. ಎಲ್ಲಾ ಕನ್ನಡಿಗರೂ ಈ ಪುಸ್ತಕದಲ್ಲಿ ಇರುವ ಚಿತ್ರಗಳನ್ನು ನೋಡಿ ಆನಂದಿಸಿ ಮಾಹಿತಿಯನ್ನು ಓದಿದರೆ ಕುವೆಂಪು ಅವರು ನಮಗೆ ಇನ್ನು ಹತ್ತಿರವಾಗುತ್ತಾರೆ. ಕುವೆಂಪು ಅವರ ಬಗ್ಗೆ ಸಾಕ್ಷ್ಯ ಚಿತ್ರ ಮಾಡಲು ಸಾಧ್ಯವಾಗಲಿಲ್ಲ ಎಂಬ ಲೇಖಕರ ಕೊರಗನ್ನು ಈ ಚಿತ್ರಪಟ ಸಂಪುಟ ಮರೆಸುವುದರಲ್ಲಿ ಯಾವುದೇ ಸಂಶಯವಿಲ್ಲ. ಇಂತಹ ಸುಂದರವಾದ ಚಿತ್ರಪಟ ಸಂಪುಟ ತಂದಿರುವ ಲೇಖಕರು ಅಭಿನಂದನಾರ್ಹರು.

–ಬೆಸಗರಹಳ್ಳಿ ರವಿಪ್ರಸಾದ್, ಕೆ.ಸಿ. ನಗರ, ಮೈಸೂರು

ಸಮಾಜಮುಖಿ



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಕೇಂದ್ರ ಬಜೆಟ್ 2023–ಎಷ್ಟು ಸಮಾಜಮುಖಿ?

ಬಹು ನಿರೀಕ್ಷಿತ ಕೇಂದ್ರ ಬಜೆಟ್–2023 ಮಂಡನೆಯಾಗಿದೆ. ಅದು ಗುರುತಿಸಿರುವ ಏಳು ಪ್ರಧಾನ ಗುರಿಗಳೆಂದರೆ ಒಳಗೊಳ್ಳುವ ಅಭಿವೃದ್ಧಿ; ಕಟ್ಟ ಕಡೆಯ ಮನುಷ್ಯನನ್ನೂ ತಲುಪುವುದು; ಮೂಲಸೌಕರ್ಯ ಮತ್ತು ಹೂಡಿಕೆ; ಸಾಮರ್ಥ್ಯವನ್ನು ಹೊರತರುವುದು; ಪರಿಸರ ಸೂಕ್ಷ್ಮ ಬೆಳವಣಿಗೆ; ಯುವ ಶಕ್ತಿ ಮತ್ತು ಹಣಕಾಸು ಕ್ಷೇತ್ರ. ಮೇಲ್ನೋಟಕ್ಕೆ ಇವುಗಳೆಲ್ಲವೂ ನಮ್ಮ ದೇಶವನ್ನು ಆರ್ಥಿಕ ಪ್ರಗತಿಯ ಪಥದಲ್ಲಿ ಮತ್ತಷ್ಟು ದೂರ ಕೊಂಡೊಯ್ಯುವಲ್ಲಿ ಮುಖ್ಯ ಮೈಲಿಗಲ್ಲುಗಳೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಅಭಿವೃದ್ಧಿ ಅವಕಾಶಗಳ ಅಸಮಾನ ಲಭ್ಯತೆ ಹಾಗೂ ಬಳಕೆ ಎಂಬ ವಿಷವರ್ತುಲದಿಂದ ಹೊರಬರಲಾರದ ಈ ಸಮಾಜದಲ್ಲಿ ಈ ಆಶಯಗಳು ಎಷ್ಟರ ಮಟ್ಟಿಗೆ ಆಚರಣೆಗಳಾಗಿ ಪರಿವರ್ತಿತವಾಗುತ್ತವೆ ಎಂಬ ಪ್ರಶ್ನೆ ನಮ್ಮ ಮುಂದೆ ಉದ್ಭವಿಸುತ್ತದೆ.

ಈ ಬಜೆಟ್ ಮಂಡನೆಯಾಗುವ ಮುನ್ನವೇ ಅದನ್ನು ಮಧ್ಯಮ ವರ್ಗ ಕೇಂದ್ರಿತ ಎಂದು ಬಿಂಬಿಸಲಾಗುತ್ತಿತ್ತು. ಅದು ಮಂಡನೆಯಾದ ನಂತರ, ಮಾಧ್ಯಮಗಳಲ್ಲಿ ಮೂಡಿ ಬರುತ್ತಿರುವ ಅನೇಕ ಚರ್ಚೆಗಳಲ್ಲಿಯೂ ಮಧ್ಯಮ ವರ್ಗದ ಬದುಕನ್ನು ಹಸನು ಮಾಡುವತ್ತ ಈ ಆಯವ್ಯಯ ಗಮನವನ್ನು ಇಟ್ಟಿದೆ ಎಂಬ ಭಾವನೆ ವ್ಯಕ್ತವಾಗುತ್ತಿದೆ. ಈಗ ಸೂಚಿಸಲಾಗಿರುವ ಹೊಸ ತೆರಿಗೆ ನೀತಿಯಲ್ಲಿ ನೀಡಿರುವ ಆದಾಯ ತೆರಿಗೆ ರಿಯಾಯಿತಿಗಳು ಮಧ್ಯಮ ವರ್ಗದ ಆರ್ಥಿಕ ಭಾರವನ್ನು ಹಗುರ ಮಾಡಲಿವೆ. ಈ ಗುಂಪು ದೇಶದ ಜನಸಂಖ್ಯೆಯಲ್ಲಿ ಶೇ.30ರಷ್ಟಿದ್ದು ಮುಂಬರುವ ಕಾಲ ಘಟ್ಟದಲ್ಲಿ ಇನ್ನೂ ಹೆಚ್ಚುವ ಸಂಭವವಿರುವುದರಿಂದ ದೇಶದ ಅಭಿವೃದ್ಧಿ ಪ್ರಯತ್ನದಲ್ಲಿ ಹೊಸ ತೆರಿಗೆ ನೀತಿ ಬಹು ದೊಡ್ಡ ಹೆಜ್ಜೆ ಎಂದು ಹೇಳಲಾಗುತ್ತಿದೆ.

ಯಾವುದೇ ಬಗೆಯ ತೆರಿಗೆ ವಿನಾಯಿತಿ ಸ್ವಾಗತಾರ್ಹವೇ, ಏಕೆಂದರೆ ವ್ಯಕ್ತಿಗಳು ಉಳಿಸಿದ ಹಣ ಅವರ ಬಳಿ ಇರುತ್ತದೆ. ಅದನ್ನು ಅವರು ತಮ್ಮ ಬದುಕಿನ ಗುಣಮಟ್ಟವನ್ನು ಏರಿಸುವ ಪ್ರಯತ್ನಗಳಲ್ಲಿ ತೊಡಗಿಸಬಹುದು ಎಂದು ಹೇಳಲಾಗುತ್ತಿದೆ. ಆದರೆ ಕೋವಿಡ್ ತಂದಿಟ್ಟ ಆರ್ಥಿಕ ಸಂಕಷ್ಟಗಳಿಂದ ಮಧ್ಯಮ ವರ್ಗಕ್ಕೆ ಮೇಲ್ಮುಖ ಚಲನೆಯನ್ನು ಸಾಧಿಸಿದ್ದ ಶೇಕಡಾ 30ಕ್ಕೂ ಹೆಚ್ಚು 'ನವ ಮಧ್ಯಮ ವರ್ಗ'ಕ್ಕೆ ಸೇರಿದವರು ಮತ್ತೆ ಆರ್ಥಿಕವಾಗಿ ತಳ ವರ್ಗಗಳಿಗೆ ಜಾರುತ್ತಿದ್ದಾರೆ ಎಂದು ಕೆಲ ಅಧ್ಯಯನ ವರದಿಗಳು ತೋರಿದ್ದವು. ಈ ವರ್ಗದ ಪರಿಸ್ಥಿತಿಯೇನು? ಅವರು ಕಳೆದುಕೊಂಡ ಉದ್ಯೋಗಗಳು ಮತ್ತು ಜೀವನಾನುಕೂಲಗಳು ಮತ್ತೆ ಅವರಿಗೆ ದೊರೆತಿವೆಯೇ ಅಥವಾ ದೊರೆಯುವುವೇ? ಮಧ್ಯಮ ವರ್ಗ ಎನ್ನುವುದು ಒಂದು ಸಮರೂಪವಾದ ಸಾಮಾಜಿಕ–ಆರ್ಥಿಕ ಗುಂಪು ಆಗಿಲ್ಲದಿರುವುದರಿಂದ ಈ ವರ್ಗವನ್ನು ಗುರಿಯಾಗಿಟ್ಟುಕೊಂಡಿರುವ ಹೊಸ ಬಜೆಟ್ ಸುರಕ್ಷಿತ ವಾರ್ಷಿಕ ಆದಾಯದ ಏರಿಳಿತಗಳನ್ನು ಕಂಡ ಗುಂಪುಗಳಿಗೆ ಎಷ್ಟರ ಮಟ್ಟಿಗೆ ಸಹಾಯಕಾರಿಯಾಗುತ್ತದೆ ಎಂಬ ಪ್ರಶ್ನೆಗಳು ಸಹಜವಾಗಿಯೇ ಉದ್ಭವವಾಗುತ್ತವೆ. ತೆರಿಗೆ ರಿಯಾಯಿತಿಗಳ ಅನುಕೂಲ ದೊರೆಯುವುದು ಉದ್ಯೋಗವಿದ್ದವರಿಗೆ ತಾನೇ? ಬಜೆಟ್ 2023, 60 ಲಕ್ಷ ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಆಶ್ವಾಸನೆಯನ್ನೇನೋ ಇತ್ತಿದೆ. ಇದು ದೇಶದ ಅತ್ಯಂತ ಮಹತ್ವವಾದ ಸಮಕಾಲೀನ ಅಗತ್ಯ ಎನ್ನುವುದು ನಿಸ್ಸಂದೇಹ ಮತ್ತು ವಿಶೇಷವಾಗಿ ಅನ್ವಯಿಸುವುದು ಕೋವಿಡ್ ತಂದಿಟ್ಟ ಬಿಕ್ಕಟ್ಟುಗಳಿಂದ ಜೀವನಾಧಾರಗಳನ್ನು ಕಳೆದುಕೊಂಡಿರುವ ವರ್ಗಕ್ಕೆ. ಅದರಲ್ಲೂ ದೇಶದ ಜನಸಂಖ್ಯೆಯಲ್ಲಿ ಶೇ.30ರಷ್ಟಿರುವ ಯುವ ಜನತೆ ಅಭದ್ರ ಭವಿಷ್ಯದ ಭಯದಲ್ಲಿದ್ದು ಅವರನ್ನು ಹೊಸ ಉದ್ಯೋಗಗಳಿಗೆ ತಯಾರು ಮಾಡುವ ಅಗತ್ಯವಿದೆ.

> **ತೆರಿಗೆಯ ಇಳಿಮುಖ ಹೆಚ್ಚಾಗಿ ಅನುಕೂಲವನ್ನು ತರುವುದು ದೈನಂದಿನ ಆದಾಯ ಹೆಚ್ಚು-ಕಡಿಮೆ 700ರಷ್ಟಾದರೂ ಇರುವವರಿಗೆ. ಆದರೆ ಇಷ್ಟು ದೈನಂದಿನ ಗಳಿಕೆ ಇಲ್ಲದಿರುವವರೂ ನಮ್ಮಲ್ಲಿ ಎಷ್ಟು ಮಂದಿ ಇಲ್ಲ? ಅಗತ್ಯ ವಸ್ತುಗಳ ಬೆಲೆ ತೆಗೆದುಕೊಂಡಾಗ, ಅವುಗಳನ್ನು ಪಡೆಯಲು ಇವರು ಎಷ್ಟು ಹಣವನ್ನು ಸಂದಾಯ ಮಾಡುವರೋ ಉಳ್ಳವರೂ ಅಷ್ಟೇ ಹಣವನ್ನು ಕೊಡುತ್ತಾರೆ. ಬೆಲೆಗಳು ನಿರಂತರವಾಗಿ ಏರಿಕೆಯಾಗುತ್ತಿರುವ ಈ ಕಾಲದಲ್ಲಿ ಅವರಿಗೆ ಬರುವ ಆದಾಯದಲ್ಲಿ ಜೀವನ ನಿರ್ವಹಣೆ ಹೊರೆಯಾಗುತ್ತಿದೆ. ಆದ್ದರಿಂದ ಅಗತ್ಯ ವಸ್ತುಗಳ ಬೆಲೆಯನ್ನು ಇಳಿಸಿ ಗುಣಮಟ್ಟದ ಜೀವನವನ್ನು ನಡೆಸಲು ಅನುಕೂಲ ಮಾಡಿಕೊಡುವುದು ನಿಜವಾದ ಅರ್ಥದಲ್ಲಿ ಒಳಗೊಳ್ಳುವ ಅಭಿವೃದ್ಧಿ.**

ತೆರಿಗೆಯ ಇಳಿಮುಖ ಹೆಚ್ಚಾಗಿ ಅನುಕೂಲವನ್ನು ತರುವುದು ದೈನಂದಿನ ಆದಾಯ ಹೆಚ್ಚು–ಕಡಿಮೆ 700 ರಷ್ಟಾದರೂ ಇರುವವರಿಗೆ. ಆದರೆ ಇಷ್ಟು ದೈನಂದಿನ ಗಳಿಕೆ ಇಲ್ಲದಿರು ವವರೂ ನಮ್ಮಲ್ಲಿ ಎಷ್ಟು ಮಂದಿ ಇಲ್ಲ ? ಅಗತ್ಯ ವಸ್ತುಗಳ ಬೆಲೆ ತೆಗೆದುಕೊಂಡಾಗ, ಅವುಗಳನ್ನು ಪಡೆಯಲು ಇವರು ಎಷ್ಟು ಹಣವನ್ನು ಸಂದಾಯ ಮಾಡುವರೋ ಉಳ್ಳವರೂ ಅಷ್ಟೇ ಹಣವನ್ನು ಕೊಡುತ್ತಾರೆ. ಬೆಲೆಗಳು ನಿರಂತರವಾಗಿ ಏರಿಕೆಯಾಗುತ್ತಿರುವ ಈ ಕಾಲದಲ್ಲಿ ಅವರಿಗೆ ಬರುವ ಆದಾಯದಲ್ಲಿ ಜೀವನ ನಿರ್ವಹಣೆ ಹೊರೆಯಾಗುತ್ತಿದೆ. ಆದ್ದರಿಂದ ಅಗತ್ಯ ವಸ್ತುಗಳ ಬೆಲೆಯನ್ನು ಇಳಿಸಿ ಗುಣಮಟ್ಟದ ಜೀವನವನ್ನು ನಡೆಸಲು ಅನುಕೂಲ ಮಾಡಿಕೊಡುವುದು ನಿಜವಾದ ಅರ್ಥದಲ್ಲಿ ಒಳಗೊಳ್ಳುವ ಅಭಿವೃದ್ಧಿ.

ಉದ್ಯೋಗಗಳನ್ನು ಪಡೆಯಲು, ಬದಲಾಗುತ್ತಿರುವ ಶೈಕ್ಷಣಿಕ ಪ್ರಪಂಚದಲ್ಲಿ ಹೊಸ–ಹೊಸ ಕೌಶಲಗಳನ್ನು ಪಡೆಯಲು ಪ್ರಧಾನಮಂತ್ರಿ ಕೌಶಲ್ ವಿಕಾಸ್ ಯೋಜನೆಯಡಿಯಲ್ಲಿ 30 ಸ್ಕಿಲ್ ಇಂಡಿಯಾ ಇಂಟರ್ ನ್ಯಾಷನಲ್ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಪ್ರಸ್ತಾಪವಿದೆ. ಈ ಯೋಜನೆಯಡಿಯಲ್ಲಿ ಕೋಡಿಂಗ್, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ರೊಬೋಟಿಕ್ಸ್, ಮೆಕ್ಯಾಟ್ರೊನಿಕ್ಸ್, ಇಂಟರ್ನೆಟ್ ಆಫ್ ಥಿಂಗ್ಸ್, 3ಆ ಪ್ರಿಂಟಿಂಗ್ ಡ್ರೋನ್ಸ್– ಇವೇ ಮುಂತಾದ ನವಯುಗದ ಕೋರ್ಸುಗಳಿಗೆ ಪ್ರಾಧಾನ್ಯತೆಯನ್ನು ನೀಡಲಾಗುತ್ತದೆ ಎನ್ನುವುದನ್ನು ಗಮನಿಸಬೇಕು. ಮುಂದಿನ ಮೂರು ವರ್ಷಗಳಲ್ಲಿ ಲಕ್ಷಾಂತರ ಯುವ ಜನತೆಗೆ ವೃತ್ತಿ–ನಿರತ ತರಬೇತಿಯನ್ನು ಕೈಗಾರಿಕೆಗಳ ಸಹಭಾಗಿತ್ವದಲ್ಲಿ ನೀಡಲಾಗುತ್ತದೆ ಎನ್ನುವ ಆಶಯವೇನೂ ಸಮಕಾಲೀನ ಸಮಾಜದ ಉದ್ಯೋಗ ಅಗತ್ಯಗಳನ್ನು ಪೂರೈಸಲು ನೆರವಾಗುತ್ತದೆ ಎನ್ನುವುದು ಸರಿಯೇ. ಆದರೆ ಈ ಸಂಸ್ಥೆಗಳು ಎಲ್ಲಿ ಸ್ಥಾಪನೆಯಾಗುತ್ತವೆ ಮತ್ತು ಇದರ ಬಳಕೆದಾರರು ಯಾರು?– ಈ ವಿಷಯಗಳ ಬಗ್ಗೆ ಮುಂದಾಲೋಚನೆ ಮಾಡಲಾಗಿದೆಯೇ?

ಈಗಾಗಲೇ ಅನೇಕ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಈ ಕೋರ್ಸುಗಳ ಬೋಧನೆ ನಡೆಯುತ್ತಿದೆ. ಇವೆಲ್ಲ ಭವಿಷ್ಯದ ಉದ್ಯೋಗಗಳನ್ನು ಕೇಂದ್ರೀಕರಿಸಿವೆ ಎಂಬುದು ನಿಜ, ಆದರೆ ಎಷ್ಟು ಮಂದಿ ಗ್ರಾಮೀಣ ಭಾಗದ ಮತ್ತು ಸಮಾಜದ ತಳ ವರ್ಗಗಳ ಯುವ ಜನತೆಗೆ ಇಂಥ ಸಂಸ್ಥೆಗಳಿಗೆ ಸೇರುವ ಅವಕಾಶ ದೊರೆಯುತ್ತದೆ?

ಉದ್ಯೋಗ ಸೃಷ್ಟಿಗೆ ಸಂಬಂಧಿಸಿದ ಹಾಗೆ ವ್ಯಕ್ತವಾಗುತ್ತಿರುವ ಮತ್ತೊಂದು ಕಾಳಜಿಯೆಂದರೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ನಿಗದಿಯಾಗಿರುವ ಮೊತ್ತದಲ್ಲಿ ಆಗಿರುವ ಗಮನಾರ್ಹವಾದ ಇಳಿಕೆ. ಗ್ರಾಮೀಣ ಭಾರತದಲ್ಲಿ ಪ್ರಮುಖ ಉದ್ಯೋಗ ಮೂಲವಾಗಿರುವ ನರೇಗಾ ಯೋಜನೆಗೆ ಆಗಿರುವ ಹಿಂಬೀಳಿಕೆಯಿಂದ ಗ್ರಾಮೀಣ ಆರ್ಥಿಕ ಸ್ಥಿತಿಯ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗಬಹುದು ಎಂಬ ಆತಂಕ ವ್ಯಕ್ತವಾಗುತ್ತಿದೆ.

ಯಾವುದೇ ಬಜೆಟ್‌ನ ಸಾಮಾಜಿಕ ಕಳಕಳಿ ವ್ಯಕ್ತವಾಗುವುದು ಅದು ಶಿಕ್ಷಣ ಕ್ಷೇತ್ರಕ್ಕೆ, ಅದರಲ್ಲಿಯೂ ಶಾಲಾ ಶಿಕ್ಷಣಕ್ಕೆ ನೀಡುವ ಆದ್ಯತೆಯಿಂದ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಕೇವಲ 8%ರಷ್ಟಿದೆ. ಎಂದರೆ 1.04 ಕೋಟಿಯಿಂದ 1.12 ಲಕ್ಷ ಕೋಟಿಗೆ ಮಾತ್ರ ಶಿಕ್ಷಣ ಮಂತ್ರಾಲಯಕ್ಕೆ ಬಜೆಟ್ ನಿಗದಿಯಾಗಿದೆ. ಇದರಲ್ಲಿ ಶಾಲಾ ಶಿಕ್ಷಣದ ಪಾಲು 68,804 ಕೋಟಿಯಾದರೆ ಉನ್ನತ ಶಿಕ್ಷಣದ ಪಾಲು 44,094 ಕೋಟಿ. ಎಲ್ಲಕ್ಕಿಂತ ಮಿಗಿಲಾಗಿ ಶಾಲಾ ಶಿಕ್ಷಣದ ಸಾರ್ವತ್ರೀಕರಣ ಪ್ರಯತ್ನಗಳಿಗೆ ಬೃಹತ್ ಬೆಂಬಲ ನೀಡಿದ ಸರ್ವ ಶಿಕ್ಷಾ ಅಭಿಯಾನ ಕಾರ್ಯಕ್ರಮಕ್ಕೆ ಹೆಚ್ಚು–ಕಡಿಮೆ ಕಳೆದ ವರ್ಷದಷ್ಟೇ ಹಣ ನಿಗದಿಯಾಗಿರುವುದು ಕೂಡಾ ಆತಂಕಕಾರಿ ವಿಚಾರ.



ಕೋವಿಡ್‌ನ ಕಾರಣದಿಂದಾಗಿ ಅನೇಕ ಕಡೆಗಳಲ್ಲಿ ಶಾಲಾ ಮಕ್ಕಳು ಮತ್ತು ಶಿಕ್ಷಕರಿಬ್ಬರೂ ತೊಂದರೆಗಳನ್ನು ಅನುಭವಿಸಿ, ಇಂದಿಗೂ ಎಲ್ಲವೂ ಸರಿಹೋಗಿಲ್ಲವೆಂಬುದು ನಮಗೆಲ್ಲ ತಿಳಿದಿರುವ ವಿಷಯವೇ. ಇಂಥ ಪರಿಸ್ಥಿತಿಯಲ್ಲಿ ಶಾಲಾ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕಿತ್ತು. ಇಂದಿಗೂ ಬಹುತೇಕ ಮಧ್ಯಮ ವರ್ಗದ ಕುಟುಂಬಗಳು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸುತ್ತಾರೆ. ಕೋವಿಡ್ ಕಾಲದಲ್ಲಿ ತಾವು ಎದುರಿಸಿದ ಆರ್ಥಿಕ ಹಿಂಬೀಳಿಕೆಯನ್ನು ಸರಿಪಡಿಸಿಕೊಳ್ಳಲು ಈ ವರ್ಷ ಬಹುತೇಕ ಶಾಲೆಗಳು ಶುಲ್ಕವನ್ನು ಏರಿಕೆ ಮಾಡಿದಾಗ, ಮೇಲ್ ಮಧ್ಯಮ ವರ್ಗದ ಕುಟುಂಬಗಳಿಗೆ ಈ ಹೆಚ್ಚಿದ ಶುಲ್ಕವನ್ನು ಭರಿಸಲು ಅಷ್ಟೇನೂ ಕಷ್ಟವಾಗದಿದ್ದರೂ, ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಿದ್ದ ತಳ–ಮಧ್ಯಮ ವರ್ಗ ಅಥವಾ ತಳ ಆರ್ಥಿಕ ವರ್ಗಗಳ ಕುಟುಂಬಗಳಿಗೆ ಈ ಹೆಚ್ಚಳವನ್ನು ತುಂಬಲು ಬಹು ಕಷ್ಟವಾಯಿತು. ಸಾಲ ಮಾಡಿ ಶುಲ್ಕವನ್ನು ಭರಿಸಿದವರು ಅನೇಕರಾದರೆ ಖಾಸಗಿ ಶಾಲೆಗಳಿಂದ ತಮ್ಮ ಮಕ್ಕಳನ್ನು ಬಿಡಿಸಿ ಸರ್ಕಾರಿ ಶಾಲೆಗಳಿಗೆ ಸೇರಿಸಿದ ಪೋಷಕರೂ ಇದ್ದಾರೆ. ಶಿಕ್ಷಣ ಸಾಮಾಜಿಕ ಅಸಮಾನತೆಯನ್ನು ತೊಡೆದು ಹಾಕುವ ಸಾಧನ, ಆದರೆ ಶಿಕ್ಷಣದ ಮೇಲೆ ಸಾಮಾಜಿಕ ಆಯವ್ಯಯ ಇಳಿಮುಖವಾಗುತ್ತಾ ಹೋದ ಹಾಗೆ ಶಿಕ್ಷಣವೇ ಅಸಮಾನತೆಯ ಒಂದು ಮೂಲವಾಗುತ್ತದೆ. ಹೀಗಾದಾಗ ಬಜೆಟ್ 2023 ರ 'ಕಟ್ಟ ಕಡೆಯ ವ್ಯಕ್ತಿಯನ್ನೂ ತಲುಪುವ' ಗುರಿ ಸಾಧನೆಯಾಗುವುದು ಹೇಗೆ ?

ಕೇಂದ್ರ ಬಜೆಟ್ 2023 ತರಬಹುದಾದ ಸಕಾರಾತ್ಮಕ ಅಥವಾ ನಕಾರಾತ್ಮಕ ಬದಲಾವಣೆಗಳ ಚರ್ಚೆ, ಅದರ ಗೋಚರ–ಅಗೋಚರ ಮುಖಗಳ ಬಗ್ಗೆ ವ್ಯಾಖ್ಯಾನ ಮತ್ತು ಅದರ ಪರ–ವಿರೋಧ ವಾದಗಳು ಬಜೆಟ್ ಮಂಡನೆಯಾದಾಗಿನಿಂದ ನಿರಂತರವಾಗಿ ನಡೆಯುತ್ತಲೇ ಇವೆ. ಬಜೆಟ್‌ನ ವಿಶ್ಲೇಷಣೆ ಸಾಮಾನ್ಯವಾಗಿ ಆರ್ಥಿಕ ಸೂಚ್ಯಂಕಗಳ ಚೌಕಟ್ಟಿನಲ್ಲೇ ನಡೆಯುವುದರಿಂದ ಅದರ ಸಾಮಾಜಿಕ ಪರಿಣಾಮಗಳು ತಕ್ಷಣಕ್ಕೆ ಹೊರ ಬರುವುದಿಲ್ಲ. ಆಯವ್ಯಯ ಅನುಷ್ಠಾನದ ಹಂತವನ್ನು ತಲುಪಿದಾಗ ಮಾತ್ರ ಅದರ ಸಾಧಕ–ಬಾಧಕಗಳು ತೆರೆದುಕೊಳ್ಳುತ್ತಾ ಹೋಗುವುದು.

ಎಲ್ಲಾ ವರ್ಗಗಳ ನಿರೀಕ್ಷೆ ಪೂರೈಕೆ



ಮೈಸೂರು, ಫೆ.1(ಆರ್‌ಕೆ)–ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಇಂದು ಮಂಡಿಸಿರುವ ಪ್ರಸಕ್ತ ಸಾಲಿನ ಕೇಂದ್ರ ಬಜೆಟ್ ಸಮಾಜದ ಎಲ್ಲಾ ವರ್ಗಗಳ ನಿರೀಕ್ಷೆಯನ್ನು ಪೂರೈಸುವ ಜನಪರ ಬಜೆಟ್ ಆಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, 5,300 ಕೋಟಿ ರೂ. ಅನುದಾನವನ್ನು ಭದ್ರಾ ಮೇಲ್ದಂಡೆ ಯೋಜನೆಗೆ ಮೀಸಲಿರಿಸಿರುವುದರಿಂದ ಮಧ್ಯ ಕರ್ನಾಟಕ ಭಾಗದ ಜಿಲ್ಲೆಗಳಿಗೆ ವರದಾನವಾಗಲಿದೆ. 7 ಲಕ್ಷ ರೂ.ವರೆಗೆ ತೆರಿಗೆ ವಿನಾಯ್ತಿ, ಕೃಷಿ ಸಾಲಕ್ಕೆ 20 ಲಕ್ಷ ಕೋಟಿ ರೂ. ಮೀಸಲು, 50 ಹೊಸ ಏರ್‌ಪೋರ್ಟ್ ಸ್ಥಾಪನೆ, ಡಿಜಿಟಲ್ ಗ್ರಂಥಾಲಯಗಳ ಸ್ಥಾಪನೆ ಸೇರಿದಂತೆ ರಾಜ್ಯಕ್ಕೆ ಹಲವು ಯೋಜನೆಗಳನ್ನು ಘೋಷಿಸಿರುವುದರಿಂದ ಕೇಂದ್ರ ಬಜೆಟ್ ಜನಪರವಾಗಿದೆ ಎಂದು ತಿಳಿಸಿದ್ದಾರೆ.

ಉದ್ಯಮಗಳ ಅಭಿವೃದ್ಧಿ ಭರವಸೆ ನೀಡಿದೆ

ಕೇಂದ್ರ ಬಜೆಟ್ ಮೈಸೂರು ಜಿಲ್ಲೆಗೆ ನಿರ್ದಿಷ್ಟವಾದ ಯಾವುದೇ ಕೊಡುಗೆ ನೀಡದಿದ್ದರೂ ಸಮಗ್ರ ಉದ್ಯಮ ಕ್ಷೇತ್ರ ಹಾಗೂ ಸಣ್ಣ ಕೈಗಾರಿಕೆಗಳ ಹಣಕಾಸಿನ ನೆರವಿಗಾಗಿ 6,000 ಕೋಟಿ ರೂ. ಭದ್ರತೆ ರಹಿತ ಸಾಲ ನೀಡುತ್ತಿರುವುದು ಅಭಿವೃದ್ಧಿ ಭರವಸೆ ನೀಡಿದೆ. ಕೈಗಾರಿಕೆಗಳಿಗೆ ಅಗತ್ಯವಾದಂತಹ ಕೌಶಲ್ಯ ಭರಿತ ಕಾರ್ಮಿಕರನ್ನು, ನಿರುದ್ಯೋಗಿ ಯುವಕರನ್ನು ಕಾರ್ಮಿಕರನ್ನಾಗಿಸುವ ಸಲುವಾಗಿ 30 ಅಂತರರಾಷ್ಟ್ರೀಯ ಮಟ್ಟದ ಕೌಶಲ್ಯ ಅಭಿವೃದ್ಧಿ ಕೇಂದ್ರಗಳನ್ನು ಪ್ರಾರಂಭ ಮಾಡಲು ಪ್ರಕಟಿಸಿರುವುದು ಸ್ವಾಗತ. ಆದರೆ ಇದನ್ನು ಮೈಸೂರಿನಲ್ಲಿ ಪ್ರಾರಂಭ ಮಾಡಲು ನಮ್ಮ ಸಂಸದರು ಪ್ರಯತ್ನಿಸಬೇಕು. ಸರಕು ಸಾಗಾಣಿಕೆಗೆ 100 ಹೊಸ ಯೋಜನೆಗಳ ಸೇರ್ಪಡೆ ಹಾಗೂ 10 ಲಕ್ಷ ಕೋಟಿ ರೂ. ಉದ್ಯೋಗ ಸೃಷ್ಟಿ ಯೋಜನೆ ಜಾರಿಯಾದರೆ ಕೈಗಾರಿಕಾ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧ್ಯವಾಗಲಿದೆ. –ಸುರೇಶ್‌ಕುಮಾರ್ ಜೈನ್, ಪ್ರಧಾನ ಕಾರ್ಯದರ್ಶಿ, ಸೂಕ್ಷ್ಮ, ಸಣ್ಣ, ಮಧ್ಯಮ ಉದ್ಯಮಗಳ ಪರಿಷತ್, ಮೈಸೂರು.

ಪ್ರವಾಸೋದ್ಯಮಕ್ಕೆ ವಿತ್ತ ಸಚಿವರ ಗಮನವಿಲ್ಲ

50 ಹೊಸ ವಿಮಾನ ಮತ್ತು ವಿಮಾನ ನಿಲ್ದಾಣಗಳ ನಿರ್ಮಾಣ, ಆದಾಯ ತೆರಿಗೆ ಮಿತಿ 7 ಲಕ್ಷ ಕ್ಕೆ ಏರಿಸಿದ್ದು ಬಹಳ ಅನುಕೂಲವಾಗಲಿದೆ, ಭದ್ರಾ ಮೇಲ್ದಂಡೆ ನೀರಾವರಿ ಯೋಜನೆಗೆ 5300 ಕೋಟಿ ರೂ. ನೀಡಿರುವುದು ಉತ್ತಮವಾಗಿದೆ. ಅಲ್ಲದೆ ಮತ್ತಿತರ ಘೋಷಣೆಗಳು ಉತ್ತಮವಾಗಿವೆ. ಆದರೆ ಪ್ರವಾಸೋದ್ಯಮದ ಕ್ಷೇತ್ರದ ಕಡೆಗೆ ಯಾಕೊ ವಿತ್ತ ಸಚಿವರು ಗಮನ ಹರಿಸಿದಂತಿಲ್ಲ.

– ಸಿ.ನಾರಾಯಣಗೌಡ, ಅಧ್ಯಕ್ಷ, ಮೈಸೂರು ಹೋಟೆಲ್ ಮಾಲೀಕರ ಸಂಘ

ಕೇಂದ್ರ ಬಜೆಟ್: ಮಿಶ್ರ ಪ್ರತಿಕ್ರಿಯೆ

ಮೈಸೂರು, ಫೆ.1– ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ 2023–24ನೇ ಸಾಲಿನ ಕೇಂದ್ರ ಬಜೆಟ್‌ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೈಸೂರಿನ ಸ್ಥಳೀಯ ಜನಪ್ರತಿನಿಧಿಗಳು, ರೈತ ಮುಖಂಡರು, ಉದ್ಯಮಿಗಳು, ಅರ್ಥಶಾಸ್ತ್ರಜ್ಞರು ಸೇರಿದಂತೆ ಹಲವರು 'ಮೈಸೂರು ಮಿತ್ರ'ನಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಜಿಎಸ್‌ಟಿ ತಗ್ಗಿಸುವ ನಿರೀಕ್ಷೆ ಇತ್ತು...

ಕೇಂದ್ರ ಬಜೆಟ್‌ನಲ್ಲಿ ಹೊಸ ನರ್ಸಿಂಗ್ ಕಾಲೇಜು ಸ್ಥಾಪನೆ, ಅನುದಾನದಲ್ಲಿ ಶೇ.1–2ರಷ್ಟು ಹೆಚ್ಚಳ ಹೊರತುಪಡಿಸಿ ವೈದ್ಯಕೀಯ ಕ್ಷೇತ್ರಕ್ಕೆ ಮಹತ್ವದ ಘೋಷಣೆಗಳೇನು ಇಲ್ಲ. ಔಷಧಿ ಹಾಗೂ ವೈದ್ಯಕೀಯ ಉಪಕರಣಗಳ ಮೇಲಿನ ಜಿಎಸ್‌ಟಿ ಹೊರೆಯನ್ನು ಶೇ.18ರಿಂದ ಶೇ.12ಕ್ಕೆ ತಗ್ಗಿಸುವ ನಿರೀಕ್ಷೆಯಿತ್ತು. ಈ ಜಿಎಸ್‌ಟಿ ಕಡಿಮೆ ಮಾಡಿದ್ದರೆ ತುಂಬಾ ಅನುಕೂಲವಾಗುತ್ತಿತ್ತು.

–ಡಾ.ಸಿ.ಎನ್.ಮಂಜುನಾಥ್, ನಿರ್ದೇಶಕರು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ

ಇದು ಬಜೆಟ್ಟಾ ಅಥವಾ ದಿನಸಿ ಅಂಗಡಿ ರಸೀದಿಯಾ!

ಸುಬ್ರಮಣಿಯನ್ ಸ್ವಾಮಿ ವ್ಯಂಗ್ಯ

ನವದೆಹಲಿ, ಫೆ.1–ತಮ್ಮದೇ ಸರ್ಕಾರದ ಬಜೆಟ್ ಅನ್ನು ಟೀಕಿಸಿರುವ ಬಿಜೆಪಿ ಹಿರಿಯ ನಾಯಕ ಸುಬ್ರಮಣಿಯನ್ ಸ್ವಾಮಿ ಅವರು, ಇಂದು ಮಂಡಿಸಿರುವುದು ಬಜೆಟ್ಟಾ ಅಥವಾ ದಿನಸಿ ಅಂಗಡಿ ಮಾಲೀಕನ ರಸೀದಿಯಾ ಎಂದು ವ್ಯಂಗ್ಯವಾಗಿ ಪ್ರಶ್ನಿಸಿದ್ದಾರೆ.



ಒಂದು ಯೋಗ್ಯ ಬಜೆಟ್ ತನ್ನ ಉದ್ದೇಶಗಳೇನು ಎಂಬುದನ್ನು ಬಹಿರಂಗಪಡಿಸಬೇಕು. ಅದು ಜಿಡಿಪಿ ಬೆಳವಣಿಗೆ ದರವಾಗಿದ್ದರೆ, ಹೂಡಿಕೆಯ ಮಟ್ಟ ಮತ್ತು ರಿಟರ್ನ್ ದರ, ಆದ್ಯತೆಗಳು, ಆರ್ಥಿಕ ತಂತ್ರಗಾರಿಕೆ ಮತ್ತು ಸಂಪನ್ಮೂಲ ಕ್ರೋಢೀಕರಣವನ್ನು ಬಹಿರಂಗಪಡಿಸಿ ಎಂದು ಸುಬ್ರಮಣಿಯನ್ ಸ್ವಾಮಿ ಟ್ವೀಟ್ ಮಾಡಿದ್ದಾರೆ.

ಆರ್ಥಿಕಾಭಿವೃದ್ಧಿಗೆ ಪ್ರೋತ್ಸಾಹದಾಯಕ ಬಜೆಟ್

ಕಳೆದ ವರ್ಷದಿಂದ ಆರ್ಥಿಕಾಭಿವೃದ್ಧಿ ಉತ್ತಮವಾಗಿರುವುದರಿಂದ ಅದೇ ಮಾದರಿಯಲ್ಲಿ ಮುಂದುವರೆಸಿಕೊಂಡು ಹೋಗುವ ನಿಟ್ಟಿನಲ್ಲಿ ಈ ವರ್ಷದ ಬಜೆಟ್ ಮಂಡಿಸಲಾಗಿದೆ. ಹಸಿರು ಬೆಳವಣಿಗೆ, ಯುವಶಕ್ತಿ, ಒಳಗೊಳ್ಳುವಿಕೆಯ ಅಭಿವೃದ್ಧಿ, ಹಣಕಾಸು ವಲಯ, ಮೂಲಭೂತ ಸೌಕರ್ಯ ಮತ್ತು ಹೂಡಿಕೆ ಸಾಮರ್ಥ್ಯವನ್ನು ಅನಾವರಣಗೊಳಿಸುವುದು, ಕೃಷಿಗಾಗಿ ಡಿಜಿಟಲ್ ಫ್ಲಾಟ್‌ಫಾರಂ ಎಂಬ ಸಪ್ತ ಋಷಿ ಯೋಜನೆ ಮೂಲಕ ಕೃಷಿ, ಕೈಗಾರಿಕೆ, ಉದ್ಯಮ, ಪ್ರವಾಸೋದ್ಯಮ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಅತ್ಯಂತ ಹಿಂದುಳಿದ ಜಿಲ್ಲೆಗಳನ್ನು ಅಭಿವೃದ್ಧಿ ಮಾಡುವ ಘೋಷಣೆ ಸ್ವಾಗತಾರ್ಹ. ಒಟ್ಟಾರೆ ಆರ್ಥಿಕಾಭಿವೃದ್ಧಿ ಪ್ರೋತ್ಸಾಹದಾಯಕ ಬಜೆಟ್ ಇದಾಗಿದೆ. –ಪ್ರೊ.ನವಿತಾ ತಿಮ್ಮಯ್ಯ, ಅರ್ಥಶಾಸ್ತ್ರ ಪ್ರಾಧ್ಯಾಪಕಿ, ಮೈಸೂರು ವಿವಿ

ಮಧ್ಯಮ ವರ್ಗದ ಪರ ಬಜೆಟ್...

ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮಧ್ಯಮ ವರ್ಗದ ಜನರಿಗೆ ಅನುಕೂಲವಾದ ಜನಪರ ಬಜೆಟ್ ಮಂಡಿಸಿದೆ. ದೇಶದ ಕಟ್ಟ ಕಡೆಯ ವ್ಯಕ್ತಿಯನ್ನೂ ಪರಿಗಣಿಸಲಾಗಿದೆ. ಶಿಕ್ಷಣ, ಕೃಷಿ, ಕೈಗಾರಿಕೆ ಸೇರಿದಂತೆ ಎಲ್ಲಾ ವಲಯಗಳಿಗೂ ಆದ್ಯತೆ ನೀಡಲಾಗಿದೆ. ಸಾಮಾನ್ಯರಿಗೆ ಹೊರೆಯಾಗದಂತೆ ಬಜೆಟ್ ಮಂಡಿಸಿದ್ದು, ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲು ಪೂರಕ ವಾತಾವರಣ ನಿರ್ಮಾಣವಾಗಲಿದೆ. –ಎಲ್.ಆರ್.ಮಹದೇವಸ್ವಾಮಿ, ಮಾಜಿ ಅಧ್ಯಕ್ಷ, ಮೃಗಾಲಯ ಪ್ರಾಧಿಕಾರ

ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಆದ್ಯತೆ

ಎಂಎಸ್‌ಎಂಇಗೆ 9 ಸಾವಿರ ಕೋಟಿ ಅನುದಾನ ಒದಗಿಸಿ, ಸಾಲ ಗ್ಯಾರಂಟಿ ಯೋಜನೆ ಹಾಗೂ ಸಾಲದ ಬಡ್ಡಿದರ ಶೇ.1ರಷ್ಟು ಇಳಿಕೆ ಮಾಡಿರುವುದು ಸ್ವಾಗತಾರ್ಹ. ಯುವಜನತೆಗೆ ಕೌಶಲ್ಯಾಭಿವೃದ್ಧಿಗೆ ಒತ್ತು ನೀಡಿ, 30 ಅಂತರರಾಷ್ಟ್ರೀಯ ಕೌಶಲ್ಯ ಕೇಂದ್ರಗಳ ಸ್ಥಾಪಿಸಿ, 47 ಲಕ್ಷ ಜನತೆಗೆ ಕಲಿಕಾ ವೇತನ ನೀಡಿಕೆ. 5 ಕಡೆ ಬೃಹತ್ ತ್ಯಾಜ್ಯ ನಿರ್ವಹಣಾ ಘಟಕ, 10 ಲಕ್ಷ ಕೋಟಿ ಮೂಲಭೂತ ಸೌಕರ್ಯಕ್ಕೆ ಮೀಸಲಿಡುವುದರಿಂದ ಬಹಳಷ್ಟು ಯುವಕರಿಗೆ ಉದ್ಯೋಗ್ಯ ಸೃಷ್ಟಿಗೆ ಒತ್ತು ನೀಡಿದೆ. ಕೃಷಿ ವಲಯಕ್ಕೆ 20 ಸಾವಿರ ಕೋಟಿ ಕ್ರೆಡಿಟ್ ಲಿಮಿಟ್ ಮಾಡಿಸಿರುವುದರಿಂದ ಕೃಷಿ ಚಟುವಟಿಕೆಗಳು ಹೆಚ್ಚಾಗುತ್ತವೆ. ಜೈವಿಕ ಗೊಬ್ಬರ, ಸಾವಯವ ಕೃಷಿ, ಹಸರೀಕರಣ ಯೋಜನೆಗೆ 19,700 ಕೋಟಿ ರೂ. ಹಾಗೂ ಕಾರ್ಬನ್ ಮುಕ್ತ ನಗರ ನಿರ್ಮಾಣಕ್ಕೆ ಒತ್ತು ಹಾಗೂ ರಫ್ತಿನ ಸುಂಕ ಶೇ.21ರಿಂದ 13 ಇಳಿಸಿರುವುದರಿಂದ ರಫ್ತು ಬೆಳವಣಿಗೆ ಹೆಚ್ಚಾಗುತ್ತದೆ.

–ಕೆ.ಬಿ.ಲಿಂಗರಾಜು, ಅಧ್ಯಕ್ಷರು, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟ್ ಫಾರ್ ಸೇಲ್
ಜ್ಞಾನಭಾರತಿ ಲೇಔಟ್, ದಡದಹಳ್ಳಿ, ಮೈಸೂರು, ಮುಡಾ ಖಾತೆ ಆಗಿದೆ.
1) 30x40 ಈಸ್ಟ್ ಫೇಸಿಂಗ್ 24 ಲಕ್ಷ
2) 29x40 ಸೌತ್ ಈಸ್ಟ್ 26 ಲಕ್ಷ.
ಮಾಲೀಕರು
9342123373

ಬೇಕಾಗಿದ್ದಾರೆ
1) ಫೀಲ್ಡ್ ಆಫೀಸರ್, ಯಾವುದೇ ಪದವೀಧರ.
2) ಡೇಟಾ ಎಂಟ್ರಿ ಆಪರೇಟರ್, ಕಂಪ್ಯೂಟರ್ ಜ್ಞಾನ, ಎಂ ಎಸ್ ಆಫೀಸ್.
3) ಸೈಟ್ ಎಂಜಿನಿಯರ್ ಬಿಇ ಸಿವಿಲ್ ಅಥವಾ ಡಿಪ್ಲೋಮಾ, 2 ವರ್ಷಗಳ ಅನುಭವ.
4) ಸೂಪರ್‌ವೈಸರ್. ಸಂಪರ್ಕಿಸಿ:
9945362868 / 9538320877
7259382467

ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ
35x40
ಹಾಪ್‌ಕಾಮ್ಸ್ ಎದುರು ರಸ್ತೆ, ವಿವೇಕನಂದನಗರ ಸರ್ಕಲ್ ಹತ್ತಿರ.
9008897734

ಬೇಕಾಗಿದ್ದಾರೆ
ಅಕೌಂಟ್ ಮ್ಯಾನೇಜರ್
ಟ್ಯಾಲಿ & ಜಿಎಸ್‌ಟಿ ಕಲಿತಿರಬೇಕು
ಅನುಭವ ಇರುವವರಿಗೆ ಆದ್ಯತೆ
ಜೈಭಾರತ್ ಮಾರ್ಕೆಟಿಂಗ್
ಅಶೋಕ ರೋಡ್, ಮೈಸೂರು
Call: 9741825653

2 BHK MUDA
APPROVED 30x40
NEW HOUSE FOR SALE
NEAR ST. JOSEPH SCHOOL, ILWALA, MYSORE.
8217851695

SITES FOR SALE
DHATRI PROPERTIES
Opp. MIT Engineering College
30x50 Site No. 226, West face. Rs. 1900 per sq.ft. Slightly negotiable.
YESH MEGA CITY Site No. 17. 30x50 North face, Manuganahalli Panchayati, CTF Block Extension. Rs. 900 per sq.ft. Slightly negotiable. *Contact:*
8050257887, 9035336685

ಹೋಂ ನರ್ಸಿಂಗ್ ಕೆಲಸ
ಅನುಭವ ಇರುವ / ಇಲ್ಲದಿರುವ 18 ವರ್ಷ ಮೇಲ್ಪಟ್ಟ ಯುವಕ / ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ. ಊಟ ವಸತಿ ಉಚಿತದೊಂದಿಗೆ ಆಕರ್ಷಕ ಸಂಬಳ ಇರುತ್ತದೆ. ಆಧಾರ್ ಕಾರ್ಡ್ & ಫೋಟೋ ಕಡ್ಡಾಯ ಯಾವುದೇ ಶುಲ್ಕ ಇರುವುದಿಲ್ಲ. (ಸರ್ಕಾರಿ ನೋಂದಾಯಿತ ಸಂಸ್ಥೆ)
7483960098 / 9035113222

ಶ್ರೀಮೂರ್ತಿ ಟೂರಿಸ್ಟ್
12.2.23 ಭಾನುವಾರ ಗೊರವನಹಳ್ಳಿ ಮಹಾಲಕ್ಷ್ಮಿ ಎಡಿಯೂರು ಹೆಬ್ಬೂರು ದೇವರಾಯನದುರ್ಗ ಪ್ರವಾಸ.
19.2.23 ಭಾನುವಾರ ಊಟಿ (ಬಟಾನಿಕಲ್ ಗಾರ್ಡನ್ ಲೇಕ್ ಮಾರ್ಕೆಟ್) ಬೆಳಗ್ಗೆ 5.30ಕ್ಕೆ ಹೊರಟು ರಾತ್ರಿ 10ಕ್ಕೆ ವಾಪಸ್ ಬರುವುದು ಬೆಳಗಿನ ತಿಂಡಿ, ಕಾಫೀ, 1 ಊಟ ಸೇರಿದೆ.
Tickets at Your Door Step
9480733069

JOB VACANCIES
at Reputed hotel in Mysore.
1) Cashier
2) House Keeping
3) Asst. Cook
4) Cleaner
5) Waiter
Contact:
8217737552

HOUSE FOR SALE (NEWLY BUILT)
21x40 North Face (North East Corner), Ground Floor 2BHK, First Floor 2BHK, Second Floor 1BHK.
20x30 East Face (South East Corner) Ground Floor 2BHK, First Floor 2BHK, Second Floor 1BHK.
Location: Lakshmikantha Nagara, Hebbal 1st Stage, Mysuru. (100 mtrs, from Ring Road)
9341464440 / 8904594440

ಮನೆ ಮಾರಾಟಕ್ಕಿದೆ
ಮೈಸೂರು ನಗರ, ಕೃಷ್ಣಮೂರ್ತಿಪುರಂ, 4ನೇ ಕ್ರಾಸ್, ಮನೆ ನಂ. 1299, 32x70+3x40 ಯಲ್ಲಿ ಕಟ್ಟಿರುವ 4 ಮನೆಗಳು 42 ಚದರ ಕಟ್ಟಡ ನಿವೇಶನ 2400 ಚದರ ಅಡಿ ತಿಂಗಳಿಗೆ 55 ಸಾವಿರ ಬಾಡಿಗೆ ಬರುತ್ತಾ ಇದೆ. PG ನಡೆಸಲು ಸೂಕ್ತ ಕಟ್ಟಡ
9591408008 / 9845120632

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನಲ್ಲಿರುವ ಅಡಕನಹಳ್ಳಿ ಮತ್ತು ಕಡಕೊಳ ಇಂಡಸ್ಟ್ರಿಗಳಿಗೆ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
9740324112 / 9035269781
0821-4852002 / 2303459

Document Lost
T. Venkatsh, D.No. 1119/A, 4th Main, Near Learners PU College, Club Road, Vijayanagar 1st Stage, Mysore-570 017, lost allotment letter of Site No. 21, 40x70, Mysore District Employees Housing Co-operative Sangha, Mysore. *Finders please contact:*
Mob: 8095810964

ಬೇಕಾಗಿದ್ದಾರೆ
ಕನ್ನಡ (ಕಡ್ಡಾಯವಾಗಿ ಕನ್ನಡ ನುಡಿ) ಮತ್ತು ಇಂಗ್ಲೀಷ್ ಟೈಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ವಿಳಾಸ ಶ್ರೀ ರೇಣುಕಾ ಎಂಟರ್‌ಪ್ರೈಸಸ್ ಪೂರ್ವ ಉಪ–ನೋಂದಣಾಧಿಕಾರಿಗಳ ಕಛೇರಿ ಎದುರು, ಡಾ॥ ರಾಜ್‌ಕುಮಾರ್ ರಸ್ತೆ, ತ್ರಿವೇಣಿ ವೃತ್ತ, ಸಾತಗಳ್ಳಿ ಬಡಾವಣೆ, ಮೈಸೂರು. ಸಂಪರ್ಕಿಸಿ:
ಎಸ್. ಚಂದ್ರಶೇಖರ್
Mob: 9986030489

IMMIDIATE REQUIREMENTS
We electrical india Pvt. Lmt. only for Male Candidates Age limit 35 years, Housekeeping, SSLC Pass or fail PUC Pass ITI Pass or fail person Hootagalli Industrial area.
7676928664
7795790081

ಬೆಸ್ಟ್ ಪಾಲಿಕ್ಲಿನಿಕ್, ಲ್ಯಾಬ್ & ಮೆಡಿಕಲ್ ಸೆಂಟರ್, ಮೈಸೂರು
ನುರಿತ ತಜ್ಞರುಗಳಿಂದ ಲಭ್ಯವಿರುವ ಸೇವೆಗಳು
* ಕ್ಯಾನ್ಸರ್ ಶಸ್ತ್ರ ಚಿಕಿತ್ಸೆ ತಜ್ಞರು.
* ನರ ರೋಗ ತಜ್ಞರು
* ಮೂತ್ರ ಕೋಶ ರೋಗ ತಜ್ಞರು
* ಕೀಲು ಮೂಳೆ ರೋಗ ತಜ್ಞರು
* ಹೃದಯ ರೋಗ ತಜ್ಞರು
9148564039 / 7619444324
8951861449

ಬೇಕಾಗಿದ್ದಾರೆ
ಮೈಸೂರಿನ ಸಸ್ಯಹಾರಿ ಹೋಟೆಲ್ ಒಂದಕ್ಕೆ
* ಕೌಂಟರ್ ಬಾಯ್ಸ್ – 4 (ಸ್ವ ಸಹಾಯ ಪದ್ಧತಿ)
* ಕಾಫಿ & ಟೀ ಭಟ್ಟರು – 2
* ರುಬ್ಬುವವರು –1
* ಭಜ್ಜಿ ಹಾಕುವವರು – 1
9945059645

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

HURRY UP & BOOK YOUR DREAM HOME
20X30 45 lakhs*
30X40 75 lakhs*
30X50 95 lakhs*
In one of the Prime Locations of Mysore
98800 65122 / 77956 09173

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

NUETECH SOLAR WATER HEATER
ಬಿಸಿ ನೀರಿನ ಸಮಸ್ಯೆಗೆ ಹಾಗೂ ದೀರ್ಘ ಕಾಲದ ಬಾಳಿಕೆಗಾಗಿ ಹಾಗೂ 10 ವರ್ಷ ವಾರಂಟಿ.
Company Super Stockist
USHA KIRAN AGENCY
9844069190

ಬೇಕಾಗಿದ್ದಾರೆ
ಆಫೀಸ್‌ನಲ್ಲಿ ಕೆಲಸ ಮಾಡಲು SSLC ಓದಿರುವ ಹುಡುಗ ಬೇಕಾಗಿದ್ದಾರೆ. (ದ್ವಿಚಕ್ರ ವಾಹನ ಕಡ್ಡಾಯ) ಆಕರ್ಷಕ ಸಂಬಳ.
9742803033

ಮನೆ ಬಾಡಿಗೆಗೆ
2BHK ಮನೆ ಬಾಡಿಗೆಗೆ ಉತ್ತರಕ್ಕೆ ಬಾಗಿಲು, ಇಂಡಿಪೆಂಡೆಂಟ್ ಮನೆ, ಸಾರ್ವಜನಿಕ ಸ್ಕೂಲ್ ಹತ್ತಿರ, ವಿದ್ಯಾರಣ್ಯಪುರಂ, ಮೈಸೂರು.
ಸಂಪರ್ಕಿಸಿ:
9886818178

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ ಭೂಮಿ, ಕೋರ್ಟ್, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಃಸಿದ್ಧ ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಶ್ರೀ ರಾಘವೇಂದ್ರ ಕೊಳ್ಳೇಗಾಲ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ
ಪಂ॥ ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಬಾಧೆ, ಸಾಲ ಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ॥ ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೋಟೆಲ್ ಪಾರ್ಕ್‌ಲೇನ್ ರಸ್ತೆ), ಮೈಸೂರು.

ಬೇಕಾಗಿದ್ದಾರೆ
ಫ್ಯಾಕ್ಟರಿ ಕೆಲಸಕ್ಕೆ ಹೆಲ್ಪರ್ಸ್ ಹುಡುಗರು ಬೇಕಾಗಿದ್ದಾರೆ
99011 63200
97435 65907

DOCUMENT LOST
Raju N., #707, 4th Cross, Manchegowdana Koppal, Mysore-570 017, lost MUDA allotment copy of property of EWS 339. Document No. Identification: 1391 / 92-93. *Finders please contact:*
Mob: 9739002011

ವಿಶೇಷವಾಗಿ ನಿವೃತ್ತರಿಗೆ ಉದ್ಯೋಗವಕಾಶದ ಸೆಮಿನಾರ್
ಕೇಂದ್ರ / ರಾಜ್ಯ/ ಸ್ವಯಂ ನಿವೃತ್ತ ಸರಕಾರಿ ನೌಕರರಿಗೆ ಮತ್ತು ಖಾಸಗಿ ಸಂಸ್ಥೆಯ ನೌಕರರಿಗೆ ಉದ್ಯೋಗವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ ಬರುವವರಿಗೆ ಈ ಕೆಳಕಂಡ ದಾಖಲಾತಿಗಳು ಕಡ್ಡಾಯ. 1) ವಿದ್ಯಾರ್ಹತೆ SSLC ಮೇಲ್ಪಟ್ಟು, 2) ಪಾನ್ ಕಾರ್ಡ್, 3) ಫೋಟೋ 2, 4) ಆಧಾರ್ ಕಾರ್ಡ್, 5) ಬ್ಯಾಂಕ್ ಪಾಸ್‌ಬುಕ್ (1st page) ಮಯಸ್ಸಿನ ಮಿತಿ ಇರುವುದಿಲ್ಲ 35 ವರ್ಷದಿಂದ 70 ವರ್ಷದವರಿಗೆ, ಸೆಮಿನಾರ್ ಸ್ಥಳ/ದಿನಾಂಕ ವಿವರಗಳಿಗೆ ಸಂಪರ್ಕಿಸಿ. Followed by Lunch
9449068132 / 9845034730
9480055885

100% ಕೆಲಸ
ಮೈಸೂರು, ನಂಜನಗೂಡು, ಕಡಕೊಳ, ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ ಮುಂತಾದ ಸ್ಥಳದಲ್ಲಿರುವ ಪ್ರಸಿದ್ಧ ಕಂಪನಿ, ಆಫೀಸ್ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree Pass / Fail ಆದವರಿಗೆ Packing, Helper, Checking, Front Office, Telephone Attender ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ: 14,000 – 39,000 (ESI+PF+OT) ಸೇರಿ. ಸಂಪರ್ಕಿಸಿ:
9663704915 / 9980850141

LOANS
ಮನೆ ಸಾಲ – ನಿವೇಶನ ಸಾಲ
11ಎ ಮತ್ತು 11ಬಿ, ಮನೆ ಸಾಲ ಹಾಗೂ ಪ್ರಾಪರ್ಟಿ ಸಾಲ, ವ್ಯಾಪಾರ ಸಾಲ ಮಾಡಿಕೊಡಿಸಲಾಗುವುದು. ಬ್ಯಾಂಕ್‌ನಿಂದ ಮತ್ತೊಂದು ಬ್ಯಾಂಕಿಗೆ ವರ್ಗಾವಣೆ ಮಾಡಿಸಲಾಗುವುದು.
7975453083 / 7259784408

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೆ, ಆರೋಗ್ಯ ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

Sudarshan Saur
SOLAR WATER HEATER
ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

2 BHK MUDA
APPROVED 30x40
NEW HOUSE FOR SALE
NEAR ST. JOSEPH SCHOOL, ILWALA, MYSORE.
8217851695

ಬೇಕಾಗಿದ್ದಾರೆ
ನುರಿತ ಕಂಪ್ಯೂಟರ್ ಅನುಭವವುಳ್ಳ ಶೋರೂಂನಲ್ಲಿ ಕೆಲಸ ನಿರ್ವಹಿಸಲು ಅಭ್ಯರ್ಥಿಗಳು ಬೇಕಾಗಿದ್ದಾರೆ.
ಸಂಪರ್ಕಿಸಿ: #21/5, ಬೋಗಾದಿ ರಿಂಗ್ ರಸ್ತೆ, ಮೈಸೂರು.
9845111556

HOUSE FOR SALE IN VIJAYANAGAR, MYSORE
30x40, 2BHK, Dining with Solar etc, 110 Lakhs
6362853507

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಿಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

WANTED
Female Manager for a Show room
SALARY 25000/-
Ph.9380142144
SHIVARAMPET, MYSURU

ಕಳೆದಿದೆ
ಲಕ್ಷ್ಮೀ ಕೋಂ ಶಿವಣ್ಣ, ಡಿ ಬ್ಲಾಕ್, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆಯ ಬೆಳಗೊಳ ಗ್ರಾಮದ ನಿವೇಶನದ ಶುದ್ಧ ಕ್ರಯಪತ್ರ ದಸ್ತಾವೇಜು ನಂ. SRP-1-03447-2010-11 ದಿನಾಂಕ: 31–01–2011 ಕಳೆದು ಹೋಗಿರುತ್ತದೆ. ಸಿಕ್ಕಿದಲ್ಲಿ ಸಂಪರ್ಕಿಸಿ.
6361569092

2 SITES FOR SALE
(30x40) 2 Adjecent Sites @ Vijayanagar IV II N/F Near Marimallappa College, Double Road, 80 Lakhs.
(20x30) Vijayanagar IV II W/F Good Location 37 Lakhs
9538839926

SITE FOR SALE
MUDA Approved
30x40 - E / Face
30x40 - N / Face
40x60 - W / Face
40x60 - N / Face
30x60 - N / E Corner
58x60 - N / E Corner
Opp. University Layout, Near Ring
9900372792

SITE FOR SALE
33x50, East facing, Damden Faunus, Opposite Park, 1650 sq.ft. Vijayanagar 4th Stage. Contact:
9845809369, 9686779810

ಬೇಕಾಗಿದ್ದಾರೆ
ಮೈಸೂರು ನಗರದ ದೇವೇಗೌಡ ಸರ್ಕಲ್ ಹತ್ತಿರ, MNC ಕಂಪನಿ, ಹೆಬ್ಬಾಳ್, ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು 45 ವರ್ಷ ಒಳಗಿರುವ ಸೆಕ್ಯೂರಿಟಿ ಗಾರ್ಡ್‌ಗಳು. ಶ್ರೀರಂಗ ಪಟ್ಟಣದ ಗಾರ್ಮೆಂಟ್ಸ್ ಒಂದಕ್ಕೆ ಕೆಲಸ ಮಾಡಲು ಲೇಡಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ. ಸಂಪರ್ಕಿಸಿ:
9035050656, 9035050653

ನಿಮ್ಮ ಸಮಸ್ಯೆಗಳಿಗೆ ಪರಿಹಾರ
ನಿಮ್ಮ ಮನೆಯಲ್ಲಿ ಸುಖ, ಶಾಂತಿ, ನೆಮ್ಮದಿ, ಐಶ್ವರ್ಯ, ಆರೋಗ್ಯ ಸಕಲ ಇಷ್ಟಾರ್ಥಗಳು ಕಲ್ಪಿಸುವ ಶಕ್ತಿ ಕುಬೇರ ದೀಪ, ಇದನ್ನು 48 ದಿನ ನಿಮ್ಮ ಮನೆಯಲ್ಲಿ ತುಪ್ಪದಲ್ಲಿ ಬೆಳಗಿಸಿ ಅಭಿವೃದ್ಧಿ ಹೊಂದಿ, ಇದರ ಜೊತೆ 7 ಅದ್ಭುತ ಶಕ್ತಿಗಳನ್ನು ಉಚಿತವಾಗಿ ಪಡೆಯಿರಿ, ತುಳಸಿ ಜಪ ಮಾಲಾ, ಶಂಖ, ಸೂರ್ಯ ಕವಚ, ಲಕ್ಷ್ಮಿ ಕುಬೇರ ಗಣಪತಿ ಯಂತ್ರ, ನವಗ್ರಹ ದೂಪ, ಕಾಮಧೇನು ಮತ್ತು ಕುದುರೆ ಲಾಳ ಪಡೆದು ಅಭಿವೃದ್ಧಿ ಹೊಂದಿ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
Mob: 9035023710

SITE FOR SALE
40x60 site sale, Suvarna Nagar, Bogadi-Gaddige Road (Near Rainbow School).
Call: 9880273834

ಮಾರಾಟಕ್ಕಿದೆ
1) 30x40, 40x60 N/F ಸೈಟುಗಳು, ಸಾಧನಾ ಬಡಾವಣೆ, ಕೆ.ಆರ್.ಎಸ್. ರಸ್ತೆ.
2) 30x40 N/F ಮನೆ ವಿಜಯನಗರ 2ನೇ ಹಂತ.
3) 20x30 ಮನೆ (Duplex) ದಟ್ಟಗಳ್ಳಿ 3ನೇ ಹಂತ.
4) 40x60 E/F ಸೈಟು ಮೊಗರಹಳ್ಳಿ, ಕೆ.ಆರ್.ಎಸ್. ರಸ್ತೆ. ಸಂಪರ್ಕಿಸಿ:
Mob: 9845425999

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ: 12,000 ದಿಂದ 18,000 (ESI, PF ಸೌಲಭ್ಯ ಇರುತ್ತದೆ)
7760043596

ಸಂಜೀವಿನಿ ಆಯುರ್ವೇದ
ಸಕ್ಕರೆ ಖಾಯಿಲೆ, ಮಂಡಿನೋವು, ಗ್ಯಾಸ್ಟ್ರಿಕ್ ಅಸ್ತಮ, ಪಾರ್ಶ್ವವಾಯು (ಲಕ್ವ) ಚರ್ಮದ ಖಾಯಿಲೆಗಳು, ಪುರುಷ ಮತ್ತು ಮಹಿಳೆಯರ ಲೈಂಗಿಕ ಸಮಸ್ಯೆಗಳು ಇನ್ನೂ ಎಲ್ಲಾ ಖಾಯಿಲೆಗಳಿಗೆ 100% ಆಯುರ್ವೇದ ಚಿಕಿತ್ಸೆಗಾಗಿ ಸಂಪರ್ಕಿಸಿ ಯಾವುದೇ ಅಡ್ಡ ಪರಿಣಾಮ ಇರುವುದಿಲ್ಲ
6361740552 / 9449408551

ನಿವೃತ್ತರಿಗೆ ವಿಶೇಷ ಉದ್ಯೋಗ ಅವಕಾಶ
ಕೇಂದ್ರ, ರಾಜ್ಯ, ಬ್ಯಾಂಕಿಂಗ್, ಸಾರ್ವಜನಿಕ ಖಾಸಗಿ ಕ್ಷೇತ್ರದ ನಿವೃತ್ತರು, Housewives, ಬಿಸಿನೆಸ್ sector ಇವರಿಗೆ ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ವಿಶೇಷ ಸುವರ್ಣ ಅವಕಾಶ. Salary, PF, ESI, ಇತರೆ ಬೆನಿಫಿಟ್‌ಗಳಿವೆ. Free seminar 4-2-2023 - 11 am. Hotel ಮೌರ್ಯ ರೆಸಿಡೆನ್ಸಿ, ಹರ್ಷ ರಸ್ತೆ (near Woodlands theatre). Lunch arranged.
Limited seats. Contact:
9880115979, 9845458130, 8217253712, 7349052084

SITE FOR SALE
30x46, South face site sale at University Layout.
Call: 9880273834

ಕಳೆದಿದೆ
ಶ್ರೀ ನಾಗರಾಜು ಬಿನ್ ಲೇಟ್ ಮಾದಯ್ಯ, ಮೈಸೂರು ಸಿಟಿ, ವಿದ್ಯಾರಣ್ಯಪುರಂ, 2ನೇ ಮೇನ್, 5ನೇ ಕ್ರಾಸ್, ಮನೆ ನಂ.1047/6 ರಲ್ಲಿ ವಾಸವಾಗಿರುವ ನಾನು ಈ ಹಿಂದೆ ನಗರಾಭಿವೃದ್ಧಿ ವಿಶ್ವಸ್ತ ಮಂಡಳಿ, ಮೈಸೂರು ರವರು 1985 ರಲ್ಲಿ ನನಗೆ ಮೈಸೂರು ನಾರ್ಥ್ ಈಸ್ಟ್ ಎನ್.ಆರ್.ಮೊಹಲ್ಲಾದಲ್ಲಿ ನಿವೇಶನ ಸಂಖ್ಯೆ 453 ಅನ್ನು ಮಂಜೂರು ಮಾಡಿ ಮಂಜೂರಾತಿ ಪತ್ರ ಹಾಗೂ ಸ್ವಾಧೀನ ಪತ್ರ ನೀಡಿರುತ್ತಾರೆ. ಸದರಿ ನಿವೇಶನದ ವಿಸ್ತೀರ್ಣ 40×30 ಆಗಿರುತ್ತದೆ. ಆದರೆ ಈ ಸದರಿ ನಿವೇಶನ ಮೂಲ ದಾಖಲಾತಿಗಳು ಕಳೆದುಹೋಗಿರುತ್ತದೆ. ಈ ಮೂಲ ದಾಖಲಾತಿಗಳು ಸಿಕ್ಕ ಪಕ್ಷದಲ್ಲಿ ಮೇಲ್ಕಂಡ ನನ್ನ ವಿಳಾಸಕ್ಕೆ ತಲುಪಿಸುವುದು.
8861869201

JOB / BUSINESS OPPORTUNITY
Do you wish you could do something meaningful? Associate yourself with India's most trusted and Leading Brand. A dedicated Team to support n guide you. Work from Anywhere / Any-time. Stay Independent n Earn regular Income. Reward n Recognition for every step you take on this path. For details Please Contact:
Mamtha: 6364117825
Geetha: 8880390726

ಬೇಕಾಗಿದ್ದಾರೆ
ಡಿಜಿಟಲ್ ಸೇವಾ ಕೇಂದ್ರಕ್ಕೆ ಕಂಪ್ಯೂಟರ್ ತಿಳಿದವರು ಮತ್ತು ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಹಾಕಲು ಕೆಲಸಕ್ಕೆ ಬೇಕಾಗಿದ್ದಾರೆ. (CSC) ಸ್ಥಳ: ವಿದ್ಯಾರಣ್ಯಪುರಂ
9886681313

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಬೇಕಾಗಿದ್ದಾರೆ. Salary : 13,000 - 21,000+ESI, PF ವಿದ್ಯಾರ್ಹತೆ: 10th, PUC, ITI, Diploma and Any Degree. ಇಂದೇ ಸಂಪರ್ಕಿಸಿ.
9035734821

WANTED CAR DRIVER
ಕನಿಷ್ಠ 5 ವರ್ಷ ಚಾಲನ ಅನುಭವವಿರುವ ವಾಹನ ಚಾಲನೆ ನಡೆಸಿರುವ ಹಾಗೂ ಬೆಂಗಳೂರು ನಗರದ ಸಂಪೂರ್ಣ ಪರಿಚಯವಿರುವ ಚಾಲಕರು ಬೇಕಾಗಿದ್ದಾರೆ. ವೇತನ Rs.15,000 - 25,000 ಆಸಕ್ತರು ಸಂಪರ್ಕಿಸಿ.
9606889689

ಬೇಕಾಗಿದ್ದಾರೆ
1) ಶಾಲಾ ವಾಹನಕ್ಕೆ ಚಾಲಕರು (ಸ್ಕೂಲ್ ಬಸ್ ಡ್ರೈವರ್) ಬೇಕಾಗಿದ್ದಾರೆ.
2) ಸ್ಕೂಲ್ ಆಯಾ ಹಾಗೂ ಅಟೆಂಡರ್ ಬೇಕಾಗಿದ್ದಾರೆ. ನೇತಾಜಿ ಸರ್ಕಲ್, ಕನಕದಾಸನಗರ ಹತ್ತಿರ ಇರುವವರು ಸಂಪರ್ಕಿಸಿ:
9606889689

ತಕ್ಷಣವೇ ಕೆಲಸ
ಮೈಸೂರು, ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಡ್ರೈವರುಗಳು, ಹೆಲ್ಪರುಗಳು, ಟೈಲರುಗಳು, ಹುಡುಗರು, ಹುಡುಗಿಯರು ಮತ್ತು ಗಂಡಸರು, ಹೆಂಗಸರುಗಳು ಬೇಕಾಗಿದ್ದಾರೆ. ESI ಮತ್ತು PF ಹಾಗೂ ವಾರದ ರಜೆ ಇರುತ್ತದೆ.
7795285485 / 8105249880

ಮುಡಾ ಸೈಟ್ ಮಾರಾಟಕ್ಕಿದೆ
ವಿಕ್ರಾಂತ್ ಟೈರ್ ಎದುರು, ಚಾಮುಂಡೇಶ್ವರಿ ರೈಲ್ವೆ ಬಡಾವಣೆ ಪಕ್ಕ, ಮೈಸೂರು
40x60
8453459670

ನಿವೇಶನ ಮಾರಾಟಕ್ಕಿದೆ
ನ್ಯಾಯಾಂಗ ಬಡಾವಣೆ, ಪೂರ್ವದಿಕ್ಕು, 20x32, Site No.529 ಕ್ರೈಸ್ತ ಪಬ್ಲಿಕ್ ಸ್ಕೂಲ್ ಹಿಂಭಾಗ
9740598753

RS CONSTRUCTIONS
ENGINEERS & CONTRACTORS
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,80,000/– ಪ್ರತಿ ಚದರ
ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ
9538575009 / 7019151884

ತಕ್ಷಣ ಬೇಕಾಗಿದ್ದಾರೆ
ಆಫೀಸ್ ಸ್ಟಾಫ್ ಹುದ್ದೆಗೆ
ಇಂಗ್ಲೀಷ್, ಹಿಂದಿ, ತೆಲುಗು ಭಾಷೆ ಚೆನ್ನಾಗಿ ಮಾತನಾಡುವವರು ಬೇಕಾಗಿದ್ದಾರೆ
9448415584
0821-3502246

ಮನೆ ಮಾರಾಟಕ್ಕಿದೆ
20x30, 2BHK
ದಟ್ಟಗಳ್ಳಿ ನಂದಿ ಸರ್ಕಲ್ ಹತ್ತಿರ, ಮೈಸೂರು
9741097755

ಬೇಕಾಗಿದ್ದಾರೆ
ಟ್ರಕ್ ಚಾಲಕ ಮತ್ತು ಉಸ್ತುವಾರಿ ಬೇಕಾಗಿದ್ದಾರೆ. ಸಂಸಾರಸ್ಥರಿಗೆ ಮೊದಲ ಆದ್ಯತೆ. ಸಂಭಾವನೆ ರೂ.13,000 ಮತ್ತು ಮೇಲ್ಪಟ್ಟು. ವಸತಿ ಸೌಲಭ್ಯವಿರುತ್ತದೆ.
ಸ್ಥಳ: ವಿರಾಜಪೇಟೆ, ಸಂಪರ್ಕಿಸಿ:
9611280648
7676352251

ಬಾಡಿಗೆಗೆ ಇದೆ
ರೂಂ ಮತ್ತು ಅಂಗಡಿಗಳು ಪಂಪಪತಿ ರಸ್ತೆ, ಜಯನಗರ ಮುಖ್ಯ ರಸ್ತೆ, ಬೇಡರ ಕಣ್ಣಪ್ಪ ದೇವಸ್ಥಾನದ ಹತ್ತಿರ, ಮೆಡಿಕಲ್ ಸ್ಟೋರ್ ಹಾಗೂ ಕ್ಲಿನಿಕ್‌ಗೆ ಸೂಕ್ತವಾದ ಸ್ಥಳ.
7353292255
9535586096

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಹುಡುಗ / ಹುಡುಗಿಯರು ಬೇಕಾಗಿದ್ದಾರೆ.
ಸಂಬಳ: 12,000/–
8892258814

ಸೈಟು ಬೇಕಾಗಿದೆ
ವಿಜಯನಗರ 4ನೇ ಹಂತ, 2ನೇ ಫೇಸ್, 20x30 ಹಾಗೂ 30x40 ಸೈಟು ಬೇಕಾಗಿದೆ. ಸಂಪರ್ಕಿಸಿ:
8867567754

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
#2921/A, ಸರಸ್ವತಿಪುರಂ, ಮೈಸೂರು
ನಾವು ರೆವಿನ್ಯೂ ಮನೆಗಳಿಗೆ ಮಾರ್ಟ್‌ಗೇಜ್ ಲೋನ್ ಮಾಡಿಕೊಡುತ್ತೇವೆ. ಈ ಕೆಳಗಿನ ಸ್ಥಳಗಳಿಗೆ, ರಾಘವೇಂದ್ರ ನಗರ, ಕನಕಗಿರಿ, ಜನತನಗರ, ಲೋಕನಾಯಕ ನಗರ, ಗಣೇಶನಗರ, ಮಹದೇವಪುರ. Loan Amount 5,00,000 to 20,00,000.
8088647887

ಟೆಲಿಕಾಮ್ ಲೇಔಟ್
30x40 ಸೈಟು N/F @ Rs. 25 ಲಕ್ಷ
ತಕ್ಷಣ ಮನೆ ಕಟ್ಟಬಹುದು, ಬ್ಯಾಂಕ್ ಲೋನ್ ಲಭ್ಯ, ಇಲವಾಲ ಬಸ್ಸು ನಿಲ್ದಾಣ ಹಿಂಭಾಗ, ಹುಣಸೂರು ರೋಡ್, ಮೈಸೂರು
9538583377

ಬೇಕಾಗಿದ್ದಾರೆ
ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. (ಪ್ರತಿ ದಿನ 400 ರೂ. ಸಂಬಳ) ವಿಜಯನಗರ 2ನೇ ಹಂತ, (ಸುತ್ತಮುತ್ತಲಿನವರಿಗೆ ಆದ್ಯತೆ)
9844957288
8310266086

WATER PROOFING PAINTING WORK
1) Terrace Water Proofing Work.
2) Exterior Water Proofing Painting Work .
(with Warranty). Contact:
8088168269

TELECALLERS & FIELD EXECUTIVES
Male / Female
Fresher / Experienced
Required for Bank Collections
Contact:
9066675785

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಸಣ್ಣ ನೀರಾವರಿ ಖಾತೆ ಗೌರವ ಹೆಚ್ಚಿಸಿದ ಪುಟ್ಟರಾಜು

ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಶ್ಲಾಘನೆ



ಚಿನಕುರಳಿ, ಫೆ.1– ಸಣ್ಣ ನೀರಾವರಿ ಸಚಿವರಾಗಿ ಉತ್ತಮ ಕೆಲಸ ಮಾಡುವ ಮೂಲಕ ಸಣ್ಣ ನೀರಾವರಿ ಖಾತೆಯ ಗೌರವ ಹೆಚ್ಚಿಸಿದ ಕೀರ್ತಿ ಶಾಸಕ ಸಿ.ಎಸ್. ಪುಟ್ಟರಾಜು ಅವರಿಗೆ ಸಲ್ಲುತ್ತದೆ ಎಂದು ಶ್ರೀಕ್ಷೇತ್ರ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಚಿನಕುರಳಿ ಗ್ರಾಮದಲ್ಲಿ ಬುಧವಾರ ನಡೆದ ಶ್ರೀರಾಮೇಶ್ವರ, ಶ್ರೀಆಂಜನೇಯಸ್ವಾಮಿ ಮತ್ತು ಪರಿವಾರ ದೇವಸ್ಥಾನಗಳ, ಪಾರ್ಕ್‌ಗಳ ಲೋಕಾರ್ಪಣೆ ಹಾಗೂ ಶ್ರೀರಾಮೇಶ್ವರ ಸಮುದಾಯ ಭವನ ಉದ್ಘಾಟಿಸಿ ಅವರು ಮಾತನಾಡಿದರು.

ಸಿ.ಎಸ್.ಪುಟ್ಟರಾಜು ಸಣ್ಣ ನೀರಾವರಿ ಸಚಿವರಾಗಿ ಕೆಲಸ ಮಾಡಲು ಸಿಕ್ಕ ಅಲ್ಪಾವಧಿ ಕಾಲಾವಕಾಶದಲ್ಲಿ ಉತ್ತಮವಾಗಿ ಕೆಲಸ ಮಾಡಿ ಕೆರೆಕಟ್ಟೆಗಳು, ಚೆಕ್‌ಡ್ಯಾಂಗಳ ನಿರ್ಮಾಣ ಮಾಡಿಕೊಡುವ ಮೂಲಕ ಸಣ್ಣನೀರಾವರಿ ಖಾತೆಗೆ ಗೌರವ ಹೆಚ್ಚಿಸುವ ಕೆಲಸ ಮಾಡಿದರು ಎಂದು ಬಣ್ಣಿಸಿದರು. ಚುಂಚನಗಿರಿ ಕ್ಷೇತ್ರದಲ್ಲೂ ಹಲವು ಕೆರೆಗಳನ್ನು ಅಭಿವೃದ್ಧಿ ಪಡಿಸಿದ್ದಾರೆ ಎಂದರು.

ಶ್ರೀ ಪುರುಷೋತ್ತಮನಂದನಾಥ ಸ್ವಾಮೀಜಿ ಮಾತನಾಡಿ, ಮನುಷ್ಯ ಜನ್ಮ ಅಪರೂಪವಾಗಿದ್ದು ಆ ಜನ್ಮ ಸಾರ್ಥಕವಾಗಬೇಕಾದರೆ ಜೀವನದಲ್ಲಿ ಜನರಿಗೆ ಅನುಕೂಲವಾಗುವ ಸಾರ್ಥಕತೆಯ ಜನಪರ ಕೆಲಸಗಳನ್ನು ಮಾಡಬೇಕು ಎಂದು ಸಲಹೆ ನೀಡಿದರು.

ಜಿಪಂ ಸದಸ್ಯರಾಗಿದ್ದ ಸಂದರ್ಭದಲ್ಲಿ ಸಿ.ಎಸ್.ಪುಟ್ಟರಾಜು, ಎನ್.ಚಲುವರಾಯಸ್ವಾಮಿ ಇಬ್ಬರೂ ಅಣ್ಣ–ತಮ್ಮಂದಿರಂತೆ ಮಠಕ್ಕೆ ಬಂದು ಗುರುಗಳ ಆಶೀರ್ವಾದ ಪಡೆದು ಸೇವೆ ಸಲ್ಲಿಸಿದ್ದಾರೆ. ಸಿ.ಎಸ್.ಪುಟ್ಟರಾಜು ಶಾಸಕರಾಗಿ, ಸಚಿವರಾಗಿ ಕ್ಷೇತ್ರ, ಜಿಲ್ಲೆ ಹಾಗೂ ನಾಡಿಗೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಅವರ ಸೇವೆ ಇನ್ನಷ್ಟು ಅವಶ್ಯಕತೆ ನಾಡಿಗಿದೆ. ಅವರು ಸೇವೆ ಸಲ್ಲಿಸಲು ನಾವು ನೀವೆಲ್ಲರು ಅವರಿಗೆ ಸಹಕಾರ ನೀಡಿ ಎಂದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ನಾವು ಚಿಕ್ಕ ವಯಸ್ಸಿನಲ್ಲಿಯೇ ತಾಯಿ ಕಳೆದುಕೊಂಡರೂ ಸಹ ಚಿನಕುರಳಿ ಗ್ರಾಮದ ಜನತೆ ನಮಗೆ ತಬ್ಬಲಿ ಮನೋಭಾವ ಬಾರದಂತೆ ಮನೆಮಗನಂತೆ ನೋಡಿಕೊಂಡು ಬೆಳೆಸಿದರು. ಚಿಕ್ಕ ವಯಸ್ಸಿನಲ್ಲಿಯೇ ಯುವಕರು ಶ್ರೀರಾಮೇಶ್ವರ ಯುವಕರ ಬಳಗದ ಅಧ್ಯಕ್ಷನಾಗಿ ನೇಮಿಸಿ ನನ್ನ ನಾಯಕನಾಗಿ ಬೆಳೆಸಿದರು. ಅವರೆಲ್ಲರ ಬಯಕೆಯಂತೆ ಚಿನಕುರಳಿ ಹಾಗೂ ಸುತ್ತಮುತ್ತಲಿನ ಗ್ರಾಮದ ಜನರ ಸಹಕಾರದಿಂದ ಗ್ರಾಮದ ಸಮುದಾಯ ಭವನ, ದೇವಸ್ಥಾನಗಳನ್ನು ನಿರ್ಮಾಣ ಮಾಡಿ ಉದ್ಘಾಟನೆ ಮಾಡಿಸಲಾಗಿದೆ ಎಂದು ಹೇಳಿದರು.

ಚಿನಕುರಳಿ ಆಗಮಿಸಿದ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಅವರಿಗೆ ಮಹಿಳೆಯರು ಪೂರ್ಣಕುಂಭ, ವಿವಿಧ ಕಲಾತಂಡಗಳೊಂದಿಗೆ ಅದ್ದೂರಿಯಾಗಿ ವಿವಿಧ ರಸ್ತೆಗಳಲ್ಲಿ ಮೆರವಣಿಗೆ ಮಾಡಿಕೊಂಡು ವೇದಿಕೆ ಕರೆತರಲಾಯಿತು. ಇದೇ ವೇಳೆ ಹೊಸದಾಗಿ ನಿರ್ಮಿಸಿರುವ ಎಚ್.ಡಿ.ದೇವೇಗೌಡ, ಕುವೆಂಪು ಹಾಗೂ ಬಾಲಗಂಗಾಧರನಾಥ ಸ್ವಾಮೀಜಿಗಳ ಹೆಸರಿನ ಪಾರ್ಕ್ ಉದ್ಘಾಟನೆ ಮಾಡಲಾಯಿತು.

ಸಮಾರಂಭದಲ್ಲಿ ವಿಧಾನಪರಿಷತ್ ಮಾಜಿ ಸದಸ್ಯರಾದ ಕೆ.ಟಿ.ಶ್ರೀಕಂಠೇಗೌಡ, ಅಪ್ಪಾಜಿಗೌಡ, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಗುರುಸ್ವಾಮಿ, ಚಲುವರಾಜು, ವೈದ್ಯರಾದ ಡಾ.ಲಕ್ಷ್ಮೀಗೌಡ, ಡಾ.ಸೋಮಶೇಖರ್, ಡಾ. ತಿಬ್ಬೇಗೌಡ, ರಮೇಶ್ ಮಂಜೇಗೌಡ, ಶಾಂತರಾಮು, ಡಾ.ಎಚ್.ಆರ್.ತಿಮ್ಮೇಗೌಡ, ಜಯಕುಮಾರಿ, ಬೆಳ್ಳಾಳೆ ಮಲ್ಲೇಶ್, ಎಚ್.ಎಲ್.ಶಿವಣ್ಣ, ರಮೇಶ್, ಮಾದಪ್ಪ, ನಾಗರಾಜು, ಯಜಮಾನರಾದ ತಮ್ಮಣ್ಣೇಗೌಡ, ಸುಬ್ಬೇಗೌಡ ಸೇರಿದಂತೆ ಹಲವರು ಹಾಜರಿದ್ದರು.

ಸಾಮಾಜಿಕ ಕಾರ್ಯಗಳೊಂದಿಗೆ ಮನ್‌ಮುಲ್ ಅಧ್ಯಕ್ಷ ರಾಮಚಂದ್ರು ಹುಟ್ಟುಹಬ್ಬ ಆಚರಣೆ



ಮಂಡ್ಯ, ಫೆ.1– ಮಂಡ್ಯ ವಿಧಾನಸಭಾ ಕ್ಷೇತ್ರದ ಜನಪ್ರಿಯ ಮುಖಂಡ ಹಾಗೂ ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು ಅವರ ಹುಟ್ಟುಹಬ್ಬವನ್ನು ಮಂಡ್ಯ ತಾಲೂಕಿನ ವಿವಿಧೆಡೆ ಅರ್ಥಪೂರ್ಣವಾಗಿ ಹಾಗೂ ಅದ್ದೂರಿಯಾಗಿ ಆಚರಿಸಲಾಯಿತು.

ಕಳೆದ ತಡರಾತ್ರಿಯಿಂದಲೇ ಮಂಡ್ಯ ನಗರದ ಕಲ್ಲಹಳ್ಳಿಯಲ್ಲಿರುವ ರಾಮಚಂದ್ರು ನಿವಾಸದ ಬಳಿ ಜಮಾಯಿಸಿದ ಸಾವಿರಾರು ಮಂದಿ ಅವರ ಬೆಂಬಲಿಗರು ಮನೆ ಬಳಿಯೇ ಕೇಕ್ ಕತ್ತರಿಸಿ, ಸನ್ಮಾನಿಸಿ ಹುಟ್ಟುಹಬ್ಬದ ಶುಭ ಕೋರಿದರು. ಬುಧವಾರ ಬೆಳಿಗ್ಗೆ ಮಂಡ್ಯದ ವಿವಿಧ ದೇಗುಲಗಳಿಗೆ ಭೇಟಿ ನೀಡಿದ ರಾಮಚಂದ್ರು ವಿಶೇಷ ಪೂಜೆ ಸಲ್ಲಿಸಿದರು. ಅವರ ಬೆಂಬಲಿಗರು ಸಹ ಮಂಡ್ಯದ ವಿವಿಧ ದೇಗುಲಗಳಿಗೆ ಭೇಟಿ ನೀಡಿ ರಾಮಚಂದ್ರು ಅವರ ಹೆಸರಲ್ಲಿ ವಿಶೇಷ ಪೂಜೆ, ಪುನಸ್ಕಾರ ನೆರವೇರಿಸಿದರು.

ಬಳಿಕ ಮಂಡ್ಯ ತಾಲೂಕಿನಾದ್ಯಂತ ಪ್ರವಾಸ ನಡೆಸಿದ ರಾಮಚಂದ್ರು, ಮಂಡ್ಯ ನಗರ, ಬಸರಾಳು, ಕೀಲಾರ, ಕೆರಗೋಡು, ಶಿವಳ್ಳಿ ಭಾಗದಲ್ಲಿ ಬೆಂಬಲಿಗರು ಹಮ್ಮಿಕೊಂಡಿದ್ದ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಅಭಿನಂದನೆ ಸ್ವೀಕರಿಸಿದರು. ಭೇಟಿ ನೀಡಿದ ಪ್ರತಿ ಗ್ರಾಮದಲ್ಲೂ ಪಟಾಕಿ ಸಿಡಿಸಿ, ಕೇಕ್ ಕತ್ತರಿಸಿ, ಬೃಹತ್ ಅಭಿನಂದನೆ ಸಲ್ಲಿಸುವ ಮೂಲಕ ರಾಮಚಂದ್ರು ಅವರಿಗೆ ಬೆಂಬಲಿಗರು ಶುಭಕೋರಿದರು.

ಮಂಡ್ಯ ನಗರದ ಎಸ್‌ಬಿ ಗ್ರೀನ್ ಪ್ಯಾಲೇಸ್‌ನಲ್ಲಿ ರಾಮಚಂದ್ರು ಅವರ ಹುಟ್ಟುಹಬ್ಬದ ಅಂಗವಾಗಿ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ನೂರಾರು ಮಂದಿ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು. ಬೃಹತ್ ವೇದಿಕೆಯಲ್ಲಿ ಬಿ.ಆರ್.ರಾಮಚಂದ್ರು ಅವರ ಹುಟ್ಟುಹಬ್ಬ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ರಾಮಚಂದ್ರು, ಮಂಡ್ಯ ಜನರ ಪ್ರೀತಿ ಇದೇ ರೀತಿ ನನ್ನ ಮೇಲೆ ಇರಬೇಕು. ಕಳೆದ ಮೂರ್‍ನಾಲ್ಕು ವರ್ಷಗಳಿಂದ ನಿರಂತರವಾಗಿ ಮಂಡ್ಯ ಜನರ ಸೇವೆ ಮಾಡುತ್ತಾ ಬಂದಿದ್ದು, ನಿಮ್ಮ ಸೇವೆ ಮಾಡಲು ಇಲ್ಲಿನ ಜನ ಇನ್ನೂ ಹೆಚ್ಚಿನ ಶಕ್ತಿ ನೀಡಬೇಕು. ಅಧಿಕಾರ ಇರಲಿ, ಇಲ್ಲದಿರಲಿ ನಿರಂತರವಾಗಿ ಜನರ ನಡುವೆ ಇದ್ದೇನೆ. ಜನರ ಕಷ್ಟ ಸುಖಗಳಿಗೆ ಸ್ಪಂದಿಸಿದ್ದೇನೆ. ನಿಮ್ಮ ಆಶೀರ್ವಾದ ಇದೇ ರೀತಿ ಇರಬೇಕು ಎಂದರು.

ಕಳೆದ ಹಲವು ವರ್ಷಗಳಿಂದ ಶಾಲಾ ಮಕ್ಕಳಿಗೆ ಉಚಿತ ಬ್ಯಾಗ್ ವಿತರಣೆ, ಬಡವರು, ಕಾರ್ಮಿಕರು, ರೈತರು, ನೊಂದವರಿಗೆ ಸಹಾಯಾಸ್ತ ನೀಡಿದ್ದು, ಶಂಭು ಸೇವಾ ಟ್ರಸ್ಟ್ ಹೆಸರಲ್ಲಿ ಧರ್ಮಸ್ಥಳ ಧಾರ್ಮಿಕ ಯಾತ್ರೆಯನ್ನು ನಡೆಸಿದ್ದೇನೆ. ಈ ಎಲ್ಲವೂ ಸಹ ಮುಂದೆಯೂ ಇದೇ ರೀತಿ ಮುಂದುವರೆಯಲಿದ್ದು, ಇದನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ ಎಂದ ಅವರು, ಜನರ ಪ್ರೀತಿಗೆ ಚಿರ ಋಣಿಯಾಗಿದ್ದೇನೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮನ್‌ಮುಲ್ ಉಪಾಧ್ಯಕ್ಷ ರಘುನಂದನ್, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಮುಖಂಡರಾದ ಸುರೇಶ್, ತಗ್ಗಹಳ್ಳಿ ವೆಂಕಟೇಶ್ ಸೇರಿದಂತೆ ಹಲವು ಮಂದಿ ಪಾಲ್ಗೊಂಡು ಶುಭಕೋರಿದರು.

ನಂತರ ಮಂಡ್ಯ ನಗರದ ಮಿಮ್ಸ್ ಆಸ್ಪತ್ರೆಯ ಆವರಣದಲ್ಲಿರುವ ಮಮತೆಯ ಮಡಿಲು ವೇದಿಕೆ ಮೂಲಕ ನೂರಾರು ಮಂದಿ ರೋಗಿಗಳು ಹಾಗೂ ಅವರ ಕುಟುಂಬಸ್ಥರಿಗೆ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು. ಜೊತೆಗೆ ನಗರದ ಸ್ವರ್ಣಸಂದ್ರದಲ್ಲಿರುವ ಪ್ರೇರಣಾ ಅಂಧ ಶಾಲೆ ಸೇರಿದಂತೆ ವಿವಿಧ ವೃದ್ಧಾಶ್ರಮಗಳಲ್ಲಿ ರಾಮಚಂದ್ರು ಅವರ ಹೆಸರಲ್ಲಿ ಅನ್ನದಾನ ಮಾಡುವ ಮೂಲಕ ಅರ್ಥಪೂರ್ಣವಾಗಿ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ಜಮೀನು ವಿವಾದ: ಗ್ರಾಪಂ ಸದಸ್ಯನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ

ಇಬ್ಬರ ಬಂಧನ

ನಾಗಮಂಗಲ, ಫೆ.1– ದರಖಾಸ್ತು ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ನಡೆದ ಗಲಾಟೆಯಲ್ಲಿ ಗ್ರಾಮ ಪಂಚಾಯಿತಿ ಸದಸ್ಯನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿರುವ ಘಟನೆ ತಾಲೂಕಿನ ದೇವಲಾಪುರ ಹೋಬಳಿಯ ಬಿಟಗೋನಹಳ್ಳಿ ಗ್ರಾಮದಲ್ಲಿ ನಡೆದಿದೆ. ಕಾರಗೆರೆ ಗ್ರಾಮ ಪಂಚಾಯಿತಿ ಸದಸ್ಯ ನಾಗರಾಜು ಹಲ್ಲೆಗೊಳಗಾದವರಾಗಿದ್ದು, ಇವರನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿವರ: ಕಲ್ಲುವೀರನಕೊಪ್ಪಲು ಗ್ರಾಮದ ರಾಮಿ ಅಲಿಯಾಸ್ ರಮೇಶ್ ಎಂಬುವರ ತಂದೆಗೆ ದರಖಾಸ್ತಿನಲ್ಲಿ ಇತ್ತೀಚೆಗೆ ನಾಲ್ಕು ಎಕರೆ ಜಮೀನು ಮಂಜೂರಾಗಿತ್ತು. ಆದರೆ ಅವರ ಸಂಬಂಧಿ ರಾಮಚಂದ್ರು ಎಂಬುವವರು ಈ ಜಮೀನಿನಲ್ಲಿ ತನಗೂ ಸ್ವಲ್ಪ ಪಾಲು ಕೊಡಬೇಕೆಂದು ಕೇಳಿದಾಗ ಅದಕ್ಕೆ ರಾಮಿ ಅವರ ತಂದೆ ಒಪ್ಪಿಕೊಂಡಿದ್ದರೆಂದು ಹೇಳಲಾಗಿದೆ. ಈ ವಿಚಾರವಾಗಿ ರಾಮಿ ಮತ್ತು ರಾಮಚಂದ್ರು ನಡುವೆ ಆಗಿಂದಾಗ್ಗೆ ಮಾತಿನ ಚಕಮಕಿ ನಡೆಯುತ್ತಿತ್ತು.



ನಾಗರಾಜ್

ರಾಮಿ ಅಲಿಯಾಸ್ ರಮೇಶ್ ಅವರಿಗೆ ಸೋಮವಾರ ಸಂಜೆ ಬಿಟಗೋನಹಳ್ಳಿಯ ಗೋವಿಂದ ಎಂಬಾತ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದನ್ನೆನ್ನಲಾಗಿದ್ದು, ಈ ಹಿನ್ನೆಲೆಯಲ್ಲಿ ರಮೇಶ್ ಅವರು ಕಾರಗೆರೆ ಗ್ರಾಪಂ ಸದಸ್ಯ ನಾಗರಾಜ್ ಎಂಬುವವರನ್ನು ಕಾರಿನಲ್ಲಿ ಕರೆದುಕೊಂಡು ಬಿಟಗೋನಹಳ್ಳಿ ಗ್ರಾಮ ಪ್ರವೇಶಿಸುತ್ತಿದ್ದಂತೆ ಬೈಕ್‌ನಲ್ಲಿ ಬಂದ ರೋಹಿತ್ ಎಂಬಾತ ನಾಗರಾಜ್ ಅವರ ಎದೆಗೆ ಡ್ರಾಗರ್‌ನಿಂದ ಚುಚ್ಚಿ ಪರಾರಿಯಾಗಿದ್ದಾನೆ. ಅದೇ ವೇಳೆ ನಾಗರಾಜ್ ತಲೆಯ ಮೇಲೆ ರಾಮಚಂದ್ರು ಮಾರಕಾಸ್ತ್ರದಿಂದ ಹಲ್ಲೆ ನಡೆಸಿದ್ದಾನೆ ಎಂದು ಹೇಳಲಾಗಿದೆ. ತೀವ್ರವಾಗಿ ಗಾಯಗೊಂಡ ನಾಗರಾಜು ಅವರನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ಸೇರಿಸಿದ್ದಾರೆ. ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ರಾಮಚಂದ್ರು ಮತ್ತು ಗೋವಿಂದ ಎಂಬುವರನ್ನು ಬಂಧಿಸಲಾಗಿದೆ. ರೋಹಿತ್ ಅಲಿಯಾಸ್ ಹರೀಶ್‌ಗೌಡನಿಗಾಗಿ ಪೋಲೀಸರು ಹುಡುಕಾಟ ನಡೆಸಿದ್ದಾರೆ.

ಮಾಜಿ ಶಾಸಕ ಶಿವರಾಮೇಗೌಡರ ಸಹೋದರ ನಿಧನ



ನಾಗಮಂಗಲ, ಫೆ1– ಮಾಜಿ ಶಾಸಕ, ಎಲ್.ಆರ್. ಶಿವರಾಮೇಗೌಡರ ಸಹೋದರ ಬಸವಲಿಂಗೇಗೌಡ ಇಂದು ಲಾಳನಕೆರೆ ಗ್ರಾಮದಲ್ಲಿ ನಿಧನರಾಗಿದ್ದಾರೆ. ಅವರಿಗೆ ಸುಮಾರು 70 ವರ್ಷ ವಯಸ್ಸಾಗಿದ್ದು, ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ. ಶಿವರಾಮೇಗೌಡರು ರಾಜಕಾರಣಕ್ಕೆ ಬಂದಂದಿನಿಂದಲೂ ಇವರು ಅವರ ಬೆನ್ನೆಲುಬಾಗಿ ನಿಂತಿದ್ದು, ಅವರ ಪರ ಸಂಘಟನೆಯಲ್ಲಿಯೂ ಸಹ ಕೈಜೋಡಿಸಿದ್ದರು.

ಕೆ.ಆರ್.ಪೇಟೆ ಬಳಿ ಕಬ್ಬಿನ ಗದ್ದೆಯಲ್ಲಿ ಚಿರತೆ ಪ್ರತ್ಯಕ್ಷ

ಕೆ.ಆರ್.ಪೇಟೆ, ಫೆ.1– ತಾಲೂಕಿನ ವಳಗೆರೆಮೆಣಸ ಗ್ರಾಮದ ಬಳಿ ಟ್ರಾಕ್ಟರ್‌ನಲ್ಲಿ ಜಮೀನು ಉಳುಮೆ ಮಾಡುತ್ತಿದ್ದ ರೈತರೊಬ್ಬರಿಗೆ ಚಿರತೆ ಕಾಣಿಸಿಕೊಂಡಿದ್ದು, ಗ್ರಾಮದಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ರೈತ ಮನು ಎಂಬಾತ ವಳಗೆರೆಮೆಣಸ ಗ್ರಾಮದ ಇಂಜಿನಿಯರ್ ಕುಮಾರ್ ಅವರ ಜಮೀನನ್ನು ಟ್ರಾಕ್ಟರ್‌ನಲ್ಲಿ ಉಳುಮೆ ಮಾಡುತ್ತಿದ್ದ ವೇಳೆ ಅನತಿ ದೂರದಲ್ಲಿರುವ ಕಬ್ಬಿನ ಗದ್ದೆಯ ಬಳಿ ಚಿರತೆಯೊಂದು ಹಾದು ಹೋಗುತ್ತಿರುವುದು ಗೋಚರಿಸಿದೆ. ಕೂಡಲೇ ಟ್ರಾಕ್ಟರ್ ಚಾಲಕ ಮನು ಚಿರತೆಯ ಚಲನ–ವಲನವನ್ನು ಮೊಬೈಲ್ ಮೂಲಕ ವಿಡಿಯೋ ಚಿತ್ರೀಕರಣ ಮಾಡಿಕೊಂಡು, ಟ್ರಾಕ್ಟರ್‌ನೊಂದಿಗೆ ಗ್ರಾಮಕ್ಕೆ ಬಂದು ಗ್ರಾಮಸ್ಥರಿಗೆ ವಿಚಾರ ಮುಟ್ಟಿಸಿದ್ದಾರೆ. ಚಿರತೆ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಗ್ರಾಮಸ್ಥರು ಭಯಭೀತರಾಗಿದ್ದು, ಜಮೀನಿಗೆ ಹೋಗಲು ಹೆದರಿ ಮನೆಯಲ್ಲಿ ಕುಳಿತಿದ್ದಾರೆ. ಹಾಗಾಗಿ ಕೂಡಲೇ ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳದಲ್ಲಿ ಬೋನಿಟ್ಟು ಕಾರ್ಯಾಚರಣೆ ನಡೆಸಿ, ಚಿರತೆ ಸೆರೆಗೆ ಸೂಕ್ತ ಕ್ರಮ ವಹಿಸಬೇಕು ಎಂದು ವಳಗೆರೆಮೆಣಸ ಗ್ರಾಮಸ್ಥರು ಒತ್ತಾಯ ಮಾಡಿದ್ದಾರೆ.

ಕುರಿ ಮಾರಿ ತಂದ ಹಣ ದೋಚಿದ ಖದೀಮರು

ನಾಗಮಂಗಲ, ಫೆ1– ಮನೆಯಲ್ಲಿದ್ದ ಕುರಿಗಳನ್ನು ಮಾರಿದ ಹಣವನ್ನು ಡೆಪಾಸಿಟ್ ಮಾಡಲು ಬಂದ ಯುವಕನ ಬೈಕಿನ ಡಿಕ್ಕಿಯಲ್ಲಿದ್ದ 1.10 ಲಕ್ಷ ರೂ.ಗಳನ್ನು ಖದೀಮರು ದೋಚಿರುವ ಘಟನೆ ನಾಗಮಂಗಲ ಪಟ್ಟಣದ ಬಿ.ಎಂ.ರಸ್ತೆಯಲ್ಲಿ ನಡೆದಿದೆ. ಕಾಚೇನಹಳ್ಳಿ ಗ್ರಾಮದ ಕಿರಣ್ ಹಣ ಕಳೆದುಕೊಂಡವನಾಗಿದ್ದು, ಇಂದು ತನ್ನ ತಾಯಿಯೊಂದಿಗೆ 12 ಘಂಟೆಯ ಸಮಯದಲ್ಲಿ ಎಸ್‌ಬಿಎಂ ಕಾಂಪ್ಲೆಕ್ಸ್‌ನಲ್ಲಿರುವ ಅಂಚೆ ಕಚೇರಿಗೆ ಬಂದಿದ್ದು, ಅಧಿಕಾರಿಗಳು ಒಂದು ಪಾಸ್‌ಪೋರ್ಟ್ ಭಾವಚಿತ್ರ ತರಲು ಹೇಳಿದ್ದರಿಂದ ಆತ ಹಣವನ್ನು ಬೈಕಿನ ಸೀಟಿನ ಕೆಳಗಿಟ್ಟು ಮತ್ತೆ ಕೆನರಾ ಬ್ಯಾಂಕ್ ಎದುರುಗಡೆ ಇರುವ ಸ್ಟುಡಿಯೋ ಕೆಳಗಡೆ ವಾಹನ ನಿಲ್ಲಿಸಿ ಮೇಲೆ ಹೋಗಿ ಬರುವಷ್ಟರಲ್ಲಿ ಸೀಟಿನ ಕೆಳಗಡೆ ಇದ್ದ 1.10 ಲಕ್ಷವನ್ನು ಕದ್ದು ಪರಾರಿಯಾಗಿದ್ದಾರೆ. ಪ್ರಕರಣ ಪಟ್ಟಣ ಠಾಣೆಯಲ್ಲಿ ದಾಖಲಾಗಿದೆ.

ಮೇಲುಕೋಟೆಯಲ್ಲಿ ನಾಳೆ ಪುನರ್ವಸು ಉತ್ಸವ

ಮೇಲುಕೋಟೆ, ಫೆ.1– ಐತಿಹಾಸಿಕ ಹಾಗೂ ಪೌರಾಣಿಕಕ್ಷೇತ್ರ ಯದುಗಿರಿಯ ಶ್ರೀಚೆಲುವನಾರಾಯಣನ ದೈವೀಕ ಸನ್ನಿಧಿ ಶ್ರೀರಾಮಾನುಜಾಚಾರ್ಯರಿಂದ ಜೀರ್ಣೋದ್ಧಾರಗೊಂಡ "ಪುನರ್ವಸು ಉತ್ಸವ" ಫೆ.3ರಂದು ಮೇಲುಕೋಟೆಯಲ್ಲಿ ವೈಭವದಿಂದ ನಡೆಯಲಿದೆ.

ರಾಮಾನುಜರ ಸನ್ನಿಧಿ ಅರ್ಚಕರಾದ ವಿದ್ವಾನ್ ಬಿ.ವಿ.ಆನಂದಾಳ್ವಾರ್ ನೇತೃತ್ವದಲ್ಲಿ ನಡೆಯಲಿರುವ ಧಾರ್ಮಿಕ ಮಹೋತ್ಸವಕ್ಕಾಗಿ ದೇವಾಲಯ ಸಜ್ಜುಗೊಂಡಿದೆ. ಭಗವದ್ರಾಮಾನುಜರು 11ನೇ ಶತಮಾನದಲ್ಲಿ ಕಾಲ್ನಡಿಗೆಯಲ್ಲಿ ತಮ್ಮ ಶಿಷ್ಯರೊಂದಿಗೆ ಕಗ್ಗತ್ತಲ ಕಾಡಾಗಿದ್ದ ಯದುಗಿರಿಯ ಬೆಟ್ಟ–ಗುಡ್ಡ ಹತ್ತಿ ನಡುಬೆಟ್ಟದ ಮಧ್ಯೆ ಹುತ್ತದಲ್ಲಿದ್ದ ಚೆಲುವನಾರಾಯಣಸ್ವಾಮಿಯನ್ನು ಕಂಡುಹಿಡಿದು ಜಗತ್ತಿಗೆ ಪ್ರಕಾಶಪಡಿಸಿ, ಆರಾಧಿಸಿದ ಮೊದಲ ದಿನದ ಪ್ರತೀಕವಾಗಿ "ಪುನರ್ವಸು ಉತ್ಸವ" ನಡೆಯುತ್ತಾ ಬಂದಿದೆ.

ಕ್ಷೇತ್ರ ಜೀರ್ಣೋದ್ಧಾರಗೊಂಡ ದಿನದ ಅಂಗವಾಗಿ ರಾಮಾನುಜರಿಗೆ ಅಭಿಷೇಕ ನಡೆದ ನಂತರ ಬೆಳಿಗ್ಗೆ 5ಗಂಟೆಗೆ ಕಲ್ಯಾಣಿಗೆ ಉತ್ಸವ ನೆರವೇರಲಿದೆ. ಅಲ್ಲಿ ನಿತ್ಯಾರಾಧನೆ, ಗೋಷ್ಠಿ ಪಾರಾಯಣಗಳು ನಡೆದು ದೇವಾಲಯಕ್ಕೆ ಬಂದ ನಂತರ ಎದುರು ಸೇವೆಯಲ್ಲಿ ಮೂಲಮೂರ್ತಿ ತಿರುನಾರಾಯಣಸ್ವಾಮಿಗೆ ಮಹಾಮಂಗಳಾರತಿ ನಡೆಯಲಿದೆ. ಪುನರ್ವಸು ಉತ್ಸವದ ದಿನ ಬೆಳಗಿನಿಂದ ಇಡೀ ದಿನ ಧಾರ್ಮಿಕ ವಿಧಿವಿಧಾನಗಳು ನಡೆಯಲಿವೆ. ದೇವಾಲಯದ ಆವರಣಗಳನ್ನು ತಳಿರು ತೋರಣಗಳಿಂದ ಸಿಂಗರಿಸಿ, ದೇಗುಲದ ಮುಂದೆ ರಂಗವಲ್ಲಿ ಚಿತ್ತಾರ ಹಾಕಲಾಗುತ್ತದೆ. ಉತ್ಸವಕ್ಕಾಗಿ ವಿಶೇಷ ಚಪ್ಪರ ಹಾಕಲಾಗಿದೆ.

ಆಮದು ಕಾರುಗಳು ಇನ್ನು ದುಬಾರಿ

ನವದೆಹಲಿ, ಫೆ.1– 2023–24ರ ಕೇಂದ್ರ ಬಜೆಟ್‌ನಲ್ಲಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕಸ್ಟಮ್ಸ್ ಸುಂಕವನ್ನು ಹೆಚ್ಚಿಸುವುದಾಗಿ ಘೋಷಿಸುವುದರೊಂದಿಗೆ ಎಲೆಕ್ಟ್ರಿಕ್ ವಾಹನಗಳು ಸೇರಿದಂತೆ ಸಂಪೂರ್ಣವಾಗಿ ಆಮದು ಮಾಡಿಕೊಳ್ಳಲಾದ ಕಾರುಗಳ ಬೆಲೆ ಹೆಚ್ಚಳವಾಗಲಿದೆ.

40,000 ಡಾಲರ್‌ಗಿಂತ ಕಡಿಮೆ ವೆಚ್ಚದ 3,000 ಸಿಸಿ ಗಿಂತ ಕಡಿಮೆ ಇಂಜಿನ್ ಸಾಮರ್ಥ್ಯವಿರುವ ಪೆಟ್ರೋಲ್ ವಾಹನಗಳಿಗೆ ಮತ್ತು 2,500 ಸಿಸಿ ಗಿಂತ ಕಡಿಮೆಯಿರುವ ಡೀಸೆಲ್ ವಾಹನಗಳಿಗೆ ಕಸ್ಟಮ್ಸ್ ಸುಂಕವನ್ನು ಶೇ.60 ರಿಂದ 70ಕ್ಕೆ ಹೆಚ್ಚಿಸಲಾಗಿದೆ. ಅದೇ ರೀತಿ, 40,000 ಡಾಲರ್‌ಗಿಂತ ಹೆಚ್ಚಿನ ವೆಚ್ಚ, ವಿಮೆ ಮತ್ತು ಸರಕು (ಸಿಐಎಫ್) ಮೌಲ್ಯವನ್ನು ಹೊರತುಪಡಿಸಿ ಸಂಪೂರ್ಣವಾಗಿ ನಿರ್ಮಿಸಿದ ಘಟಕಗಳ ರೂಪದಲ್ಲಿ ವಿದ್ಯುತ್ ಚಾಲಿತ ವಾಹನಗಳ ಮೇಲಿನ ಕಸ್ಟಮ್ಸ್ ಸುಂಕವನ್ನು ಶೇ 60 ರಿಂದ ಶೇ 70ಕ್ಕೆ ಏರಿಸಲಾಗಿದೆ.



ಸೆಮಿ–ನಾಕ್ಡ್ ಡೌನ್ (ಎಸ್‌ಕೆಡಿ) ರೂಪದಲ್ಲಿನ ಎಲೆಕ್ಟ್ರಿಕ್ ವಾಹನಗಳು ಸೇರಿದಂತೆ ಇತರೆ ವಾಹನಗಳ ಮೇಲಿನ ಕಸ್ಟಮ್ಸ್ ಸುಂಕವು ಹಿಂದಿನ ಶೇ 30 ರಿಂದ ಶೇ.35ಕ್ಕೆ ಏರಲಿದೆ ಎಂದು ಬಜೆಟ್ ವಿವರಿಸಿದೆ.

ಈಗಾಗಲೇ, 40,000 ಡಾಲರ್‌ಗಿಂತ ಹೆಚ್ಚು ಸಿಐಎಫ್ ಹೊಂದಿರುವ 3,000 ಸಿಸಿಗಿಂತ ಹೆಚ್ಚಿನ ಎಂಜಿನ್ ಸಾಮರ್ಥ್ಯದೊಂದಿಗೆ ಸಿಬಿಯುಗಳಾಗಿ ಆಮದು ಮಾಡಲಾದ ಪೆಟ್ರೋಲ್ ಚಾಲಿತ ಕಾರುಗಳು ಮತ್ತು 2,500 ಸಿಸಿಗಿಂತ ಹೆಚ್ಚು ಸಾಮರ್ಥ್ಯ ಹೊಂದಿರುವ ಡೀಸೆಲ್ ಚಾಲಿತ ವಾಹನಗಳಿಗೆ ಶೇ.100ರಷ್ಟು ಕಸ್ಟಮ್ಸ್ ಸುಂಕವನ್ನು ವಿಧಿಸಲಾಗುತ್ತದೆ.

ಸಂಪೂರ್ಣವಾಗಿ ನಿರ್ಮಿಸಿದ ಘಟಕಗಳ (ಸಿಬಿಯು) ಮೇಲಿನ ಸುಂಕವನ್ನು ಹಿಂದಿನ ಶೇ.60 ರಿಂದ ಶೇ.70ಕ್ಕೆ ಹೆಚ್ಚಿಸಲು ಸರ್ಕಾರ ಪ್ರಸ್ತಾಪಿಸಿದೆ. ಟಾಪ್–ಎಂಡ್ ರೂಪಾಂತರಗಳನ್ನು ಹೊರತುಪಡಿಸಿ ಹೆಚ್ಚಿನ ಐಷಾರಾಮಿ ಕಾರುಗಳನ್ನು ಈಗ ಭಾರತದಲ್ಲಿ ಜೋಡಿಸಲಾಗುತ್ತಿರುವುದರಿಂದ ಇದು ಅಷ್ಟು ಪರಿಣಾಮ ಬೀರುವ ಸಾಧ್ಯತೆಯಿಲ್ಲ. ಅದೇನೇ ಇದ್ದರೂ, ಕಸ್ಟಮ್ಸ್ ಸುಂಕದ ಹೆಚ್ಚಳವು ಮುಂದೆ ದೇಶೀಯ ಉತ್ಪಾದನೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ ಎಂದು ಇಕ್ರಾದ ಹಿರಿಯ ಉಪಾಧ್ಯಕ್ಷ ಮತ್ತು ಗ್ರೂಪ್ ಹೆಡ್ ಕಾರ್ಪೊರೇಟ್ ರೇಟಿಂಗ್ಸ್ ಶಂಶೇರ್ ದಿವಾನ್ ಹೇಳಿದ್ದಾರೆ.

ಇವಿಎಂ ಖರೀದಿಗೆ 1,900 ಕೋಟಿ ನಿಗದಿ

ನವದೆಹಲಿ, ಫೆ1– 2024ರ ಲೋಕಸಭೆ ಚುನಾವಣೆಗೆ ಮುನ್ನ ಎಲೆಕ್ಟ್ರಾನಿಕ್ ಮತಯಂತ್ರಗಳನ್ನು ಖರೀದಿಸಲು ಕೇಂದ್ರ ಕಾನೂನು ಸಚಿವಾಲಯಕ್ಕೆ ಕೇಂದ್ರ ಬಜೆಟ್‌ನಲ್ಲಿ ಸುಮಾರು 1,900 ಕೋಟಿ ರೂ. ನೀಡಲಾಗಿದೆ. ಇಂದು 2023–24ನೇ ಸಾಲಿನ ಬಜೆಟ್ ಮಂಡಿಸಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಚುನಾವಣಾ ಸಮಿತಿಯಿಂದ ಇವಿಎಂ ಖರೀದಿಗೆ 1,891.78 ಕೋಟಿ ರೂ. ನೀಡಲಾಗಿದೆ. ಬ್ಯಾಲೆಟ್ ಯೂನಿಟ್‌ಗಳು, ಕಂಟ್ರೋಲ್ ಯೂನಿಟ್‌ಗಳು ಮತ್ತು ವೋಟರ್ ವೆರಿಫೈಬಲ್ ಪೇಪರ್ ಆಡಿಟ್ ಟ್ರಯಲ್ ಯೂನಿಟ್‌ಗಳು (ಪೇಪರ್‌ಟ್ರೇಲ್ ಮೆಷಿನ್‌ಗಳು) ಮತ್ತು ಇವಿಎಂಗಳ ಮೇಲಿನ ಪೂರಕ ವೆಚ್ಚಗಳು ಹಾಗೂ ಬಳಕೆಯಲ್ಲಿಲ್ಲದ ಇವಿಎಂಗಳನ್ನು ಗುಜರಿಗೆ ಹಾಕುವುದಕ್ಕಾಗಿ ಚುನಾವಣಾ ಆಯೋಗಕ್ಕೆ ಹಣ ಒದಗಿಸಲಾಗಿದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಸಿಬಿಐಗೆ 946 ಕೋಟಿ ರೂ. ಅನುದಾನ

ನವದೆಹಲಿ, ಫೆ.1– ಕೇಂದ್ರ ಸರ್ಕಾರವು ಬುಧವಾರ ಮಂಡಿಸಿದ 2023–24ರ ಕೇಂದ್ರ ಬಜೆಟ್‌ನಲ್ಲಿ ಕೇಂದ್ರೀಯ ತನಿಖಾ ಸಂಸ್ಥೆಗೆ (ಸಿಬಿಐ) 946 ಕೋಟಿ ರೂ. ಅನುದಾನವನ್ನು ಘೋಷಿಸಿದೆ. ಇದು ಕಳೆದ ವರ್ಷಕ್ಕಿಂತ ಶೇ. 4.4 ರಷ್ಟು ಹೆಚ್ಚಾಗಿದೆ.

ವಿವಿಧ ರಾಜ್ಯಗಳು, ಹೈಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್‌ನಿಂದ ಹಸ್ತಾಂತರಿಸಲ್ಪಟ್ಟ ಕ್ರಿಮಿನಲ್ ಪ್ರಕರಣಗಳು ಸೇರಿದಂತೆ ಕೃತಕ ಬುದ್ಧಿಮತ್ತೆ, ಕ್ರಿಪ್ಟೋಕರೆನ್ಸಿ, ಡಾರ್ಕ್‌ನೆಟ್ ಮತ್ತು ಸಾಂಪ್ರದಾಯಿಕ ಅಪರಾಧಗಳಾದ ಬ್ಯಾಂಕ್ ವಂಚನೆ ಪ್ರಕರಣಗಳು ಮತ್ತು ವಿದೇಶದ ನ್ಯಾಯಾಲಯಗಳಲ್ಲಿ ನಡೆಯುತ್ತಿರುವ ಉನ್ನತ ಮಟ್ಟದ ಹಸ್ತಾಂತರ ಪ್ರಕರಣಗಳನ್ನು ನಿಭಾಯಿಸಲು ದೇಶದ ಪ್ರಧಾನ ತನಿಖಾ ಸಂಸ್ಥೆ ಮಾನವ ಸಂಪನ್ಮೂಲದ ವಿಷಯದಲ್ಲಿ ಹೆಚ್ಚು ವಿಸ್ತಾರಗೊಂಡಿದೆ. 2022–23ರ ಬಜೆಟ್ ಅಂದಾಜಿನಲ್ಲಿ ತನ್ನ ವ್ಯವಹಾರಗಳನ್ನು ನಿರ್ವಹಿಸಲು ತನಿಖಾ ಸಂಸ್ಥೆಯು 841.96 ಕೋಟಿ ರೂಪಾಯಿಗಳನ್ನು ಸ್ವೀಕರಿಸಿತ್ತು. ನಂತರ ಅದನ್ನು ಪರಿಷ್ಕೃತ ಅಂದಾಜುಗಳಲ್ಲಿ 906.59 ಕೋಟಿ ರೂ.ಗೆ ಹೆಚ್ಚಿಸಲಾಯಿತು. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬುಧವಾರ ಮಂಡಿಸಿದ ಬಜೆಟ್ ದಾಖಲೆಯಲ್ಲಿ 2023–24ನೇ ಸಾಲಿಗೆ ಸರ್ಕಾರವು ಏಜೆನ್ಸಿಗೆ 946.51 ಕೋಟಿ ರೂ. ಅನುದಾನ ಘೋಷಿಸಿದೆ.

ಸರ್ಕಾರಿ ಸೇವಕರು, ಖಾಸಗಿ ವ್ಯಕ್ತಿಗಳು, ಸಂಸ್ಥೆಗಳು ಮತ್ತು ಇತರ ಗಂಭೀರ ಅಪರಾಧಗಳ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳಲ್ಲಿ ತನಿಖೆ ಮತ್ತು ಕಾನೂನು ಕ್ರಮವನ್ನು ವಹಿಸಿಕೊಡುವ ಕೇಂದ್ರೀಯ ತನಿಖಾ ಸಂಸ್ಥೆಯ ಸ್ಥಾಪನೆ–ಸಂಬಂಧಿತ ವೆಚ್ಚಕ್ಕಾಗಿ ಈ ನಿಬಂಧನೆಯಾಗಿದೆ ಎಂದು ಬಜೆಟ್ ದಾಖಲೆ ಹೇಳಿದೆ. ಇದು ಸಿಬಿಐನ ತರಬೇತಿ ಕೇಂದ್ರಗಳ ಆಧುನೀಕರಣ, ತಾಂತ್ರಿಕ ಮತ್ತು ಫೋರೆನ್ಸಿಕ್ ಬೆಂಬಲ ಘಟಕಗಳ ಸ್ಥಾಪನೆ, ಸಮಗ್ರ ಆಧುನೀಕರಣ ಮತ್ತು ಭೂಮಿ/ಕಚೇರಿ/ವಾಸಸ್ಥಾನಗಳ ನಿರ್ಮಾಣದಂತಹ ವಿವಿಧ ಯೋಜನೆಗಳಿಗೆ ನಿಬಂಧನೆಗಳನ್ನು ಒಳಗೊಂಡಿದೆ ಎಂದು ಅದು ಹೇಳಿದೆ.

ಸರ್ಕಾರಿ ಹಳೆಯ ವಾಹನಗಳ ಸ್ಕ್ರ್ಯಾಪ್ ಮಾಡಲು ಹಣ ನಿಗದಿ

ನವದೆಹಲಿ, ಫೆ.1– ಕೇಂದ್ರ ಸರ್ಕಾರದ ಒಡೆತನದ ಹಳೆಯ ವಾಹನಗಳನ್ನು ಸ್ಕ್ರ್ಯಾಪ್ ಮಾಡಲು ಸಾಕಷ್ಟು ಹಣವನ್ನು ಮಂಜೂರು ಮಾಡಲಾಗಿದೆ. ಹಳೆಯ ವಾಹನಗಳು ಹಾಗೂ ಆಂಬ್ಯುಲೆನ್ಸ್‌ಗಳನ್ನು ಬದಲಾಯಿಸುವಲ್ಲಿ ರಾಜ್ಯಗಳಿಗೆ ಬೆಂಬಲ ನೀಡಲಾಗುವುದು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬುಧವಾರ ಪ್ರಕಟಿಸಿದ್ದಾರೆ.



2023–24ರ ಬಜೆಟ್ ಮಂಡನೆ ವೇಳೆ ಹಳೆಯ ಮಾಲಿನ್ಯಕಾರಕ ವಾಹನಗಳನ್ನು ಬದಲಿಸುವುದು ಆರ್ಥಿಕತೆಯನ್ನು ಹಸಿರಾಗಿಸುವ ಪ್ರಮುಖ ಭಾಗವಾಗಿದೆ ಎಂದು ಹೇಳಿದರು.

ಕಾರ್ಯಸಾಧ್ಯತೆಯ ಅಂತರ ನಿಧಿಯೊಂದಿಗೆ ಪಿಪಿಪಿ ಮೋಡ್ ಮೂಲಕ ಪ್ರಯಾಣಿಕರಿಗೆ ಮತ್ತು ಸರಕು ಸಾಗಣೆದಾರರಿಗೆ ಇಂಧನ ದಕ್ಷ ಮತ್ತು ಕಡಿಮೆ ವೆಚ್ಚದ ಸಾರಿಗೆ ವಿಧಾನವಾಗಿ ಕರಾವಳಿ ಹಡಗು ಸಾಗಣೆಯನ್ನು ಉತ್ತೇಜಿಸಲಾಗುವುದು ಎಂದು ಹೇಳಿದರು.

ಇತ್ತೀಚೆಗಷ್ಟೇ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸಾರಿಗೆ ನಿಗಮಗಳು ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳ ಒಡೆತನದ ಒಂಬತ್ತು ಲಕ್ಷಕ್ಕೂ ಹೆಚ್ಚು 15 ವರ್ಷಗಳಿಗಿಂತ ಹಳೆಯ ವಾಹನಗಳು ಏಪ್ರಿಲ್ 1 ರಿಂದ ರಸ್ತೆಗಿಳಿಯುವುದಿಲ್ಲ. ಅಷ್ಟೇ ಹೊಸ ವಾಹನಗಳು ಬರಲಿವೆ ಎಂದು ಹೇಳಿದ್ದರು. ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಇತ್ತೀಚಿನ ಅಧಿಸೂಚನೆಯ ಪ್ರಕಾರ, ಏಪ್ರಿಲ್ 1 ರಿಂದ 15 ವರ್ಷಕ್ಕಿಂತ ಹಳೆಯದಾದ ಸಾರಿಗೆ ನಿಗಮಗಳು ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳ ಒಡೆತನದ ಬಸ್‌ಗಳು ಸೇರಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಒಡೆತನದ ಎಲ್ಲಾ ವಾಹನಗಳ ನೋಂದಣಿ ರದ್ದುಗೊಳಿಸಲಾಗುತ್ತದೆ. ಅಂತಹ ವಾಹನಗಳ ಸ್ಕ್ರ್ಯಾಪ್ ಮಾಡಲಾಗುತ್ತದೆ.

ದೇಶದ ರಕ್ಷಣೆಗಾಗಿ, ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಆಂತರಿಕ ಭದ್ರತೆಯ ನಿರ್ವಹಣೆ ಉದ್ದೇಶಗಳಿಗಾಗಿ ಬಳಸುವ ವಿಶೇಷ ಉದ್ದೇಶದ ವಾಹನಗಳಿಗೆ (ಶಸ್ತ್ರಸಜ್ಜಿತ ಮತ್ತು ಇತರ ವಿಶೇಷ ವಾಹನಗಳಿಗೆ) ಈ ನಿಯಮ ಅನ್ವಯಿಸುವುದಿಲ್ಲ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ರಕ್ಷಣಾ ವಲಯಕ್ಕೆ 5.39 ಲಕ್ಷ ಕೋಟಿ ಅನುದಾನ



ನವದೆಹಲಿ, ಫೆ1– ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬುಧವಾರ ಮಂಡಿಸಿದ ಬಜೆಟ್‌ನಲ್ಲಿ ರಕ್ಷಣಾ ವಲಯಕ್ಕೆ ರೂ. 5.39 ಲಕ್ಷ ಕೋಟಿ ಮೀಸಲಿಟ್ಟಿದ್ದಾರೆ. ಪ್ರತೀ ಬಾರಿ ಬಜೆಟ್ ಮಂಡನೆ ವೇಳೆ ಕೇಂದ್ರ ಸರ್ಕಾರವು ರಕ್ಷಣಾ ವಲಯದ ಮೇಲೆ ವಿಶೇಷ ಗಮನವನ್ನು ಇಟ್ಟಿರುತ್ತದೆ. ಈ ಬಾರಿಯ ಬಜೆಟ್‌ನಲ್ಲಿಯೂ ರಕ್ಷಣಾ ವಲಯಕ್ಕೆ ಹೆಚ್ಚಿನ ಒತ್ತು ನೀಡಿದೆ.

2022–23ನೇ ಸಾಲಿನಲ್ಲಿ ರಕ್ಷಣಾ ಕ್ಷೇತ್ರಕ್ಕೆ ಒಟ್ಟು 5.25 ಲಕ್ಷ ಕೋಟಿ ರೂ.ಗಳನ್ನು ಮೀಸಲಿಡಲಾಗಿತ್ತು, ಇದು ಒಟ್ಟು ಬಜೆಟ್‌ನ ಶೇ.13.31ರಷ್ಟಿತ್ತು. ಈ ಬಾರಿಯ ಬಜೆಟ್‌ನಲ್ಲಿ ರೂ.5.39 ಲಕ್ಷ ಕೋಟಿ ಮೀಸಲಿಡಲಾಗಿದೆ. ಇದು ಹಿಂದಿನ ವರ್ಷಕ್ಕಿಂತ ಶೇ.13ರಷ್ಟು ಹೆಚ್ಚಿಸಿದಂತಾಗಿದೆ.

ರಕ್ಷಣಾ ಉಪಕರಣಗಳ ಖರೀದಿಗೆ ಸರ್ಕಾರ 1.52 ಲಕ್ಷ ಕೋಟಿ ರೂ ನೀಡಿದ್ದು, ಇದು ಶಸ್ತ್ರಾಸ್ತ್ರ, ವಿಮಾನಗಳು, ಯುದ್ಧ ನೌಕೆಗಳು ಹಾಗೂ ಇತರೆ ಮಿಲಿಟರಿ ಉಪಕರಣಗಳ ಖರೀದಿಗಳನ್ನು ಒಳಗೊಂಡಿದೆ. ಇದರಲ್ಲಿ ಭಾರತೀಯ ಸೇನೆಗೆ 32,015 ಕೋಟಿ ರೂ. ನೀಡಲಾಗಿದೆ. ಭಾರತೀಯ ನೌಕಾಪಡೆಗೆ 47,590 ಕೋಟಿ ರೂ ಮತ್ತು ಭಾರತೀಯ ವಾಯುಪಡೆಗೆ 55,586 ಕೋಟಿ ರೂ. ಮೀಸಲಿಡಲಾಗಿದೆ.

ವಿಮಾ ಪಾಲಿಸಿ, ಆಸ್ತಿ ಮಾರಾಟದ ಮೇಲೂ ತೆರಿಗೆ

ನವದೆಹಲಿ, ಫೆ.1– ದೊಡ್ಡಮೊತ್ತದ ವಿಮಾ ಪಾಲಿಸಿಗಳಿಗೆ ಇನ್ನು ಮುಂದೆ ತೆರಿಗೆ ವಿಧಿಸಲಾಗುವುದು. 10 ಕೋಟಿ ರೂ.ಗೂ ಅಧಿಕ ಮೊತ್ತದ ಆಸ್ತಿ ಮಾರಾಟದಿಂದ ಸಿಗುವ ಲಾಭದ ಮೇಲೆ (ಕ್ಯಾಪಿಟಲ್ ಗೇನ್) ತೆರಿಗೆ ವಿಧಿಸಲಾಗುವುದು ಎಂದು ನಿರ್ಮಲಾ ಸೀತಾರಾಮನ್ ಘೋಷಣೆ ಮಾಡಿದ್ದಾರೆ. ಅಂಚೆ ಕಚೇರಿಗಳ ಮೂಲಕ ನಿರ್ವಹಿಸುವ ಮಾಸಿಕ ಆದಾಯ ಯೋಜನೆಯ ಹೂಡಿಕೆ ಮಿತಿಯನ್ನು 9 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಈ ಮೊದಲು 4.5 ಲಕ್ಷ ಹೂಡಿಕೆಗೆ ಮಾತ್ರ ಅವಕಾಶವಿತ್ತು. ಸಣ್ಣ ಉಳಿತಾಯ ಯೋಜನೆಗಳಲ್ಲಿ ಹಿರಿಯ ನಾಗರಿಕರ ಹೂಡಿಕೆಗೆ ಇದ್ದ 15 ಲಕ್ಷದ ಮಿತಿಯನ್ನು ಹಾಲಿ ವರ್ಷದಿಂದ 30 ಲಕ್ಷ ರೂಗೆ ಕೇಂದ್ರ ಸರ್ಕಾರವು ವಿಸ್ತರಿಸಿದೆ. ಕೇಂದ್ರ ಸರ್ಕಾರವು ಮಹಿಳೆಯರಿಗಾಗಿ ವಿಶೇಷ ಉಳಿತಾಯ ಯೋಜನೆ ಪ್ರಕಟಿಸಿದೆ. 2 ವರ್ಷಗಳ ಅವಧಿಯ ಈ ಯೋಜನೆಗೆ ಶೇಕಡಾ 7.5 ಬಡ್ಡಿ ನಿಗದಿಪಡಿಸಲಾಗಿದೆ. ಸುಲಭವಾಗಿ ಐಟಿ ರಿಟರ್ನ್ಸ್ ಸಲ್ಲಿಸಲು ಸರ್ಕಾರ ಹೊಸ ಆದಾಯ ತೆರಿಗೆ ರಿಟರ್ನ್ ಫಾರ್ಮ್‌ಗಳನ್ನು ಪರಿಚಯಿಸಿದೆ ಎಂದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಬಜೆಟ್ ಮುಖ್ಯಾಂಶಗಳು

● ಯುವ ಉದ್ಯಮಿಗಳು ಕೃಷಿ-ಸ್ಟಾರ್ಟ್‌ಅಪ್‌ಗಳನ್ನು ಆರಂಭಿಸಲು ಉತ್ತೇಜನ ಕ್ರಮವಾಗಿ ರೇಷ್ಮೆ ವೇಗವರ್ಧಕ ನಿಧಿ ಸ್ಥಾಪನೆ ● 2014ರ ನಂತರ ಆರಂಭವಾಗಿರುವ 157 ವೈದ್ಯಕೀಯ ಕಾಲೇಜುಗಳಲ್ಲಿ 157 ಹೊಸ ನರ್ಸಿಂಗ್ ಕಾಲೇಜು ಆರಂಭ ● ಕೃಷಿ ಸಾಲವನ್ನು 20 ಲಕ್ಷ ಕೋಟಿಗೆ ಹೆಚ್ಚಿಸುವ ಗುರಿ. ● ಸೂಕ್ಷ್ಮ ನೀರಾವರಿ ಪ್ರೋತ್ಸಾಹಿಸಲು ಭದ್ರಾ ಮೇಲ್ದಂಡೆಗೆ 5,300 ಕೋಟಿ ರೂ. ನೆರವು ● ಪ್ರಧಾನ ಮಂತ್ರಿ ಆವಾಸ್ ಯೋಜನಾ ವೆಚ್ಚ ಶೇ. 66ಕ್ಕೆ (79,000 ಕೋಟಿ ರೂ.) ಹೆಚ್ಚಳ. ● ಉದ್ಯೋಗ ಸೃಷ್ಟಿಗೆ 10 ಕೋಟಿ ರೂ. ಮೀಸಲು ● ಏಕಲವ್ಯ ಮಾದರಿ ವಸತಿ ಶಾಲೆಗಳಿಗೆ 38,800 ಶಿಕ್ಷಕರು, ಸಿಬ್ಬಂದಿ ನೇಮಕ ● ಮುಂದಿನ ಹಣಕಾಸು ವರ್ಷದಲ್ಲಿ ರೈಲ್ವೆ ಇಲಾಖೆಯಲ್ಲಿ 2.40 ಲಕ್ಷ ಕೋಟಿ ಬಂಡವಾಳ ಹೂಡಿಕೆ ● ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿಯ ಮಾದರಿಯಲ್ಲಿ ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಧಿ ಸ್ಥಾಪನೆ. ಇದಕ್ಕಾಗಿ ವರ್ಷಕ್ಕೆ 10 ಸಾವಿರ ಕೋಟಿ ಮೀಸಲು. ● ನಿರ್ದಿಷ್ಟಪಡಿಸಿದ ಸರ್ಕಾರಿ ಏಜೆನ್ಸಿಗಳ ಎಲ್ಲಾ ಡಿಜಿಟಲ್ ವ್ಯವಸ್ಥೆಗಳಿಗೆ ಸಾಮಾನ್ಯ ಗುರುತು ಚೀಟಿಯಾಗಿ ಪ್ಯಾನ್ (PAN) ಬಳಕೆಗೆ ಅವಕಾಶ. ● ಸಾರಿಗೆ ಮೂಲಸೌಕರ್ಯಕ್ಕೆ ಸಂಬಂಧಿಸಿದ 100 ನಿರ್ಣಾಯಕ ಯೋಜನೆಗಳ ಅನುಷ್ಠಾನ ● ವಾಣಿಜ್ಯ ವಿವಾದಗಳ ಇತ್ಯರ್ಥಕ್ಕೆ 'ವಿವಾದ್ ಸೆ ವಿಶ್ವಾಸ್-2' ಅಡಿಯಲ್ಲಿ ಮತ್ತೊಂದು 'ವಿವಾದ ಪರಿಹಾರ ಕಾರ್ಯಕ್ರಮ' ಜಾರಿ. ● ವಿದ್ಯಾರ್ಥಿಗಳು ಹಾಗೂ ಯುವಜನರಿಗಾಗಿ ರಾಷ್ಟ್ರೀಯ ಡಿಜಿಟಲ್ ಗ್ರಂಥಾಲಯ ಸ್ಥಾಪನೆ ● ದೇಶದಲ್ಲಿ ಹೊಸ 50 ಏರ್‌ಪೋರ್ಟ್‌ಗಳ ನಿರ್ಮಾಣ ಗುರಿ. ● ಪರ್ಯಾಯ ರಸಗೊಬ್ಬರಗಳನ್ನು ಬಳಸುವಂತೆ ರಾಜ್ಯಗಳನ್ನು ಉತ್ತೇಜಿಸಲು ಪಿಎಂ-ಪ್ರಣಾಮ್ ಕಾರ್ಯಕ್ರಮ ಜಾರಿ. ● ನೈಸರ್ಗಿಕ ಕೃಷಿ ಅಳವಡಿಸಿಕೊಳ್ಳಲು 1 ಕೋಟಿ ರೈತರಿಗೆ ನೆರವು. ● ಕರಾವಳಿಯುದ್ದಕ್ಕೂ ಮ್ಯಾಂಗ್ರೋವ್ ಕಾಡುಗಳನ್ನು ಬೆಳೆಸಲು ಪ್ರೋತ್ಸಾಹ ● ಪರಿಸರ ಸಂರಕ್ಷಣಾ ಕಾಯಿದೆ ಅಡಿಯಲ್ಲಿ 'ಗ್ರೀನ್ ಕ್ರೆಡಿಟ್' ಕಾರ್ಯಕ್ರಮ ಜಾರಿ ● ಸ್ಥಳೀಯ ಹಾಗೂ ಅಂತರರಾಷ್ಟ್ರೀಯ ಪ್ರವಾಸೋದ್ಯಮ ಅಭಿವೃದ್ಧಿಗೆ 50 ಪ್ರವಾಸಿ ಸ್ಥಳಗಳ ಅಭಿವೃದ್ಧಿ. ● ಒಂದು ಜಿಲ್ಲೆ, ಒಂದು ಉತ್ಪನ್ನಕ್ಕೆ ಪ್ರೋತ್ಸಾಹ ● ದೇಶೀಯ ಪ್ರವಾಸೋದ್ಯಮವನ್ನು ಉತ್ತೇಜಿಸಲು 'ದೇಖೋ ಅಪ್ನಾ ದೇಶ್' ಉಪಕ್ರಮ ಪ್ರಾರಂಭ. ● ಎಂಎಸ್‌ಎಂಇಗಳಿಗೆ ಪರಿಷ್ಕೃತ ಸಾಲ ಖಾತ್ರಿ ಯೋಜನೆ ಏಪ್ರಿಲ್ 1ರಿಂದ ಪ್ರಾರಂಭ. ● 'ಒಂದು ಜಿಲ್ಲೆ ಒಂದು ಉತ್ಪನ್ನ' ವಸ್ತುಗಳು ಮತ್ತು ಜಿಐ ಉತ್ಪನ್ನಗಳ ಪ್ರಚಾರ ಮತ್ತು ಮಾರಾಟಕ್ಕಾಗಿ ಯೂನಿಟಿ ಮಾಲ್ ಸ್ಥಾಪಿಸಲು ರಾಜ್ಯ ಸರ್ಕಾರಗಳಿಗೆ ಉತ್ತೇಜನ. ● ಯುವಕರ ಕೌಶಲ್ಯ ತರಬೇತಿಗಾಗಿ 'ಪ್ರಧಾನ ಮಂತ್ರಿ ಕೌಶಲ್ ವಿಕಾಸ್ ಯೋಜನೆ 4.0' ಪ್ರಾರಂಭ. ● ಪ್ರವಾಸೋದ್ಯಮವನ್ನು ಉತ್ತೇಜಿಸಲು 'ಚಾಲೆಂಜ್ ಮೋಡ್' ಮೂಲಕ 50 ಸ್ಥಳಗಳ ಆಯ್ಕೆ.

ಪ್ರಮುಖ ಘೋಷಣೆಗಳು

● ರೈಲ್ವೆಗೆ 2.4 ಲಕ್ಷ ಕೋಟಿ ರೂ. ● ಕೃಷಿ ಸಾಲದ ಗುರಿ 20 ಲಕ್ಷ ಕೋಟಿ. ● ಪ್ರಧಾನಮಂತ್ರಿ ಆವಾಸ್ ಯೋಜನೆಗೆ ಶೇ.66ರಷ್ಟು ಹೆಚ್ಚುವರಿ ಅಂದರೆ ಹೆಚ್ಚಳವಾಗಿ 79,000 ಕೋಟಿ ರೂ. ಮೀಸಲು ● ಬಂಡವಾಳ ಹೂಡಿಕೆ ವೆಚ್ಚವನ್ನು ಶೇ.33ರಿಂದ 10 ಲಕ್ಷ ಕೋಟಿ ರೂ.ಗೆ ಹೆಚ್ಚಿಸಲಾಗುವುದು, 2024ರ ಹಣಕಾಸು ವರ್ಷದಲ್ಲಿ GDPಯ ಶೇ.3.3%ಕ್ಕೆ ಏರಿಕೆ ● ಕೇಂದ್ರದ ಪರಿಣಾಮಕಾರಿ ಬಂಡವಾಳ ವೆಚ್ಚ 13.7 ಲಕ್ಷ ಕೋಟಿ ● ಪ್ರಮುಖ ಸ್ಥಳಗಳಲ್ಲಿ 157 ಹೊಸ ನರ್ಸಿಂಗ್ ಕಾಲೇಜುಗಳು, 2047ರ ವೇಳೆಗೆ ರಕ್ತಹೀನತೆಯನ್ನು ತೊಡೆದುಹಾಕುವ ಉದ್ದೇಶ ● ಆದಿವಾಸಿಗಳಿಗೆ ಸುರಕ್ಷಿತ ವಸತಿ, ನೈರ್ಮಲ್ಯ, ಕುಡಿಯುವ ನೀರು ಮತ್ತು ವಿದ್ಯುತ್‌ಗಾಗಿ ರೂ 15,000 ಕೋಟಿ ಮಿಷನ್ ● ಎಲ್ಲಾ ನಗರಗಳು ಮತ್ತು ಪಟ್ಟಣಗಳು 100 ಪ್ರತಿಶತದಷ್ಟು ಒಳಚರಂಡಿ ಮತ್ತು ಸೆಪ್ಟಿಕ್ ಟ್ಯಾಂಕ್‌ಗಳನ್ನು ಮ್ಯಾನ್ ಹೋಲ್‌ನಿಂದ ಮೆಷಿನ್ ಹೋಲ್ ಮೋಡ್‌ಗೆ ಬದಲಾಯಿಸಲು ಯೋಜನೆ ಸಕ್ರಿಯಗೊಳಿಸಲಾಗುತ್ತದೆ ● ಮುಂದಿನ 3 ವರ್ಷಗಳಲ್ಲಿ ಏಕಲವ್ಯ ಮಾದರಿ ವಸತಿ ಶಾಲೆಗಳಿಗೆ 38,800 ಶಿಕ್ಷಕರ ನೇಮಕ ● ಕೃತಕ ಬುದ್ಧಿಮತ್ತೆ ಅಥವಾ AIಗಾಗಿ 3 ಶ್ರೇಷ್ಠತೆಯ ಕೇಂದ್ರಗಳ ಸ್ಥಾಪನೆ ● 2,516 ಕೋಟಿ ರೂ.ಗಳಲ್ಲಿ 63,000 ಕ್ರೆಡಿಟ್ ಸೊಸೈಟಿಗಳ ಗಣಕೀಕರಣ ● ಎಂಜಿನಿಯರಿಂಗ್ ಸಂಸ್ಥೆಗಳಲ್ಲಿ 5G ಸೇವೆಗಳನ್ನು ಬಳಸಿಕೊಂಡು ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಲು 100 ಲ್ಯಾಬ್‌ಗಳನ್ನು ಸ್ಥಾಪನೆ ● ಪಳೆಯುಳಿಕೆ ಇಂಧನದ ಮೇಲಿನ ಕಡಿಮೆ ಅವಲಂಬನೆಗಾಗಿ ಗ್ರೀನ್ **ಹೈಡ್ರೋಜನ್ ಮಿಷನ್**: ನಿವ್ವಳ-ಶೂನ್ಯ ಹೊರಸೂಸುವಿಕೆ ಗುರಿಗಳಿಗೆ ಶಕ್ತಿ ಪರಿವರ್ತನೆಗಾಗಿ 35,000 ಕೋಟಿ ರೂ ಮೀಸಲು ● ವ್ಯವಹಾರವನ್ನು ಸುಲಭಗೊಳಿಸಲು, 39,000 ಅನುಸರಣೆಗಳನ್ನು ಕಡಿಮೆ ಮಾಡಲಾಗಿದೆ.




ಬೇರೆ ರಾಷ್ಟ್ರಗಳ ನಾಯಕರು ಬೆರಗಾಗುವಂಥ ಬಜೆಟ್

ನವದೆಹಲಿ: ಬುಧವಾರ ಮಧ್ಯಾಹ್ನ ದೆಹಲಿ ತಲುಪಿದ ಬಳಿಕ ಸುದ್ದಿಗಾರರೊಂದಿಗೆ ಮಾತಾಡಿದ ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪನವರು ನಿರ್ಮಲಾ ಸೀತಾರಾಮನ್ ಮಂಡಿಸಿದ ಬಜೆಟ್ ಅನ್ನು ಮುಕ್ತಕಂಠದಿಂದ ಕೊಂಡಾಡಿ, ಇದೊಂದು ಅದ್ಭುತವಾದ ಬಜೆಟ್ ಎಂದರು. ಕೋವಿಡ್ ಪಿಡುಗಿನಿಂದಾಗಿ ವಿಶ್ವದ ಎಲ್ಲ ರಾಷ್ಟ್ರಗಳ ಆರ್ಥಿಕ ಸ್ಥಿತಿ ಕಳವಳಕಾರಿಯಾಗಿದೆ, ಈ ಹಿನ್ನೆಲೆಯಲ್ಲಿ ನಿರ್ಮಲಾ ಸೀತಾರಾಮನ್ ಮಂಡಿಸುವ ಬಜೆಟ್ ಮೇಲೆ ಎಲ್ಲ ರಾಷ್ಟ್ರಗಳ ಕಣ್ಣಿತ್ತು. ನಿರ್ಮಲಾ ಅವರು ಎಲ್ಲರೂ ನಿಬ್ಬೆರಗಾಗುವಂಥ ಕೇಂದ್ರ ಆಯವ್ಯಯ ಪಟ್ಟಿಯನ್ನು ಮಂಡಿಸಿದ್ದಾರೆ ಎಂದು ಹೇಳಿದರು.

ಲಕ್ಷ ಹಸ್ತಪ್ರತಿ ರಕ್ಷಣೆಗೆ ಡಿಜಿಟಲ್‌ಎಪಿಗ್ರಫಿ ಮ್ಯೂಸಿಯಂ

ನವದೆಹಲಿ, ಫೆ.1- ಮೊದಲ ಹಂತದಲ್ಲಿ ಒಂದು ಲಕ್ಷ ಪ್ರಾಚೀನ ಹಸ್ತಪ್ರತಿಗಳನ್ನು ಡಿಜಿಟಲ್ ರೂಪದಲ್ಲಿ ರಕ್ಷಿಸಿಡಲು ಡಿಜಿಟಲ್ ಎಪಿಗ್ರಫಿ ಮ್ಯೂಸಿಯಂ ಸ್ಥಾಪಿಸಲಾಗುವುದು ಎಂದು ಸಚಿವೆ ನಿರ್ಮಲಾ ಸೀತಾರಾಮನ ಘೋಷಿಸಿದರು.



ಅಲ್ಲದೆ, ಜೌಗು ಪ್ರದೇಶಗಳ ಅತ್ಯುತ್ತಮ ಬಳಕೆ ಉತ್ತೇಜಿಸಲು ಮತ್ತು ಜೀವವೈವಿಧ್ಯತೆ ಹೆಚ್ಚಿಸಲು ಮುಂದಿನ ಮೂರು ವರ್ಷಗಳಲ್ಲಿ ಅಮೃತ್ ಧರೋಹರ್ ಯೋಜನೆ ಜಾರಿಗೆ ತರಲಾಗುವುದು ಎಂದು ಹೇಳಿದರು.

ಜೌಗು ಪ್ರದೇಶಗಳು ಜೀವವೈವಿಧ್ಯತೆ ಸಂರಕ್ಷಿಸುವ ಪ್ರಮುಖ ಪರಿಸರ ವ್ಯವಸ್ಥೆಗಳಾಗಿವೆ. ಮೋದಿ ಅವರು ತಮ್ಮ ಇತ್ತೀಚಿನ 'ಮನ್ ಕಿ ಬಾತ್'ನಲ್ಲಿ ಇದರ ಮಹತ್ವದ ಬಗ್ಗೆ ಪ್ರಸ್ತಾಪಿಸಿದ್ದರು. 2014ಕ್ಕಿಂತ ಮೊದಲು ರಾಮ್ಸರ್‌ಂಥ ತಾಣಗಳು ಕೇವಲ 26 ಇದ್ದವು. ಈಗ ಅವುಗಳ ಸಂಖ್ಯೆ 275ಕ್ಕೆ ಏರಿದೆ ಎಂದು ಸಚಿವೆ ಹೇಳಿದರು.

ಜೌಗು ಪ್ರದೇಶಗಳ ಸಂರಕ್ಷಣೆಯಲ್ಲಿ ಸ್ಥಳೀಯ ಸಮುದಾಯಗಳು ಯಾವಾಗಲೂ ಮುಂಚೂಣಿಯಲ್ಲಿವೆ. ಈ ಪ್ರದೇಶಗಳ ಅತ್ಯುತ್ತಮ ಬಳಕೆ ಉತ್ತೇಜಿಸಲು ಮತ್ತು ಜೀವವೈವಿಧ್ಯತೆ, ಇಂಗಾಲದ ದಾಸ್ತಾನು ಹೆಚ್ಚಿಸುವ ಉದ್ದೇಶದಿಂದ ಅಮೃತ್ ಧರೋಹರ್ ಯೋಜನೆ ಜಾರಿಗೆ ತರಲಾಗುತ್ತಿದೆ. ಇದರಿಂದ ಪರಿಸರ ಪ್ರವಾಸೋದ್ಯಮ ಅವಕಾಶಗಳು ಮತ್ತು ಸ್ಥಳೀಯ ಸಮುದಾಯಗಳಿಗೆ ಆದಾಯ ಮೂಲವು ಸೃಷ್ಟಿಯಾಗಲಿದೆ ಎಂದರು.

ಧೂಮಪಾನಿಗಳಿಗೆ ಬಿಸಿ



ನವದೆಹಲಿ: 2023-24ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಸಿಗರೇಟ್ ಮೇಲಿನ ತೆರಿಗೆಯನ್ನು ಶೇಕಡ 16ಕ್ಕೆ ಹೆಚ್ಚಳ ಮಾಡಿದ್ದಾರೆ. ಲಿಮಿಟೆಡ್ ಸೇರಿದಂತೆ ಸಿಗರೇಟ್ ಕಂಪನಿಗಳ ಷೇರುಗಳು ಷೇರುಪೇಟೆ ಸಂವೇದಿ ಸೂಚ್ಯಂಕದಲ್ಲಿ (ಬಿಎಸ್‌ಇ) ಶೇ.5ರಷ್ಟು ಕುಸಿತ ಕಂಡಿವೆ. ಗಾಡ್ಫ್ರೇ ಫಿಲಿಪ್ಸ್ ಷೇರುಗಳು ಬಿಎಸ್‌ಇಯಲ್ಲಿ ಶೇ.4.92ರಷ್ಟು ಕುಸಿದು 1,828.75ಕ್ಕೆ ತಲುಪಿದರೆ, ಗೋಲ್ಡನ್ ಟೊಬ್ಯಾಕೋ ಶೇಕಡ 3.81ರಷ್ಟು ಕುಸಿದು 59.4ಕ್ಕೆ ತಲುಪಿದೆ. ಷೇರುಪೇಟೆಯಲ್ಲಿ ಐಟಿಸಿ ಷೇರುಗಳು ಶೇಕಡ 0.78ರಷ್ಟು ಕಡಿಮೆಯಾಗಿ 349ಕ್ಕೆ ವಹಿವಾಟು ನಡೆಸುತ್ತಿವೆ. ಅಂತೆಯೇ ಎನ್ಟಿಸಿ ಇಂಡಸ್ಟ್ರೀಸ್ ಶೇಕಡ 1.4 ಮತ್ತು ವಿಎಸ್ಟಿ ಇಂಡಸ್ಟ್ರೀಸ್ ಶೇಕಡ 0.35ರಷ್ಟು ಕುಸಿದಿದೆ.

ಸರ್ಕಾರಿ ಸಂಸ್ಥೆಗಳ ಡಿಜಿಟಲ್ ವಹಿವಾಟಿಗೆ ಸಾಮಾನ್ಯ ಗುರುತು ಸಂಖ್ಯೆಯಾಗಿ PAN



ನವದೆಹಲಿ: ಸರ್ಕಾರಿ ಸಂಸ್ಥೆಗಳ ಎಲ್ಲಾ ಡಿಜಿಟಲ್ ವಹಿವಾಟಿಗೆ ಸಾಮಾನ್ಯ ಗುರುತು ಸಂಖ್ಯೆಯಾಗಿ, 'ಪ್ಯಾನ್' ಬಳಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬುಧವಾರ ಹೇಳಿದ್ದಾರೆ. ಇದರಿಂದಾಗಿ ದೇಶದಲ್ಲಿ ವಹಿವಾಟು ಸರಳಗೊಳ್ಳಲಿದೆ ಎಂದು ತಿಳಿಸಿದ್ದಾರೆ. ಇದು ಆದಾಯ ತೆರಿಗೆ ಇಲಾಖೆಯು ವ್ಯಕ್ತಿ, ಸಂಸ್ಥೆ ಅಥವಾ ಘಟಕಗಳಿಗೆ ಆದಾಯ ತೆರಿಗೆ ಇಲಾಖೆ ನಿಗದಿಪಡಿಸಿರುವ 10 ಅಂಕಿಯ ಆಲ್ಫಾನ್ಯೂಮರಿಕ್ ಸಂಖ್ಯೆಯಾಗಿದೆ.



'ಸಿರಿಧಾನ್ಯ... ಶ್ರೀ ಅನ್ನ', ಭಾರತ ಸಿರಿಧಾನ್ಯ ತವರಾಗಿಸಲು ವಿತ್ತ ಸಚಿವೆ ನಿರ್ಮಲಾ ಪಣ

ನವದೆಹಲಿ: ಭಾರತವನ್ನು ಸಿರಿಧಾನ್ಯಗಳ ತವರನ್ನಾಗಿಸಲು ಕೇಂದ್ರ ಬಜೆಟ್ 2023-24ರಲ್ಲಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಹತ್ವದ ಕ್ರಮ ಕೈಗೊಂಡಿದ್ದಾರೆ.



ಈ ಬಾರಿ ನಿರ್ಮಲಾ ಸೀತಾರಾಮನ್, ಕೃಷಿ ಕ್ಷೇತ್ರಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ್ದು, ಅದರಲ್ಲಿ ಸಿರಿಧಾನ್ಯ ಉತ್ಪಾದನೆಗೆ ಅನೇಕ ಯೋಜನೆಗಳ ಮೂಲಕ ಸಣ್ಣ ರೈತರಿಗೆ ನೆರವು ನೀಡಲಾಗುತ್ತದೆ ಎಂದಿರುವ ಅವರು, ಹೈದರಾಬಾದ್‌ನಲ್ಲಿ ಸಿರಿಧಾನ್ಯ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವುದಾಗಿ ಹೇಳಿದ್ದಾರೆ. ಭಾರತವು ಇಡೀ ವಿಶ್ವಕ್ಕೆ ಸಿರಿಧಾನ್ಯಗಳನ್ನು ಮಹತ್ವದ ಕೊಡುಗೆಯನ್ನಾಗಿ ನೀಡಿದೆ. ಭಾರತವು ಸಿರಿಧಾನ್ಯಗಳನ್ನು ಉತ್ಪಾದನೆ ಮಾಡುವ ಜಗತ್ತಿನ ರಾಷ್ಟ್ರಗಳಲ್ಲಿ ಮುಂಚೂಣಿಯಲ್ಲಿದೆ. ಭಾರತದ ಪ್ರಯತ್ನದಿಂದ 2023ರ ವರ್ಷವನ್ನು ಸಿರಿಧಾನ್ಯಗಳ ವರ್ಷವೆಂದು ವಿಶ್ವಸಂಸ್ಥೆ ಘೋಷಿಸಿದೆ. ಇದರ ಸದುಪಯೋಗವನ್ನು ಪಡೆದುಕೊಳ್ಳಲು ಕೇಂದ್ರ ಸರ್ಕಾರ, ಭಾರತೀಯ ರೈತರಿಗೆ ಅಪೂರ್ವವಾದ ಅವಕಾಶವನ್ನು ಕೊಟ್ಟಿದೆ. ಸಿರಿಧಾನ್ಯಗಳನ್ನು ಬೆಳೆಸಲು ಅನೇಕ ಯೋಜನೆಗಳ ಮೂಲಕ ನೆರವು ನೀಡಲಾಗುತ್ತದೆ ಎಂದರು.

ಅಂತೆಯೇ ದೇಶದಲ್ಲಿರುವ 63,000 ಕೃಷಿ ಕೋ-ಆಪರೇಟಿವ್ ಸೊಸೈಟಿಗಳನ್ನು ಕೇಂದ್ರೀಕೃತಗೊಳಿಸಲಾಗುತ್ತದೆ. ಇದಕ್ಕಾಗಿ 2,516 ಕೋಟಿ ರೂ.ಗಳನ್ನು ನಿಗದಿಗೊಳಿಸಲಾಗುತ್ತದೆ. ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಸ್ಥೆಗಳನ್ನು ಒಂದೇ ಸೂರಿನಡಿ ತರಲಾಗುತ್ತದೆ ಎಂದು ಹೇಳಿದ್ದಾರೆ.

ಅಲ್ಲದೆ, ದೇಶದಲ್ಲಿ ಕೃಷಿ ಚಟುವಟಿಕೆಗಳನ್ನು ವೈಜ್ಞಾನಿಕ ರೀತಿಯಲ್ಲಿ ಮುನ್ನಡೆಸಲು ಸಾಧ್ಯವಾಗುವಂತೆ ಕೃಷಿ ವೇಗವರ್ಧನೆ ನಿಧಿಯನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಕೃಷಿ ಸ್ಟಾರ್ಟ್ ಅಪ್‌ಗಳ ಸ್ಥಾಪನೆ. ಕೃಷಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳು ಇನ್ನು ಒಂದೇ ಡಿಜಿಟಲ್ ಪ್ಲಾಟ್‌ಫಾರಂನಲ್ಲಿ ಲಭ್ಯವಾಗಲಿವೆ. ಇದಕ್ಕಾಗಿ, ಡಿಜಿಟಲ್ ಪಬ್ಲಿಕ್ ಇನ್‌ಫ್ರಾಸ್ಟ್ರಕ್ಚರ್ ಸ್ಥಾಪನೆ ಮಾಡಲಾಗುತ್ತದೆ. 2024ರ ಹೊತ್ತಿಗೆ ಕೃಷಿ ಸಾಲವನ್ನು 20 ಲಕ್ಷ ಕೋಟಿ ರೂ.ಗಳಿಗೆ ಏರಿಸುವ ಸಾಧ್ಯತೆ ಇದೆ. ನ್ಯಾಷನಲ್ ಮೊನೆಸ್ಟೈಸೇಷನ್ ಪೈಪ್ ಲೈನ್ ಯೋಜನೆಗೆ 9 ಸಾವಿರ ಕೋಟಿ ರೂ. ಹೂಡಿಕೆ ಮಾಡಲಾಗುತ್ತದೆ ಎಂದರು.

ಆರ್ಥಿಕ ಶಿಸ್ತು, ಪ್ರಗತಿ ಹಾಗೂ ಸ್ಪಷ್ಟ ಗುರಿಯುಳ್ಳ ಬಜೆಟ್

ನಗರೀಕರಣ ಹೆಚ್ಚುತ್ತಿರುವ ಸಂದರ್ಭದಲ್ಲಿ ನಗರೋತ್ಥಾನಕ್ಕೆ ಹತ್ತು ಸಾವಿರ ಕೋಟಿ ರೂ. ಮೀಸಲಿಟ್ಟಿರುವುದು ಬಹಳ ದೊಡ್ಡ ಕೊಡುಗೆ. ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದಲ್ಲದೆ ಸಂಶೋಧನೆ, ಮಾರುಕಟ್ಟೆ ಒದಗಿಸುವುದು, ಪ್ರೋತ್ಸಾಹ ಧನ ನೀಡಲು 63 ಸಾವಿರ ಕೋಟಿ ಮೀಸಲಿಟ್ಟಿರುವುದು ಆಶಾದಾಯಕ ಬೆಳವಣಿಗೆ. ದೇಶದ ಸಮಗ್ರ ಆರೋಗ್ಯದ ದೃಷ್ಟಿಯಿಂದ 157 ನರ್ಸಿಂಗ್ ಕಾಲೇಜುಗಳನ್ನು ತೆರೆಯುವ ಮುಖೇನ ಉದ್ಯೋಗ ಸೃಷ್ಟಿ ಹಾಗೂ ಆರೋಗ್ಯ ಕ್ಷೇತ್ರದ ಸುಧಾರಣೆಗೆ ಅತ್ಯುತ್ತಮವಾದ ಯೋಜನೆ ರೂಪಿಸಲಾಗಿದೆ. ಮೂಲ ಸೌಕರ್ಯ ಅಭಿವೃದ್ಧಿಗಾಗಿ ದೇಶದಲ್ಲಿ 50 ಹೊಸ ವಿಮಾನ ನಿಲ್ದಾಣ ನಿರ್ಮಾಣ ಮಾಡುವುದು ಮತ್ತು ರೈಲ್ವೆ ಯೋಜನೆಗಳನ್ನು ಮತ್ತಷ್ಟು ವಿಸ್ತಾರಗೊಳಿಸಲು 2.40 ಲಕ್ಷ ಕೋಟಿ ಮೀಸಲಿಟ್ಟಿರುವುದು ದೊಡ್ಡ ಕೊಡುಗೆಯಾಗಿದೆ. ಒಟ್ಟಾರೆಯಾಗಿ ಇದೊಂದು ಆರ್ಥಿಕ ಶಿಸ್ತಿನ ಹಾಗೂ ಪ್ರಾಡಕ್ಟೀವ್ ಬಜೆಟ್ ಎಂದು ಹೇಳಲು ಆನಂದವಾಗಲಿದೆ. – **ಎಸ್.ಎ.ರಾಮದಾಸ್, ಶಾಸಕ, ಕೆ.ಆರ್.ಕ್ಷೇತ್ರ**

ನಿರಾಶಾದಾಯಕ ಪೊಳ್ಳು ಭರವಸೆಯ ಬಜೆಟ್

ಹಳೇ ವಾಹನಗಳನ್ನು ಸ್ಕ್ರಾಪ್ ಮಾಡಿ ಹೊಸ ವಾಹನ ಖರೀದಿ ಯೋಜನೆ ಘೋಷಣೆಯಿಂದ ಸರ್ಕಾರಕ್ಕೆ ಹೆಚ್ಚು ತೆರಿಗೆ ಸಂಗ್ರಹವಾದರೆ, ಮಾಲೀಕ ಸಾಲಗಾರನಾಗುತ್ತಾನೆ. ಕರ್ನಾಟಕ ರಾಜ್ಯದ ವಾಹನಗಳಿಗೆ ಜೀವಿತಾವಧಿ ತೆರಿಗೆ ವಿಧಿಸಿದ್ದು (ಲೈಫ್ ಟ್ಯಾಕ್ಸ್) ಇದರ ಪರಿಹಾರದ ಬಗ್ಗೆ ಚಕಾರವೆತ್ತಿಲ್ಲ. ಆದಾಯ ತೆರಿಗೆ ಮಿತಿ ಏರಿಕೆ ಮಾಡಿರುವುದು ಮೂಗಿಗೆ ತುಪ್ಪ ಸವರಿದಂತಿದೆ. ಹಣದುಬ್ಬರ ಏರಿಕೆಯಾಗಿ ಜೀವನ ವೆಚ್ಚ ಹೆಚ್ಚಾಗಿರುವ ಕಾರಣ ಈ ಮಿತಿ ಏರಿಕೆ ಉಪಯೋಗವಾಗುವುದಿಲ್ಲ. 9000 ಕೋಟಿ ರೂ. ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳಿಗೆ ತಲುಪಲು ಯಾವುದೇ ಸ್ಪಷ್ಟ ಕಲ್ಪನೆ ಇಲ್ಲ. ಕಳೆದ ಆರ್ಥಿಕ ವರ್ಷದಲ್ಲಿ ಈ ಯೋಜನೆಯಲ್ಲಿ ನೀಡಲಾದ ಹಣ ಮತ್ತು ಉದ್ಯಮಗಳ ಸಂಖ್ಯೆ ತಿಳಿಸಿಲ್ಲ. ಮೈಸೂರನ್ನು ಸಿಂಗಾಪುರ್, ಪ್ಯಾರಿಸ್ ಮಾಡುತ್ತೇನೆ ಎಂದಿದ್ದವರೂ ಯಾವುದೇ ಅಭಿವೃದ್ಧಿ ಯೋಜನೆ ನೀಡಿಲ್ಲ. ಇದೆಲ್ಲವೂ ಖಾಸಗೀಕರಣ ಮಾಡುವ ಹುನ್ನಾರ. ಒಟ್ಟಾರೆ ಇದೊಂದು ನಿರಾಶಾದಾಯಕ ಬಜೆಟ್.

– **ವಾಸು, ಅಧ್ಯಕ್ಷ, ಮೈಸೂರು ಕೈಗಾರಿಕೆಗಳ ಸಂಘ**

ಸಚಿವರ ವೇತನ, ಕಚೇರಿ ನಿರ್ವಹಣೆಗೆ 1,258 ಕೋಟಿ

ನವದೆಹಲಿ: ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಸಚಿವರ ವೇತನ, ಪ್ರವಾಸ, ವಿದೇಶಿ ಅತಿಥಿಗಳ ಮನರಂಜನೆ ಸೇರಿದಂತೆ ಕೇಂದ್ರ ಸಚಿವ ಸಂಪುಟದ ವಿವಿಧ ಕಚೇರಿಗಳ ನಿರ್ವಹಣೆಗೆ 1,258.68 ಕೋಟಿ ರೂ. ಮೀಸಲಿಡಲಾಗಿದೆ. ಇದರಲ್ಲಿ ಮಂತ್ರಿಗಳ ಪರಿಷತ್ತಿಗೆ 832.81 ಕೋಟಿ ರೂ., ರಾಷ್ಟ್ರೀಯ ಭದ್ರತಾ ಮಂಡಳಿಯ ಸೆಕ್ರೆಟರಿಯೇಟ್‌ಗೆ 185.7 ಕೋಟಿ, ಪ್ರಧಾನ ವೈಜ್ಞಾನಿಕ ಸಲಹೆಗಾರರ ಕಚೇರಿಗೆ 96.93 ಕೋಟಿ, ಪ್ರಧಾನ ಮಂತ್ರಿಗಳ ಕಾರ್ಯಾಲಯಕ್ಕೆ 62.65 ಕೋಟಿ ಹಾಗೂ ಕ್ಯಾಬಿನೆಟ್ ಸೆಕ್ರೆಟರಿಯೇಟ್‌ಗೆ 71.91 ಕೋಟಿ ರೂ. ಹಂಚಿಕೆ ಮಾಡಲಾಗಿದೆ.

ದೇಶದ ಸುಸ್ಥಿತಿಗೆ ಬಜೆಟ್ ಸಾಕ್ಷಿ...

ದೇಶದ ಆರ್ಥಿಕ ವ್ಯವಸ್ಥೆ ಸುಸ್ಥಿತಿಯಲ್ಲಿದೆ, ದೇಶ ಸರಿಯಾದ ದಿಕ್ಕಿನಲ್ಲಿ ಮುನ್ನುಗ್ಗುತ್ತಿದೆ ಎನ್ನುವುದು ಈ ಬಜೆಟ್‌ನಿಂದ ವ್ಯಕ್ತವಾಗಿದೆ. ಕರ್ನಾಟಕದ ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ರೂ. ನೀಡಿರುವುದು ಅತ್ಯಂತ ಸಂತಸದ ಸಂಗತಿ. ರೈಲ್ವೆ ಹೈವೆ ಅಭಿವೃದ್ಧಿ ಯೋಜನೆಗಳಿಗಾಗಿ ರಾಜ್ಯಕ್ಕೆ ಪ್ರಧಾನಿ ಮೋದಿ ಅವರ ಸರ್ಕಾರದಲ್ಲಿ ಭರಪೂರ ಅನುದಾನ ಬಂದಿದೆ ಇದಕ್ಕಾಗಿ ರಾಜ್ಯದ ಸಮಸ್ತ ಜನತೆ ಪರವಾಗಿ ಮೋದಿ ಅವರಿಗೆ ಅನಂತ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

– **ಸಂಸದ ಪ್ರತಾಪ್ ಸಿಂಹ**

ಜನ ಮೆಚ್ಚಿದ ಬಜೆಟ್

ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ರೂ.ನೀಡಿದೆ. ಇಲ್ಲಿಯವರೆಗೆ ಯಾವ ಕೇಂದ್ರ ಸರ್ಕಾರವೂ ಇಷ್ಟು ಮೊತ್ತದ ಅನುದಾನ ನೀಡಿರಲಿಲ್ಲ. ಗುಡಿ ಕೈಗಾರಿಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಗುಡಿ ಕೈಗಾರಿಕೆಗಳು ಉಳಿದರೆ ದೇಶದ ಕಲೆ, ಸಂಸ್ಕೃತಿ ಉಳಿಯುತ್ತದೆ. ತೆರಿಗೆ ಮಿತಿ ಹೆಚ್ಚಳದಿಂದ ಸಾರ್ವಜನಿಕರಿಗೆ ಅನುಕೂಲವಾಗಿದೆ. ಎಲ್ಲಾ ಕ್ಷೇತ್ರಗಳಲ್ಲೂ ಅನುಕೂಲ ಮಾಡಿಕೊಡಲಾಗಿದೆ. ದೇಶದ ಪ್ರಗತಿಗೆ ಪೂರಕವಾದ ಬಜೆಟ್ ಇದಾಗಿದೆ. ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಹಾಗೂ ಪ್ರದಾನ ಮಂತ್ರಿ ನರೇಂದ್ರ ಮೋದಿಯವರಿಗೆ ವೈಯಕ್ತಿಕವಾಗಿ ಅಭಿನಂದನೆ ಸಲ್ಲಿಸುತ್ತೇನೆ.

– **ಎಲ್.ನಾಗೇಂದ್ರ, ಶಾಸಕ, ಚಾಮರಾಜ ವಿಧಾನಸಭಾ ಕ್ಷೇತ್ರ**


ಸ್ಟಾರ್ಟಪ್‌ಗಳಿಗೆ ತೆರಿಗೆ ರಜೆ ವಿಸ್ತರಣೆ; ಕೃತಕ ಬುದ್ಧಿಮತ್ತೆಗಾಗಿ 3 ಶ್ರೇಷ್ಠತಾ ಕೇಂದ್ರ ಸ್ಥಾಪನೆ

ನವದೆಹಲಿ, ಫೆ.1- ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸ್ಟಾರ್ಟ್‌ಅಪ್‌ಗಳಿಗೆ ತೆರಿಗೆ ರಜೆ ಅವಧಿಯನ್ನು ವಿಸ್ತರಿಸಿದ್ದು, ಸ್ಟಾರ್ಟ್‌ಅಪ್‌ಗಳ ಆದಾಯ ತೆರಿಗೆ ಪ್ರಯೋಜನಕ್ಕಾಗಿ ಸಂಯೋಜನೆಯ ದಿನಾಂಕವನ್ನು ಮಾರ್ಚ್ 31, 2023 ರಿಂದ ಮಾರ್ಚ್ 31, 2024ರವರೆಗೆ ವಿಸ್ತರಿಸಲಾಗಿದೆ. ಈ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪಿಸಿದ ನಿರ್ಮಲಾ ಸೀತಾರಾಮನ್, ಕೆಲವು ಸ್ಟಾರ್ಟ್-ಅಪ್‌ಗಳು 1ನೇ ಏಪ್ರಿಲ್, 2023ರ ಮೊದಲು ಸಂಯೋಜಿಸಲ್ಪಟ್ಟರೆ ಕೆಲವು ತೆರಿಗೆ ಪ್ರಯೋಜನಗಳಿಗೆ ಅರ್ಹವಾಗಿರುತ್ತವೆ. ಅಂತಹ ಅರ್ಹ ಸ್ಟಾರ್ಟ್-ಅಪ್‌ಗಳ ಸಂಯೋಜನೆಯ ಅವಧಿಯನ್ನು 1 ಏಪ್ರಿಲ್ 2024ರ ಮೊದಲು ಒಂದು ವರ್ಷದವರೆಗೆ ವಿಸ್ತರಿಸಲು ಪ್ರಸ್ತಾಪಿಸಲಾಗಿದೆ ಎಂದು ಅವರು ಹೇಳಿದರು.

ಸ್ಟಾರ್ಟ್‌ಅಪ್‌ಗಳಿಗೆ ಕ್ಯಾರಿ ಫಾರ್ವರ್ಡ್‌ನ ಲಾಭವನ್ನು 10 ವರ್ಷಗಳವರೆಗೆ ಹೆಚ್ಚಿಸಲು ಸರ್ಕಾರ ಪ್ರಸ್ತಾಪಿಸಿದೆ. ಪ್ರಸ್ತುತ ಈ ಸಡಿಲಿಕೆಯು ಅಂತಹ ಪ್ರಾರಂಭದ ಸಂಯೋಜನೆಯಿಂದ 7 ವರ್ಷಗಳ ಅವಧಿಯಲ್ಲಿ ಉಂಟಾದ ನಷ್ಟಗಳಿಗೆ ಅನ್ವಯಿಸುತ್ತದೆ. ಈ ಅವಧಿಯನ್ನು 10 ವರ್ಷಗಳಿಗೆ ಹೆಚ್ಚಿಸಲು ಪ್ರಸ್ತಾಪಿಸಲಾಗಿದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದರು.

ಗ್ರಾಮೀಣ ಪ್ರದೇಶದ ಯುವ ಉದ್ಯಮಿಗಳಿಂದ ಕೃಷಿ-ಸ್ಟಾರ್ಟ್‌ಅಪ್‌ಗಳನ್ನು ಉತ್ತೇಜಿಸಲು ಕೃಷಿ ವೇಗವರ್ಧಕ ನಿಧಿಯನ್ನು ಸ್ಥಾಪಿಸಲಾಗುವುದು. ರೈತರು ಎದುರಿಸುತ್ತಿರುವ ಸವಾಲುಗಳಿಗೆ ನವೀನ ಮತ್ತು ಕೈಗೆಟಕುವ ಪರಿಹಾರಗಳನ್ನು ತರುವ ಗುರಿಯನ್ನು ಹೊಂದಿದೆ. ಇದು ಕೃಷಿ ಪದ್ಧತಿಗಳನ್ನು ಪರಿವರ್ತಿಸಲು, ಉತ್ಪಾದಕತೆ ಮತ್ತು ಲಾಭದಾಯಕತೆಯನ್ನು ಹೆಚ್ಚಿಸಲು ಆಧುನಿಕ ತಂತ್ರಜ್ಞಾನಗಳನ್ನು ತರುತ್ತದೆ ಎಂದು ಹೇಳಿದರು.

ಸರ್ಕಾರಕ್ಕೆ ನಾಸ್ಕಾಮ್ ಸಲಹೆ: ಈ ಬಗ್ಗೆ ನಾಸ್ಕಾಮ್ ಸರ್ಕಾರಕ್ಕೆ ಹಲವು ಸಲಹೆಗಳನ್ನು ನೀಡಿದ್ದು, ಸರ್ಕಾರಕ್ಕೆ ನೀಡಿದ ಸಲಹೆಯಲ್ಲಿ, ಅರ್ಹ ಸ್ಟಾರ್ಟ್‌ಅಪ್‌ಗಳು 10 ವರ್ಷಗಳ ಸಂಯೋಜನೆಯ ಅವಧಿಯಲ್ಲಿ ನಷ್ಟವನ್ನು ಮುಂದಕ್ಕೆ ಸಾಗಿಸಬೇಕು ಮತ್ತು ಹೊಂದಿಸಬೇಕು ಎಂದು ನಾಸ್ಕಾಮ್ ಹೇಳಿದೆ.



ರಾಷ್ಟ್ರೀಯ ಡೇಟಾ ಆಡಳಿತ ನೀತಿ: ಅಲ್ಲದೆ, ರಾಷ್ಟ್ರೀಯ ಡೇಟಾ ಆಡಳಿತ ನೀತಿಯನ್ನು ಪ್ರಾರಂಭಿಸಲಾಗುವುದು, ಇದು ಅನಾಮಧೇಯ ಡೇಟಾಗೆ ಪ್ರವೇಶವನ್ನು ಸಕ್ರಿಯಗೊಳಿಸುತ್ತದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದು, ಈ ವರ್ಷದ ಬಜೆಟ್‌ನಲ್ಲಿನ ಮತ್ತೊಂದು ಪ್ರಮುಖ ಘೋಷಣೆಯೆಂದರೆ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕೃತಕ ಬುದ್ಧಿಮತ್ತೆಗಾಗಿ ಮೂರು ಶ್ರೇಷ್ಠತೆಯ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದರು.

ಕೃತಕ ಬುದ್ಧಿಮತ್ತೆಗಾಗಿ 3 ಶ್ರೇಷ್ಠತೆಯ ಕೇಂದ್ರ: ಇದೇ ವೇಳೆ ಕೃತಕ ಬುದ್ಧಿಮತ್ತೆಗಾಗಿ 3 ಶ್ರೇಷ್ಠತೆಯ ಕೇಂದ್ರಗಳನ್ನು ಸ್ಥಾಪಿಸುವುದಾಗಿ ಘೋಷಣೆ ಮಾಡಿದ ನಿರ್ಮಲಾ ಸೀತಾರಾಮನ್ ಅವರು, ಪ್ರಮುಖ ಉದ್ಯಮದಾರರು ಅಂತರಶಿಸ್ತೀಯ ಸಂಶೋಧನೆಗಳನ್ನು ನಡೆಸುವಲ್ಲಿ ಪಾಲುದಾರರಾಗುತ್ತಾರೆ, ಅತ್ಯಾಧುನಿಕ ಅಪ್ಲಿಕೇಶನ್ ಗಳನ್ನು ಅಭಿವೃದ್ಧಿಪಡಿಸುತ್ತಾರೆ ಮತ್ತು ಕೃಷಿ, ಆರೋಗ್ಯ ಮತ್ತು ಸುಸ್ಥಿರ ನಗರಗಳ ಕ್ಷೇತ್ರಗಳಲ್ಲಿ ಸ್ಕೇಲೆಬಲ್ ಸಮಸ್ಯೆ ಪರಿಹಾರಗಳನ್ನು ಅಭಿವೃದ್ಧಿಪಡಿಸುತ್ತಾರೆ. ಇದು ಪರಿಣಾಮಕಾರಿ AI ಪರಿಸರ ವ್ಯವಸ್ಥೆಯನ್ನು ಉತ್ತೇಜಿಸುತ್ತದೆ ಮತ್ತು ಕ್ಷೇತ್ರದಲ್ಲಿ ಗುಣಮಟ್ಟದ ಮಾನವ ಸಂಪನ್ಮೂಲಗಳನ್ನು ಪೋಷಿಸುತ್ತದೆ ಎಂದು ಅವರು ಹೇಳಿದರು.

ಮೀಸಲಾದ AI CoEಗಳನ್ನು ಸ್ಥಾಪಿಸುವುದು AI ಮತ್ತು ಸುಸ್ಥಿರ ಅಭಿವೃದ್ಧಿ ಮತ್ತು ಬೆಳವಣಿಗೆಗೆ AIಯ ಬಳಕೆಯಲ್ಲಿ ಭಾರತದ ನಾಯಕತ್ವವನ್ನು ಬಲಪಡಿಸುವ ಒಂದು ಉತ್ತಮ ಹೆಜ್ಜೆಯಾಗಿದೆ ಎಂದು Nasscom ಅಭಿಪ್ರಾಯಪಟ್ಟಿದೆ. ಯೂನಿಕಾರ್ನ್ ಇಂಡಿಯಾ ವೆಂಚರ್ಸ್‌ನ ವ್ಯವಸ್ಥಾಪಕ ಪಾಲುದಾರ ಅನಿಲ್ ಜೋಶಿ ಈ ಬಗ್ಗೆ ಮಾತನಾಡಿ, ಎಫ್‌ಎಂ ಎಂಎಸ್‌ಎಂಇ ಮತ್ತು ಸ್ಟಾರ್ಟ್‌ಅಪ್‌ಗಳಿಗೆ ವಿಶೇಷ ಗಮನವನ್ನು ನೀಡಿದೆ. ಕೆವೈಸಿಯನ್ನು ಸರಾಗಗೊಳಿಸುವಿಕೆ, ವ್ಯಾಪಾರಕ್ಕಾಗಿ ಪ್ಯಾನ್ ಅನ್ನು ಏಕರೂಪದ ಗುರುತಾಗಿ ಮಾಡುವಂತಹ ಪ್ರಕಟಣೆಗಳು ವಿಶೇಷವಾಗಿ ಹೊಸ ವ್ಯವಹಾರಗಳನ್ನು ಸ್ಥಾಪಿಸುವಲ್ಲಿ ಬಹಳ ದೂರ ಹೋಗುತ್ತವೆ. ಪ್ರಮುಖವಾಗಿ Fintech ಮತ್ತು Insuretech ವಿಭಾಗದಲ್ಲಿ ಇದು ಹೆಚ್ಚು ಪರಿಣಾಮಕಾರಿಯಾಗುತ್ತದೆ ಎಂದು ಹೇಳಿದ್ದಾರೆ. ಅಂತೆಯೇ ತೆರಿಗೆ ವಿನಾಯಿತಿ ಅವಧಿಯನ್ನು 7 ವರ್ಷದಿಂದ 10 ವರ್ಷಗಳಿಗೆ ಹೆಚ್ಚಿಸುವುದು ಒಂದು ದೊಡ್ಡ ಘೋಷಣೆಯಾಗಿದೆ ಮತ್ತು ಉದ್ಯಮದ ಬೆಳವಣಿಗೆಯ ಮೇಲೆ ಗಳಿಕೆಯನ್ನು ಮರುಹಂಚಿಕೆ ಮಾಡಲು ಸ್ಟಾರ್ಟ್‌ಅಪ್‌ಗಳಿಗೆ ಸಹಾಯ ಮಾಡುತ್ತದೆ. ಹಾಗೆಯೇ MSMEಗೆ 3 ಕೋಟಿ ರೂಪಾಯಿಗಳವರೆಗೆ ತೆರಿಗೆ ರಿಯಾಯಿತಿಯು ನಗದು ಹರಿವನ್ನು ಸುಲಭಗೊಳಿಸಲು ಕಂಪನಿಗಳಿಗೆ ಸಹಾಯ ಮಾಡುತ್ತದೆ ಎಂದು ಅವರು ಹೇಳಿದ್ದಾರೆ.


ಕೇಂದ್ರ ಬಜೆಟ್ ನವಭಾರತದ ದೃಷ್ಟಿಕೋನ

ಲಕ್ನೋ, ಫೆ.1-2023-24ರ ಕೇಂದ್ರ ಬಜೆಟ್ ನವ ಭಾರತದ ದೃಷ್ಟಿಕೋನವನ್ನು ಹೊಂದಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅಭಿಪ್ರಾಯಪಟ್ಟರು. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು 2023ರ ಕೇಂದ್ರ ಬಜೆಟ್ ಅನ್ನು ಮಂಡಿಸಿದರು. ಇದು ಮೋದಿ ಸರ್ಕಾರದ ಕೊನೆಯ ಪೂರ್ಣ ಪ್ರಮಾಣದ ಕೇಂದ್ರ ಬಜೆಟ್ ಆಗಿದೆ. ಕೇಂದ್ರ ಬಜೆಟ್ ಕುರಿತು ಯೋಗಿ ಆದಿತ್ಯನಾಥ್ ಟ್ವೀಟ್ ಮಾಡಿದ್ದಾರೆ.



ಬಜೆಟ್‌ನಲ್ಲಿ ನವ ಭಾರತ, ದೇಶದ ಸಮೃದ್ಧಿಯ ದೃಷ್ಟಿಕೋನ ಹಾಗೂ 130 ಕೋಟಿ ಭಾರತೀಯರಿಗೆ ಸೇವೆ ಸಲ್ಲಿಸುವ ಗುರಿಹೊಂದಿದೆ. ಬಜೆಟ್ ಬಡವರು, ರೈತರು, ಯುವಕರು, ಮಹಿಳೆಯರು ಸೇರಿದಂತೆ ಸಮಾಜದ ಎಲ್ಲಾ ವರ್ಗಗಳ ನಿರೀಕ್ಷೆಗಳು ಹಾಗೂ ಆಕಾಂಕ್ಷೆಗಳನ್ನು ಈಡೇರಿಸುತ್ತದೆ ಎಂದು ತಿಳಿಸಿದರು. ಈ ಬಜೆಟ್ ದೇಶದ ಆರ್ಥಿಕತೆಯನ್ನು ಸೂಪರ್ ಪವರ್ ಮಾಡುವಲ್ಲಿ ಒಂದು ಮೈಲುಗಲ್ಲು ಎಂದು ಸಾಬೀತು ಮಾಡುತ್ತದೆ ಎಂದು ತಿಳಿಸಿದರು.

ದೂರದೃಷ್ಟಿ ಇಲ್ಲದ ಬಜೆಟ್



ನವದೆಹಲಿ: ಬಿಜೆಪಿ ಮೇಲಿನ ಜನರ ನಂಬಿಕೆ ನಿರಂತರವಾಗಿ ಕುಸಿಯುತ್ತಿದೆ ಎಂಬುದಕ್ಕೆ ಪ್ರಧಾನಿ ಮೋದಿ ಸರ್ಕಾರ ಮಂಡಿಸಿರುವ ಇಂದಿನ ಬಜೆಟ್ ಸಾಕ್ಷಿಯಾಗಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ನಡೆಸಿದ್ದಾರೆ. ಕೇಂದ್ರ ಬಜೆಟ್ ವಿಚಾರವಾಗಿ ಸರಣಿ ಟ್ವೀಟ್ ಮಾಡಿರುವ ಅವರು, ಕೇವಲ ಚುನಾವಣೆಯನ್ನು ಗಮನದಲ್ಲಿಟ್ಟು ಕೊಂಡು ಮಂಡನೆ ಮಾಡಿರುವ ಬಜೆಟ್ ಇದಾಗಿದ್ದು, ದೇಶವನ್ನು ಗಮನದಲ್ಲಿರಿಸಿಕೊಂಡಿಲ್ಲ. ಮುಖ್ಯವಾಗಿ ನಿರುದ್ಯೋಗ ಸಮಸ್ಯೆ ನಿವಾರಿಸಲು ಯಾವುದೇ ಕ್ರಮ ಕೈಗೊಂಡಿಲ್ಲ ಹಾಗಾಗಿ ಇದು ದೂರದೃಷ್ಟಿ ಇಲ್ಲದ ಬಜೆಟ್ ಎಂದು ಟೀಕಿಸಿದ್ದಾರೆ. ಹಣದುಬ್ಬರ ಹಾಗೂ ದೈನಂದಿನ ವಸ್ತುಗಳ ಬೆಲೆ ಕಡಿಮೆ ಮಾಡುವ ಯಾವುದೇ ಅಂಶ ಬಜೆಟ್‌ನಲ್ಲಿಲ್ಲ. ಬೇಳೆಕಾಳು, ಹಾಲು, ಅಡುಗೆ ಅನಿಲ ಬೆಲೆ ಏರಿಕೆ ಮಾಡಿರುವ ಮೋದಿ ಸರ್ಕಾರ ದೇಶವನ್ನು ಲೂಟಿ ಮಾಡಿದೆ ಎಂದು ಖರ್ಗೆ ಆರೋಪಿಸಿದ್ದಾರೆ.

ಬಜೆಟ್ ಜನಪರ ಕಾರ್ಯಕ್ರಮಗಳ ಬಗ್ಗೆ ಬಿಜೆಪಿಯಿಂದ ರಾಷ್ಟ್ರವ್ಯಾಪಿ ಅಭಿಯಾನ

ನವದೆಹಲಿ: ಕೇಂದ್ರ ಬಜೆಟ್‌ನಲ್ಲಿ ಘೋಷಿಸಿರುವ ಜನಪರ ಕಾರ್ಯಕ್ರಮಗಳ ಬಗ್ಗೆ ಜನರಿಗೆ ಅರಿವು ಮೂಡಿಸಲು ಬಿಜೆಪಿ 12 ದಿನಗಳ ರಾಷ್ಟ್ರವ್ಯಾಪಿ ಅಭಿಯಾನ ಪ್ರಾರಂಭಿಸಲಿದೆ ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ.

ಈ ಅಭಿಯಾನವನ್ನು ಬಿಜೆಪಿಯ ಹಿರಿಯ ನಾಯಕ ಸುಶೀಲ್ ಮೋದಿ ಸಂಯೋಜಿಸಲಿದ್ದು, ಫೆ.12ರಂದು ಮುಕ್ತಾಯಗೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಪಕ್ಷದ ಪ್ರಧಾನ ಕಾರ್ಯದರ್ಶಿ ಸುನಿಲ್ ಬನ್ಸಾಲ್ ಮತ್ತು ರೈತ ಮತ್ತು ಯುವ ಘಟಕಗಳ ಮುಖ್ಯಸ್ಥರು ಸೇರಿದಂತೆ ಒಂಬತ್ತು ಸದಸ್ಯರನ್ನು ಒಳಗೊಂಡ ಕಾರ್ಯಪಡೆ ರಚಿಸಲಾಗಿದೆ. ಅಭಿಯಾನದ ಭಾಗವಾಗಿ ಬಿಜೆಪಿ ಆಡಳಿತ ರಾಜ್ಯಗಳ ಮುಖ್ಯಮಂತ್ರಿಗಳು ಪತ್ರಿಕಾಗೋಷ್ಠಿ ನಡೆಸಿದರೆ, ಪಕ್ಷವು ಅಧಿಕಾರದಲ್ಲಿಲ್ಲದ ರಾಜ್ಯಗಳಲ್ಲಿ ಬಿಜೆಪಿ ಘಟಕದ ಮುಖ್ಯಸ್ಥರು ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕರು ಪತ್ರಿಕಾಗೋಷ್ಠಿಗಳನ್ನು ನಡೆಸಲಿದ್ದಾರೆ ಎಂದು ಪಕ್ಷದ ನಾಯಕರು ತಿಳಿಸಿದ್ದಾರೆ.



ದೇಶದ 50 ಪ್ರಮುಖ ನಗರಗಳಲ್ಲಿ ನರೇಂದ್ರ ಮೋದಿ ಸರ್ಕಾರದ ಸಚಿವರು ಪತ್ರಿಕಾಗೋಷ್ಠಿ ನಡೆಸಿ ಬಜೆಟ್‌ನಲ್ಲಿ ಘೋಷಿಸಿದ ಜನಪರ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಿದ್ದಾರೆ. ಕಾರ್ಯಕ್ರಮಗಳನ್ನು ಅಂತಿಮಗೊಳಿಸಲು ಮತ್ತು ಬಜೆಟ್ ಕುರಿತು ಬಿಜೆಪಿ ಪ್ರಚಾರದ ನೀಲನಕ್ಷೆ ನಿರ್ಧರಿಸಲು ರಚಿಸಲಾದ ಕಾರ್ಯಪಡೆ ಸೋಮವಾರ ಇಲ್ಲಿನ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಸಭೆ ಸೇರಿತ್ತು. 2024ರಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿರುವ ಕಾರಣ ಈ ಬಜೆಟ್ ಮೋದಿ ಸರ್ಕಾರದ 2ನೇ ಅವಧಿಯ ಕೊನೆ ಪೂರ್ಣ ಪ್ರಮಾಣದ ಬಜೆಟ್ ಆಗಿದೆ. ಆದ್ದರಿಂದ, ಕೇಂದ್ರದಲ್ಲಿ ಆಡಳಿತಾರೂಢ ಬಿಜೆಪಿ ಈ ಅಭಿಯಾನದ ಲಾಭ ಪಡೆಯಲು ಬಯಸಿದೆ.

'ಪೊಲ್ಯುಟಿಂಗ್' ಬದಲು ಪೊಲಿಟಿಕಲ್: ನಗೆಗಡಲಲ್ಲಿ ತೇಲಿದ ಸಂಸತ್



ನವದೆಹಲಿ: 2023-24ನೇ ಸಾಲಿನ ಕೇಂದ್ರ ಬಜೆಟ್ ಮಂಡನೆ ವೇಳೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹಳೇ ಸರ್ಕಾರಿ ವಾಹನಗಳ ಬದಲಾವಣೆಗೆ ಕ್ರಮದ ಬಗ್ಗೆ ಪ್ರಸ್ತಾಪಿಸಿ ಹೆಚ್ಚಿನ ಮಾಲಿನ್ಯ ಉಂಟು ಮಾಡುವ ಹಳೇ ಸರ್ಕಾರಿ ವಾಹನಗಳ ಬದಲಾವಣೆಗೆ ಅಗತ್ಯ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದರು.

ರಾಜ್ಯ ಸರ್ಕಾರಗಳ ಸುಪರ್ದಿಯಲ್ಲಿರುವ ಹಳೇ ವಾಹನಗಳು ಮತ್ತು ಆಂಬುಲೆನ್ಸ್‌ಗಳ ಬದಲಾವಣೆಗೆ ಕೇಂದ್ರ ಸರ್ಕಾರ ನೆರವು ಒದಗಿಸಲಿದೆ ಎಂದು ತಿಳಿಸಿದರು. ಇದೇ ವೇಳೆ ಸಚಿವರು ಪೊಲ್ಯುಟಿಂಗ್ (ಮಾಲಿನ್ಯ) ಎಂದು ಹೇಳುವ ಬದಲು ಪೊಲಿಟಿಕಲ್ (ರಾಜಕೀಯ) ಎಂದು ಹೇಳಿದರು. ಕೂಡಲೇ ಎಚ್ಚೆತ್ತ ಅವರು ಓಹ್ ಕ್ಷಮಿಸಿ ಎಂದು ಮುಗುಳ್ನಕ್ಕರು. ನಿರ್ಮಲಾ ಮಾತಿಗೆ ಇಡೀ ಸಂಸತ್ ಒಂದು ಕ್ಷಣ ನಗೆಗಡಲಲ್ಲಿ ತೇಲಿತು. ಹಳೇ ಮಾಲಿನ್ಯಕಾರಕಗಳನ್ನು ಬದಲಿಸಬೇಕು, ನಾನು ಹೇಳಿದ್ದು ಸರಿ ಅಲ್ಲವೇ ಎಂದು ನಿರ್ಮಲಾ ಪ್ರತಿಪಕ್ಷಗಳಿಗೆ ತಿರುಗೇಟು ನೀಡಿದರು.

ಮೋದಿ ಯೋಗ ಚಿತ್ರದ ಮೂಲಕ ಕಾಂಗ್ರೆಸ್ ಟಾಂಗ್

ನವದೆಹಲಿ: ಸಂಸತ್ತಿನಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ತಮ್ಮ ಬಜೆಟ್ ಭಾಷಣ ಮುಕ್ತಾಯಗೊಳಿಸುತ್ತಿದ್ದಂತೆ ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಕಾಂಗ್ರೆಸ್, ಕೇಂದ್ರ ಸರ್ಕಾರ ಆಕಾಶದೆತ್ತರಕ್ಕೆ ಭರವಸೆಗಳನ್ನು ನೀಡುತ್ತದೆ.

ಆದರೆ ಜಾರಿಗೊಳಿಸುವುದು ಮಾತ್ರ ಶೂನ್ಯ ಎಂಬ ಅರ್ಥದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಯೋಗ ಮಾಡುತ್ತಿರುವ ಚಿತ್ರವನ್ನು ಟ್ವೀಟ್ ಮಾಡಿದೆ. "ಬಜೆಟ್ ಖತಮ್ ಹುವಾ. ರಿಯಾಲಿಟಿ, ಕ್ಲೈಮ್" ಎಂದು ಬರೆದು ಪ್ರಧಾನಿ ಮೋದಿ ಅವರ ಚಿತ್ರವನ್ನು ಕಾಂಗ್ರೆಸ್ ಟ್ವೀಟ್ ಮಾಡಿದೆ.

ಮೂಗಿಗೆ ತುಪ್ಪ ಸವರಿದಂತಿದೆ



ನವದೆಹಲಿ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿರುವ ಈ ಬಾರಿಯ ಬಜೆಟ್ ಮೂಗಿಗೆ ತುಪ್ಪ ಸವರಿದಂತಿದೆ ಎಂದು ಜೆಡಿಎಸ್ ನಾಯಕ ಹೆಚ್.ಡಿ.ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತಾಡಿದ ಅವರು, ಬಜೆಟ್‌ನಲ್ಲಿ ಘೋಷಿಸುವ ಯೋಜನೆಗಳನ್ನು ರಾಷ್ಟ್ರೀಯ ಯೋಜನೆಗಳಾಗಿ ಪರಿಗಣಿಸಿ ಅವುಗಳನ್ನು ಜಾರಿಗೊಳಿಸಬೇಕೆಂದು ಬಹಳ ಹಿಂದೆಯೇ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ. ಈಗ ಚುನಾವಣೆ ವರ್ಷದಲ್ಲಿ ಮಾಡಿರುವ ಕಾರ್ಯಕ್ರಮ ಸರ್ಕಾರ ಅನುಷ್ಠಾನಕ್ಕೆ ತರೋದು ಯಾವಾಗ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು. ಚುನಾವಣಾ ವರ್ಷದಲ್ಲಿ ಜನರನ್ನು ಮರಳು ಮಾಡಲು ಯೋಜನೆಗಳ ಘೋಷಣೆಯಾಗಿದೆ ಅವು ಜಾರಿಯಾಗೋದು ಕೇಂದ್ರದಲ್ಲಿ ಸರ್ಕಾರ ಬದಲಾವಣೆಯಾದ ನಂತರವೇ ಎಂದು ವ್ಯಂಗ್ಯವಾಡಿದರು. ಈಗ ಬಜೆಟ್ ಘೋಷಣೆ ಆದರೂ ಹಣಕಾಸು ಬಿಡುಗಡೆ ಏಪ್ರಿಲ್ ಮೇಲೆ ಪ್ರಾರಂಭವಾಗುತ್ತದೆ ಎಂದು ಹೇಳಿದ್ದಾರೆ. ಇದೊಂದು ಕರ್ನಾಟಕ ಕೇಂದ್ರಿತ ಚುನಾವಣಾ ಬಜೆಟ್. ರಾಜ್ಯದಲ್ಲಿ ಚುನಾವಣೆ ಕೆಲವೇ ತಿಂಗಳು ಇದೆ. ಬಜೆಟ್‌ನ ಎಲ್ಲ ಯೋಜನೆಗಳು ಜಾರಿ ಆಗಬೇಕಲ್ಲ ಎಂದು ವ್ಯಂಗ್ಯವಾಡಿದರು. ರೈಲ್ವೆ ಯೋಜನೆ 20-30 ವರ್ಷಗಳ ಹಿಂದೆ ಘೋಷಣೆ ಆಗಿರುವುದು ಇನ್ನೂ ಆಮೆ ಗತಿಯಲ್ಲಿ ನಡೆಯುತ್ತಿದೆ. ಕೇಂದ್ರದ ಕಾರ್ಯಕ್ರಮ ಘೋಷಣೆ ಆಗದೆ ಉಳಿದಿದೆ ಎಂದರು.

ನಾಳೆ ಕುಶಾಲನಗರದಲ್ಲಿ ಸಾಹಿತ್ಯ ಸಮ್ಮೇಳನ

ಸಮ್ಮೇಳನಾಧ್ಯಕ್ಷ ನಾರಾಯಣ್ ಅವರಿಗೆ ಆಹ್ವಾನ



ಕುಶಾಲನಗರ, ಫೆ.1– ಕುಶಾಲನಗರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ವತಿಯಿಂದ ಫೆ.3 ರಂದು ಕುಶಾಲ ನಗರ ರೈತ ಸಹಕಾರ ಭವನದಲ್ಲಿ ಕುಶಾಲ ನಗರ ತಾಲೂಕು ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದ್ದು, ಸಮ್ಮೇಳನದ ಸರ್ವಾಧ್ಯಕ್ಷರಾದ ಬಿ.ಆರ್.ನಾರಾಯಣ್ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಆಹ್ವಾನಿಸಲಾಯಿತು.

ಸಮ್ಮೇಳನಾಧ್ಯಕ್ಷರಾದ ಬಿ.ಆರ್. ನಾರಾಯಣ ಅವರಿಗೆ ಕಸಾಪ ತಾಲೂಕು ಘಟಕದ ಅಧ್ಯಕ್ಷ ಕೆ.ಎಸ್.ಮೂರ್ತಿ, ಸಮ್ಮೇಳನದ ಆಹ್ವಾನ ಪತ್ರಿಕೆ ನೀಡಿ ಸಮ್ಮೇಳನಕ್ಕೆ ಸ್ವಾಗತಿಸಿದರು. ಕುಶಾಲನಗರ ತಾಲೂಕು ರಚನೆಯಾದ ನಂತರ ಪ್ರಪ್ರಥಮ ಬಾರಿಗೆ ನಡೆಯುತ್ತಿರುವ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿಕೊಡಬೇಕು ಎಂದು ಮನವಿ ಮಾಡಲಾಯಿತು.

ನಿಯೋಜಿತ ಸಮ್ಮೇಳನಾಧ್ಯಕ್ಷ ಬಿ.ಆರ್. ನಾರಾಯಣ ಮಾತನಾಡಿ, ಜಿಲ್ಲೆಯ ವಾಣಿಜ್ಯ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ನಗರಿ ಎನಿಸಿರುವ ಕುಶಾಲನಗರದಲ್ಲಿ ತಾಲೂಕು ರಚನೆಯಾದ ನಂತರ ನಡೆಯುತ್ತಿರುವ ಪ್ರಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಮೂಲಕ ನಾಡಿನ ಸಾಹಿತ್ಯ ಹಾಗೂ ಸಾಂಸ್ಕೃತಿಕ ಲೋಕದ ಬಗ್ಗೆ ಹೊಸ ತಲೆ ಮಾರಿನ ಪ್ರತಿಭೆಗಳಿಗೆ ಪರಿಚಯ ಮಾಡಬೇಕಿದೆ. ಸಾಹಿತ್ಯ ಸಮ್ಮೇಳನಗಳು ಕನ್ನಡಿಗರ ಅಸ್ಮಿತೆಯ ಪ್ರದರ್ಶನದೊಂದಿಗೆ ಕನ್ನಡ ನಾಡು– ನುಡಿ ಭಾಷಾ ಬೆಳವಣಿಗೆ ಮೂಲಕ ಕನ್ನಡ ಮನಸ್ಸುಗಳನ್ನು ಒಟ್ಟುಗೂಡಿಸುವಂತಾಗಲಿ ಎಂದರು. ಕಸಾಪ ಅಧ್ಯಕ್ಷ ಕೆ.ಎಸ್. ಮೂರ್ತಿ, ಮಾಜಿ ಅಧ್ಯಕ್ಷ ಟಿ.ಜಿ.ಪ್ರೇಮಕುಮಾರ್, ಗೌರವ ಕಾರ್ಯದರ್ಶಿ ಎಸ್.ನಾಗರಾಜ್, ಟಿ.ವಿ.ಶೈಲಾ, ಗೌರವ ಕೋಶಾಧಿಕಾರಿ ಕೆ.ವಿ.ಉಮೇಶ್, ಪದಾಧಿಕಾರಿಗಳಾದ ಎಂ.ಎನ್.ಕಾಳಪ್ಪ, ಬಿ.ಬಿ.ಹೇಮಲತಾ, ಎನ್.ಮೋಹನ್ ಕುಮಾರ್, ಎಚ್.ಎನ್. ಸುಬ್ರಮಣ್ಯ ಇತರರು ಇದ್ದರು.

ಪರಿಚಯ: ಕೊಡಗಿನ ಕಾವೇರಿ ಉಗಮ ಸ್ಥಳ ಭಾಗಮಂಡಲದಲ್ಲಿ ಕಾವೇರಿ ಮಡಿಲು ಭಾಗಮಂಡಲದಲ್ಲಿ ಬೆಳ್ಳಿಮನೆ ರಾಮಚಂದ್ರಯ್ಯ ನಾರಾಯಣ 11–12–78 ರಲ್ಲಿ ಜನಿಸಿದರು. ಇವರು ಕಳೆದ ಹಲವಾರು ವರ್ಷಗಳಿಂದ ಕುಶಾಲನಗರದ ಡಾ.ಸಿದ್ದಯ್ಯ ಪುರಾಣಿಕ ಬಡಾವಣೆಯಲ್ಲಿ ವಾಸವಿದ್ದಾರೆ.

ಆಂಗ್ಲ ಭಾಷೆಯಲ್ಲಿ ಸ್ನಾತಕೋತ್ತರ ಪದವೀಧರರಾಗಿರುವ ಇವರು ಇಲ್ಲಿನ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಸುಮಾರು ಎರಡು ದಶಕಗಳಿಗೂ ಹೆಚ್ಚು ಕಾಲ ಗೌರವ ಆಂಗ್ಲ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು. ದಕ್ಷಿಣ ಕನ್ನಡದ ಅಳಿಕೆಯ ಹೆಸರಾಂತ ಪಿಯು ಕಾಲೇಜಿನಲ್ಲಿ ವಿದ್ಯಾಸಂಸ್ಥೆಯಲ್ಲಿಯೂ 1971 ರಿಂದ 1979 ರವರೆಗೆ ಕಾರ್ಯನಿರ್ವಹಿಸಿದ್ದಾರೆ. ಕುಶಾಲನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಶಾಲನಗರದ ಮಹಾತ್ಮ ಗಾಂಧಿ ಪದವಿ ಕಾಲೇಜು ಹಾಗೂ ಬೈಲುಕೊಪ್ಪದ ಸೆರಾಜೆ ಕೇಂದ್ರ ಶಾಲೆಯಲ್ಲಿಯೂ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ.

ಪತ್ರಿಕೋದ್ಯಮದಲ್ಲಿ ಸೇವೆ: ಹೆಸರಾಂತ ಶಿಕ್ಷಣ ಸಂಸ್ಥೆಗಳಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವ ಶ್ರೀ ನಾರಾಯಣ್ ಅವರು ತಮ್ಮ 13 ನೇ ವಯಸ್ಸಿಗೆ ಪತ್ರಿಕೋದ್ಯಮ ರಂಗಕ್ಕೆ ಪ್ರವೇಶಿಸಿದರಲ್ಲದೆ, ಅಂಕಣ ಬರೆಯಲು ಆರಂಭಿಸಿದರು. ನಂತರ ಮಣಿಪಾಲದ ಉದಯವಾಣಿ ಹಾಗೂ ಪ್ರಜಾವಾಣಿ ಪತ್ರಿಕೆ, ಕನ್ನಡ ಪ್ರಭ ಹಾಗೂ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗಳು ಸೇರಿದಂತೆ ಇನ್ನಿತರ ಪತ್ರಿಕೆಗಳಲ್ಲೂ ಕಾರ್ಯನಿರ್ವಹಿಸಿದ್ದಾರೆ. ಮುದ್ರಣ, ತಂತ್ರಜ್ಞಾನ ಹಾಗೂ ಪತ್ರಿಕೋದ್ಯಮಗಳಲ್ಲೂ ಪರಿಣತರಾಗಿರುವ ಇವರು ಕುಶಾಲನಗರದ ಕಾರ್ಯನಿರತ ಪತ್ರಕರ್ತರ ಸಂಘದ ಸ್ಥಾಪಕ ಅಧ್ಯಕ್ಷರಾಗಿಯೂ ಅಲ್ಲದೆ ಸುಮಾರು ಐದು ಅವಧಿಗೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುತ್ತಾರೆ. ಅಲ್ಲದೇ 1990 ರಲ್ಲಿ ಇವರದ್ದೇ ಸಂಪಾದಕತ್ವದ "ಓಕ್ಸ್ ಕೂರ್ಗ್" ಎಂಬ ಆಂಗ್ಲ ವಾರ ಪತ್ರಿಕೆಯನ್ನು ನಡೆಸಿದ್ದಾರೆ.

ರಾಜಾಸೀಟ್‌ನಲ್ಲಿ ಹೂವಿನ ಲೋಕ





ನಾಳೆಯಿಂದ ಫಲಪುಷ್ಪ ಪ್ರದರ್ಶನ, ಭರದ ಸಿದ್ಧತೆ

ಮಡಿಕೇರಿ, ಫೆ.1– ಮಂಜಿನಗರಿ ಮಡಿಕೇರಿ ನಗರದ ಪ್ರಮುಖ ಪ್ರವಾಸಿತಾಣಗಳಲ್ಲೊಂದಾದ ರಾಜಾಸೀಟ್ ಉದ್ಯಾನವನದಲ್ಲಿ ಹೂವುಗಳ ಲೋಕ ಪ್ರವಾಸಿಗರನ್ನು ಕೈಬೀಸಿ ಕರೆಯಲು ಸಜ್ಜಾಗಿದೆ. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ತೋಟಗಾರಿಕೆ ಇಲಾಖೆ ವತಿಯಿಂದ ನಗರದ ರಾಜಸೀಟ್ ಉದ್ಯಾನವನದಲ್ಲಿ ಫೆ.3ರಿಂದ 6ರವರೆಗೆ ನಡೆಯಲಿರುವ ಫಲಪುಷ್ಪ ಪ್ರದರ್ಶನಕ್ಕೆ ಸಕಲ ಸಿದ್ದತೆಗಳು ಭರದಿಂದ ಸಾಗಿವೆ.

ಫಲಪುಷ್ಪ ಪ್ರದರ್ಶನದಲ್ಲಿ ಹಿಂದಿನ ರಾಜರ ಕಾಲದ ನಾಲ್ಕುನಾಡು ಅರಮನೆ ಕಲಾಕೃತಿ ಒಳಗೊಂಡ ಪುಷ್ಪ ಪ್ರದರ್ಶನ ಪುಷ್ಪ ಪ್ರಿಯರನ್ನು ಆಕರ್ಷಿಸಲಿದೆ. ಇದರೊಂದಿಗೆ ಮತದಾನದ ಮಹತ್ವ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಫಲಪುಷ್ಪ ಪ್ರದರ್ಶನದಲ್ಲಿ ಬ್ಯಾಲೆಟ್ ಯುನಿಟ್, ವಿ.ವಿ ಪ್ಯಾಟ್, ಕಂಟ್ರೋಲ್ ಯೂನಿಟ್ ಮಾದರಿಯ ಹೂವಿನ ಕಲಾಕೃತಿಗಳನ್ನು ನಿರ್ಮಿಸಲಾಗುತ್ತಿದೆ. ಕೊಡಗಿನ ಪ್ರಮುಖ ವಾಣಿಜ್ಯ ಬೆಳೆಯಾದ ಕಾಫಿಯನ್ನು ಪ್ರತಿಬಿಂಬಿಸಲು ಕಾಫಿ ಕಪ್ ಮತ್ತು ಸಾಸರ್ ಮಾದರಿಯನ್ನು ಹೂವಿನ ಕಲಾಕೃತಿಯಲ್ಲಿ ರೂಪಿಸುವ ಕಾರ್ಯದಲ್ಲಿ ಕಾರ್ಮಿಕರು ನಿರತರಾಗಿದ್ದಾರೆ.

ಪುಷ್ಪ ಪ್ರದರ್ಶನ ವೀಕ್ಷಣೆಗೆ ಆಗಮಿಸಲಿರುವ ಮಕ್ಕಳಿಗೆ ಮನರಂಜನೆ ನೀಡಲು ಸ್ಪೈಡರ್ ಮ್ಯಾನ್ ಮತ್ತಿತರ ಸೆಲ್ಫಿ ಜೋನ್ ಮಾದರಿಗಳು ಪುಷ್ಪ ಪ್ರದರ್ಶನದಲ್ಲಿ ಗಮನ ಸೆಳೆಯಲಿವೆ. ತರಕಾರಿ ಮತ್ತು ಹಣ್ಣುಗಳಲ್ಲಿ ವಿವಿಧ ಗಣ್ಯರ ಕಲಾಕೃತಿಗಳು ಕಣ್ಮನ ಸೆಳೆಯಲಿವೆ. ವಿವಿಧ ಅಲಂಕಾರಿಕ ಬೊನ್ಸಾಯ್ ಗಿಡಗಳ ಪ್ರದರ್ಶನ, ಇಕೆಬಾನೆ ಹೂವಿನ ಜೋಡನೆ, ಆಂಥೋರಿಯಂ ಪ್ರದರ್ಶನ ಪುಷ್ಪಪ್ರದರ್ಶನಕ್ಕೆ ಮೆರುಗು ನೀಡಲಿವೆ. ರಾಜಾಸೀಟು ಆವರಣದಲ್ಲಿ ನೂರಾರು ಹೂಕುಂಡಗಳಲ್ಲಿ ವಿವಿಧ ಬಗೆಯ ಹೂವಿನ ಗಿಡಗಳಲ್ಲಿ ನೆಟ್ಟು ಬೆಳೆಸಲಾಗಿದ್ದು, ಎಲ್ಲಾ ಗಿಡಗಳಲ್ಲಿ ಹತ್ತು ಹಲವು ಬಗೆಯ ಪುಷ್ಪಗಳು ಅರಳಿ ನಿಂತು ನೋಡುಗರನ್ನು ತಮ್ಮತ್ತ ಸೆಳೆಯುತ್ತಿವೆ.

ವೈನ್ ಮೇಳ: ಇದರೊಂದಿಗೆ ಕರ್ನಾಟಕ ದ್ರಾಕ್ಷಿರಸ ಮಂಡಳಿ, ತೋಟಗಾರಿಕೆ ಇಲಾಖೆಯ ಸಹಯೋಗದೊಂದಿಗೆ ಗಾಂಧಿ ಮೈದಾನದಲ್ಲಿ 'ವೈನ್ ಉತ್ಸವ'ವನ್ನು ಆಯೋಜಿಸಲಾಗುತ್ತಿದ್ದು, ಇದಕ್ಕಾಗಿ ಸಿದ್ದತೆಗಳು ಭರದಿಂದ ನಡೆಯುತ್ತಿದೆ. ಗಾಂಧಿಮೈದಾನದಲ್ಲಿ ಆಯೋಜಿಸಿರುವ ವೈನ್ ಉತ್ಸವದಲ್ಲಿ ಸ್ಥಳೀಯ ಹೋಮ್ ಮೇಡ್ ವೈನ್–ಜ್ಯೂಸ್ ಹಾಗೂ ವೈನ್ ಬೋರ್ಡ್ ವತಿಯಿಂದ ಬ್ರಾಂಡೆಡ್ ವೈನ್‌ಗಳ ಪ್ರದರ್ಶನ ಹಾಗೂ ಮಾರಾಟ, ಪರೀಕ್ಷೆ ಮತ್ತು ರುಚಿ ವ್ಯವಸ್ಥೆಯನ್ನು ಸಾರ್ವಜನಿಕರಿಗೆ ಆಯೋಜಿಸಲಾಗಿದೆ. ನಗರದ ಗಾಂಧಿ ಮೈದಾನದಲ್ಲಿ ಈಗಾಗಲೇ 60 ಮಳಿಗೆಗಳನ್ನು ನಿರ್ಮಿಸಲಾಗಿದ್ದು, ನರ್ಸರಿ ಗಿಡಗಳ ಮಾರಾಟ ಮಳಿಗೆ, ಕೃಷಿ ಪರಿಕರಗಳ ಪ್ರದರ್ಶನ ಹಾಗೂ ಯಂತ್ರೋಪಕರಣಗಳ ಮಾರಾಟ ಮಳಿಗೆ ತೆರೆಯಲಾಗುತ್ತಿದೆ.

> **6** ರಾಜಾಸೀಟ್‌ನಲ್ಲಿ ಫೆ.3ರಿಂದ 6ರವರೆಗೆ ಆಕರ್ಷಕ ಫಲಪುಷ್ಪ ಪ್ರದರ್ಶನಕ್ಕೆ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ. ನಾಲ್ಕುನಾಡು ಅರಮನೆ ಕಲಾಕೃತಿ ಸೇರಿದಂತೆ ವಿವಿಧ ಕಲಾಕೃತಿಗಳು ಪುಷ್ಪಪ್ರಿಯರ ಮನಸೂರೆಗೊಳ್ಳಲಿದೆ. ಈ ಬಾರಿ ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಪ್ರತಿ ದಿನ 15 ಸಾವಿರಕ್ಕೂ ಅಧಿಕ ಮಂದಿ ಜನರು ಭೇಟಿ ನೀಡುವ ಸಾಧ್ಯತೆ ಇದೆ. ಗಾಂಧಿ ಮೈದಾನದಲ್ಲಿ ವೈನ್ ಉತ್ಸವವನ್ನು ಆಯೋಜಿಸಲಾಗಿದ್ದು, ಸ್ಥಳೀಯ ಹೋಮ್ ಮೇಡ್ ವೈನ್–ಜ್ಯೂಸ್ ಹಾಗೂ ವೈನ್ ಬೋರ್ಡ್ ವತಿಯಿಂದ ಬ್ರಾಂಡೆಡ್ ವೈನ್‌ಗಳ ಪ್ರದರ್ಶನ ಹಾಗೂ ಮಾರಾಟ ನಡೆಯಲಿದೆ. ಕೃಷಿ ಪರಿಕರಗಳ ಪ್ರದರ್ಶನ ಹಾಗೂ ಯಂತ್ರೋಪಕರಣಗಳ ಮಾರಾಟ ಮಳಿಗೆಗಳನ್ನು ತೆರೆಯಲಾಗುತ್ತಿದೆ.
>
> – ಸಿ.ಎಂ.ಪ್ರಮೋದ್, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ

ಸಿದ್ದರಾಮಯ್ಯ ಕಾರಿಗೆ ಮೊಟ್ಟೆ ಎಸೆದವರಿಗೆ ಗಡಿಪಾರು ಭೀತಿ

ಕಾರಣ ಕೇಳಿ ಕೊಡಗು ಎಸಿ ಕೋರ್ಟ್ ಶೋಕಾಸ್ ನೋಟಿಸ್

ಮಡಿಕೇರಿ, ಫೆ.1– ಕಳೆದ ಕೆಲವು ತಿಂಗಳ ಹಿಂದೆ ಕೊಡಗು ಜಿಲ್ಲೆಗೆ ಆಗಮಿಸಿದ್ದ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಕಾರಿಗೆ ಮೊಟ್ಟೆ ಎಸೆದ ಪ್ರಕರಣದಲ್ಲಿ ಆರೋಪಿಗಳಾಗಿರುವ ಬಿಜೆಪಿಯ ಇಬ್ಬರು ಮುಖಂಡರಿಗೆ ಗಡಿಪಾರು ಭೀತಿ ಎದುರಾಗಿದೆ. ಮೊಟ್ಟೆ ಎಸೆದ ಆರೋಪಿಗಳಿಗೆ ಶೋಕಾಸ್ ನೋಟಿಸ್ ಜಾರಿಗೊಳಿಸಿ ಗಡಿಪಾರು ಮಾಡದಿರಲು ಸೂಕ್ತ ಕಾರಣ ನೀಡುವಂತೆ ಕೇಳಲಾಗಿದೆ.

ಮಡಿಕೇರಿ ನಗರಸಭೆ ನಾಮನಿರ್ದೇಶಿತ ಸದಸ್ಯ ಕವನ್ ಕಾವೇರಪ್ಪ ಮತ್ತು ಹಿಂದೂ ಯುವ ವಾಹಿನಿ ಜಿಲ್ಲಾ ಸಂಚಾಲಕ ವಿನಯ್ ಈ ಇಬ್ಬರಿಗೆ ಗಡಿಪಾರು ಭೀತಿ ಎದುರಾಗಿದೆ. ಇಬ್ಬರನ್ನು ಯಾಕೆ ಗಡಿಪಾರು ಮಾಡಬಾರದು ಎಂದು ಕಾರಣ ನೀಡುವಂತೆ ಸೂಚಿಸಿ ಕೊಡಗು ಎಸಿ ಕೋರ್ಟ್ ನೋಟೀಸ್ ಜಾರಿ ಮಾಡಿದೆ ಎಂದು ಖಾಸಗಿ ಸುದ್ದಿವಾಹಿನಿ ವರದಿ ಮಾಡಿದೆ.

2022 ರ ಅಕ್ಟೋಬರ್ ತಿಂಗಳಲ್ಲಿ ಮಳೆ ಹಾನಿ ಸಂಬಂಧ ವೀಕ್ಷಣೆಗಾಗಿ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಕೊಡಗು ಜಿಲ್ಲೆಗೆ ಆಗಮಿಸಿದ್ದ ವೇಳೆ ಕೊಡಗು ಜಿಲ್ಲಾ ಕೇಂದ್ರ ಮಡಿಕೇರಿಯ ಜನರಲ್ ತಿಮ್ಮಯ್ಯ ವೃತ್ತದಲ್ಲಿ ಹಾಗೆಯೇ ಕುಶಾಲನಗರ ತಾಲೂಕಿನ ಗುಡ್ಡೆಹೊಸೂರಿನಲ್ಲಿ ಸಿದ್ದರಾಮಯ್ಯ ಅವರ ಕಾರಿನ ಮೇಲೆ ಮೊಟ್ಟೆ ಎಸೆಯಲಾಗಿತ್ತು. ಅಲ್ಲದೆ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ತೀವ್ರ ಗಲಾಟೆಯಾಗಿತ್ತು.

ಭದ್ರತೆ ಲೋಪದೋಷವೆಂದು ಕಾಂಗ್ರೆಸ್ ಪ್ರತಿಭಟನೆ: ವಿಪಕ್ಷ ನಾಯಕರಿಗೆ ಸೂಕ್ತ ಭದ್ರತೆ ನೀಡುವಲ್ಲಿ ಪೊಲೀಸರು ವಿಫಲವಾಗಿದ್ದಾರೆ ಎಂದು ಆರೋಪಿಸಿ ಕೊಡಗು ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಎದುರು ಕಾಂಗ್ರೆಸ್ ಕಾರ್ಯಕರ್ತರು ತೀವ್ರ ಹೋರಾಟ ನಡೆಸಿದ್ದರು. ಬಳಿಕ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿತ್ತು. ಸಿದ್ದರಾಮಯ್ಯ ಅವರ ಕಾರಿಗೆ ಮೊಟ್ಟೆ ಎಸೆದ ಪ್ರಕರಣದಲ್ಲಿ ಮಡಿಕೇರಿ ನಗರ ಸಭೆ ನಾಮನಿರ್ದೇಶಿತ ಸದಸ್ಯ ಕವನ್ ಕಾವೇರಪ್ಪ ಎ1 ಆರೋಪಿ ಆಗಿದ್ದರೆ, ಇದೇ ಪ್ರಕರಣದಲ್ಲಿ ಹಿಂದೂ ಯುವವಾಹಿನಿ ಜಿಲ್ಲಾ ಸಂಚಾಲಕ ವಿನಯ್ ಕೂಡ ಆರೋಪಿ ಆಗಿದ್ದರು. ಅಲ್ಲದೆ ಕವನ್ ಕಾವೇರಪ್ಪ ಹಿಂದೆಯೂ ಪ್ರಕರಣ ಒಂದರಲ್ಲಿ ಇದ್ದರು. ಆದರೆ ಆ ಪ್ರಕರಣ ಇತ್ತೀಚೆಗೆ ಖುಲಾಸೆಗೊಂಡಿತ್ತು.

ಗಡಿಪಾರು ಮಾಡದಿರಲು ಕಾರಣ ನೀಡಿ: ಇದೀಗ ಸಿದ್ದರಾಮಯ್ಯ ಅವರ ಕಾರಿಗೆ ಮೊಟ್ಟೆ ಹೊಡೆದ ಪ್ರಕರಣದಲ್ಲಿ ಗಡಿಪಾರು ಮಾಡದಿರಲು ಕಾರಣ ನೀಡುವಂತೆ ನೋಟೀಸ್ ನೀಡಿದೆ. ನೋಟೀಸ್ ಪಡೆದಿರುವ ಇಬ್ಬರು ನಾಳೆ (ಫೆ.2) ಕೊಡಗು ಎಸಿ ಕೋರ್ಟಿಗೆ ಹಾಜರಾಗಬೇಕಾಗಿದೆ ಎಂದು ವಾಹಿನಿ ವರದಿ ತಿಳಿಸಿದೆ.

ಕೇಸು ಖುಲಾಸೆ ಆಗಿದ್ದರೂ ನೋಟಿಸ್ ಜಾರಿ: ಈ ಕುರಿತು ಪ್ರತಿಕ್ರಿಯಿಸಿರುವ ಕವನ್ ಕಾರ್ಯಪ್ಪ ದೇಶದ ಕಾನೂನು ಎಲ್ಲರಿಗೂ ಗೊತ್ತಿದೆ. ಆದರೆ ಕೊಡಗಿನ ಪೊಲೀಸರು ಕಾನೂನು ಗೊತ್ತಿಲ್ಲದವರಂತೆ ವರ್ತಿಸುತ್ತಿದ್ದಾರೆ. ಯಾವುದೇ ಪ್ರಕರಣದಲ್ಲಿ ಭಾಗಿಯಾಗಿ ಶಿಕ್ಷೆಯಾಗಿದ್ದು, ಮತ್ತೆ ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿದ್ದರೆ ಗಡಿಪಾರು ಆದೇಶ ಮಾಡಬಹುದು. ಆದರೆ ನನ್ನ ಮೇಲೆ ಇದ್ದ ಪ್ರಕರಣ ಖುಲಾಸೆ ಆಗಿದೆ. ಇದೀಗ ಸಿದ್ದರಾಮಯ್ಯ ಅವರ ಕಾರಿಗೆ ಮೊಟ್ಟೆ ಒಡೆಯಲಾಗಿದೆ ಎಂದು ಯಾರೋ ದೂರು ಕೊಟ್ಟ ಕೂಡಲೇ ಅದರ ಆಧಾರದಲ್ಲಿ ನಮ್ಮ ಮೇಲೆ ಪ್ರಕರಣ ದಾಖಲಿಸಿ ಈಗ ಜಿಲ್ಲಾಡಳಿತ ಗಡಿಪಾರಿಗೆ ಮುಂದಾಗುತ್ತಿದೆ. ಪೊಲೀಸ್ ಇಲಾಖೆ ಅಧಿಕಾರಿಗಳು ಇದಕ್ಕೆ ಸರಿಯಾದ ಪ್ರತಿಫಲ ಅನುಭವಿಸಬೇಕಾಗುತ್ತದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಶಾಂತಿ ಸುವ್ಯವಸ್ಥೆ ಕಾಪಾಡುವುದಕ್ಕಾಗಿ ಕ್ರಮ: ಒಟ್ಟಿನಲ್ಲಿ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಬೇಕೆಂಬ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರು ಕೊಡಗಿಗೆ ಆಗಮಿಸಿದ್ದ ವೇಳೆ ನಡೆದ ಗಲಭೆ ಪ್ರಕರಣವನ್ನು ಆಧಾರವಾಗಿಟ್ಟುಕೊಂಡು ಗಡಿಪಾರಿಗೆ ಇಬ್ಬರ ಹೆಸರನ್ನು ಪೊಲೀಸ್ ಇಲಾಖೆ ಸೂಚಿಸಿದ್ದು, ಸದ್ಯ ಎಸಿ ಕೋರ್ಟ್ ಅಂಗಳದಲ್ಲಿ ಪ್ರಕರಣ ಇದ್ದು ಗುರುವಾರ ವಿಚಾರಣೆ ಬಳಿಕ ಎಸಿ ಕೋರ್ಟ್ ಯಾವ ನಿರ್ಧಾರ ತೆಗೆದುಕೊಳ್ಳುತ್ತದೆಯೋ ಕಾದು ನೋಡಬೇಕು.

ಕುವೈತ್‌ನಿಂದ ಗ್ರಾಮಕ್ಕೆ ಹಿಂತಿರುಗಿದ ಮಹಿಳೆ

ತನ್ನನ್ನು ರಕ್ಷಿಸಿದ ಜಿಲ್ಲಾಡಳಿತಕ್ಕೆ ಧನ್ಯವಾದ ಹೇಳಿದ ಪಾರ್ವತಿ



ಸಿದ್ದಾಪುರ, ಫೆ.1– ಉದ್ಯೋಗದ ಆಸೆಯಿಂದ ಕುವೈತ್‌ನಲ್ಲಿ ಸಂಕಷ್ಟಕ್ಕೆ ಸಿಲುಕಿ ಗೃಹಬಂಧನಕ್ಕೆ ಒಳಗಾಗಿದ್ದ ತನ್ನನ್ನು ಸುರಕ್ಷಿತವಾಗಿ ತವರಿಗೆ ಕರೆ ತಂದ ಜಿಲ್ಲಾಡಳಿತಕ್ಕೆ ತಾಯ್ನಾಡಿಗೆ ಹಿಂತಿರುಗಿದ ವಿರಾಜಪೇಟೆ ತಾಲೂಕು ಕರಡಿಗೋಡಿನ ಪಾರ್ವತಿ ಧನ್ಯವಾದ ತಿಳಿಸಿದ್ದಾರೆ.

ಕುವೈತ್‌ನಿಂದ ಚೆನ್ನೈಗೆ ವಿಮಾನದಲ್ಲಿ ಬಂದು ಅಲ್ಲಿಂದ ಕರಡಿಗೋಡು ಗ್ರಾಮಕ್ಕೆ ಮರಳಿದ ಪಾರ್ವತಿ ತಾಯಿ ಮಕ್ಕಳನ್ನು ಕಂಡು ಕಣ್ಣೀರಿಟ್ಟಿದ್ದಾರೆ. ಸ್ವಂತ ಸೂರಿಲ್ಲದೆ ಆರ್ಥಿಕ ಸಂಕಷ್ಟದಲ್ಲಿದ್ದ ಕಾರಣ ಕೇರಳಕ್ಕೆ ಮನೆ ಕೆಲಸಕ್ಕೆ ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಹೆಚ್ಚು ದುಡಿದರೆ ಸ್ವಂತ ಮನೆ ಕಟ್ಟಿಕೊಳ್ಳಬಹುದೆಂದು ನಂಬಿ ಏಜೆಂಟ್ ಮೂಲಕ ಕುವೈತಿಗೆ ತೆರಳಿದ್ದೆ. ಅಲ್ಲಿ ಸಾಕಷ್ಟು ಕಿರುಕುಳದೊಂದಿಗೆ ಹಲವು ಸಮಸ್ಯೆಗಳನ್ನು ಎದುರಿಸಬೇಕಾಗಿತ್ತು ಎಂದು ಅವರು ಅಲ್ಲಿ ತಮಗಾದ ನೋವನ್ನು ಹೇಳಿಕೊಂಡರು. ಕೊನೆಗೆ ಪಾಸ್‌ಪೋರ್ಟ್ ಸೇರಿದಂತೆ ಇತರ ದಾಖಲಾತಿಗಳನ್ನು ಕಿತ್ತುಕೊಂಡು ಕೋಣೆಯೊಂದರಲ್ಲಿ ಕೂಡಿ ಹಾಕಿದ್ದರು. ತಾಯಿಯೊಂದಿಗೆ ತನ್ನ ಸಂಕಷ್ಟಗಳನ್ನು ಹಂಚಿಕೊಂಡ ನಂತರ ಕುಟುಂಬದವರು ಜಿಲ್ಲಾಡಳಿತಕ್ಕೆ ಮನವಿ ಮಾಡಿದರು. ತಕ್ಷಣ ಸ್ಪಂದಿಸಿದ ಜಿಲ್ಲಾಡಳಿತ ರಾಯಭಾರ ಕಚೇರಿಯೊಂದಿಗೆ ಸಂಪರ್ಕಿಸಿ ನನ್ನನ್ನ ಮತ್ತೆ ತಾಯ್ನಾಡಿಗೆ ತಲುಪಿಸಿದ್ದಾರೆ ಎಂದು ಪಾರ್ವತಿ ಜಿಲ್ಲಾಡಳಿತಕ್ಕೆ ಧನ್ಯವಾದ ಹೇಳಿದ್ದಾರೆ. ಏಜೆಂಟ್‌ಗಳ ಆಮಿಷಕ್ಕೆ ಒಳಗಾಗಿ ಉದ್ಯೋಗದ ಆಸೆಯಿಂದ ಹೊರ ದೇಶಗಳಿಗೆ ಹೋಗಬಾರದು ಎಂದು ಇತರ ಮಹಿಳೆಯರಿಗೆ ಕಿವಿಮಾತು ಹೇಳಿದ್ದಾರೆ. ನಾವು ಇರುವಲ್ಲಿಯೇ ಕುಟುಂಬಗಳೊಂದಿಗೆ ಜೀವನ ನಡೆಸಲು ಸ್ಥಳೀಯ ಉದ್ಯೋಗವನ್ನು ಆರಿಸಿಕೊಂಡು ಬದುಕು ಸಾಗಿಸಬಹುದೆಂದು ಹೇಳಿದರು.

ಚಾ.ನಗರ ಬಳಿ ಮಂಡ್ಯ ಜಿಲ್ಲೆಯ ಟ್ರಾಕ್ಟರ್ ಚಾಲಕ ಆತ್ಮಹತ್ಯೆ

ಚಾಮರಾಜನಗರ, ಫೆ.1– ಮಂಡ್ಯ ಜಿಲ್ಲೆಯ ಟ್ರಾಕ್ಟರ್ ಚಾಲಕರೊಬ್ಬರು ತಾಲೂಕಿನ ನಾಗವಳ್ಳಿ–ಕಾಗಲವಾಡಿ ನಡುವೆ ಜಮೀನೊಂದರಲ್ಲಿ ಮರಕ್ಕೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಂಡ್ಯ ಜಿಲ್ಲೆ ಕೆರೆಗೋಡು ಹೋಬಳಿಯ ಗಂಟೆಗೌಡನಹಳ್ಳಿಯ ನಿವಾಸಿ ಮಹದೇವನಾಯಕ (50) ಆತ್ಮಹತ್ಯೆ ಮಾಡಿಕೊಂಡವರು. ವೃತ್ತಿಯಲ್ಲಿ ಟ್ರಾಕ್ಟರ್ ಚಾಲಕರಾಗಿದ್ದ ಅವರು ಅದರ ಖರೀದಿಗೆ ಬ್ಯಾಂಕ್‌ನಲ್ಲಿ ಸಾಲ ಮಾಡಿದ್ದರು. ಅಲ್ಲದೇ ಕೈಸಾಲವನ್ನೂ ಮಾಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಜ.29ರಂದು ತಾಲೂಕಿನ ನಾಗವಳ್ಳಿಯಲ್ಲಿರುವ ಅಕ್ಕನ ಮನೆಗೆ ಅವರು ಬಂದಿದ್ದರು. ಬುಧವಾರ ಬೆಳಿಗ್ಗೆ ಊರಿಗೆ ಹೋಗುವುದಾಗಿ ಹೇಳಿ ಮನೆ ಬಿಟ್ಟಿದ್ದರು. ಆ ಬಳಿಕ ನಾಗವಳ್ಳಿ–ಕಾಗಲವಾಡಿ ದಾರಿ ಮಧ್ಯೆ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಚಾಮರಾಜನಗರ ಪೂರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕೆ ಇನ್‌ಸ್ಪೆಕ್ಟರ್ ಆರ್.ಶ್ರೀಕಾಂತ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು.

ಚಾ.ನಗರದಲ್ಲಿ ಮನೆ ಬಾಗಿಲು ಮುರಿದು ಚಿನ್ನಾಭರಣ ಕಳವು

30 ಜೊತೆ ಓಲೆ, ಮೂರು ನೆಕ್ಲೆಸ್, ಮುತ್ತಿನ ಹಾರ, ಚಿನ್ನದ ಬಳೆ, ಐದು ಉಂಗುರ, ಕೆಜಿಗಟ್ಟಲೆ ಬೆಳ್ಳಿ ಕದ್ದೊಯ್ದಿರುವ ಕಳ್ಳರು



ಚಾಮರಾಜನಗರ, ಫೆ.1– ಬೀಗ ಹಾಕಿದ ಮನೆ ಬಾಗಿಲನ್ನು ಮುರಿದು ಮನೆಯಲ್ಲಿದ್ದ ಅಪಾರ ಪ್ರಮಾಣದ ಚಿನ್ನಾಭರಣವನ್ನು ಕಳವು ಮಾಡಿರುವ ಘಟನೆ ಚಾಮರಾಜನಗರದ ಶ್ರೀಗುರು ರಾಘವೇಂದ್ರ ಚಿತ್ರಮಂದಿರದ ಎದುರಿನ ಭಗೀರಥ ನಗರದಲ್ಲಿ ಸಂಭವಿಸಿದೆ.

ಭಗೀರಥ ಬಡಾವಣೆಯ ಶೋಭಾ ಹಾಗೂ ಶಿವಣ್ಣ ದಂಪತಿ ಮನೆಯಲ್ಲಿ ಕಳ್ಳತನವಾಗಿದೆ. ಕೊಳ್ಳೇಗಾಲ, ಗುಂಡ್ಲುಪೇಟೆಯಲ್ಲಿ ನಡೆಯುತ್ತಿದ್ದ ಮನೆಗಳ್ಳತನ ಈಗ ಚಾಮರಾಜನಗರಕ್ಕೂ ಕಾಲಿಟ್ಟಿರುವುದು ನಗರದ ಜನತೆಯಲ್ಲಿ ಆತಂಕ ಸೃಷ್ಟಿಸಿದೆ.

ಕಳೆದ ಮೂರು ದಿನಗಳ ಹಿಂದಷ್ಟೇ ನಗರದ ಸಿದ್ದಾರ್ಥ ಲೇಔಟ್‌ನಲ್ಲಿ ಮನೆ ಕಳ್ಳತನ ನಡೆದಿತ್ತು. ಇದೀಗ ಕೇವಲ ಮೂರು ದಿನದ ಅಂತರದಲ್ಲಿ ಎರಡು ಮನೆಗಳಲ್ಲಿ ಕಳ್ಳತನ ನಡೆದಿರುವುದು ಪೊಲೀಸರಿಗೆ ತಲೆಬಿಸಿ ತಂದಿದೆ. ಶೋಭಾ ಅವರ ಪತಿ ಶಿವಣ್ಣ ಮೃತಪಟ್ಟಿದ್ದು, ಇವರ ಪುತ್ರಿ ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಮನೆಯಲ್ಲಿ ಶೋಭಾ ಅವರು ಒಬ್ಬರೇ ವಾಸವಿದ್ದು, ಸೋಮವಾರ ತಮ್ಮ ತವರು ಮನೆ ಆಲೂರಿಗೆ ತೆರಳಿದ್ದರು. ಬುಧವಾರ ಬೆಳಗ್ಗೆ ಶೋಭಾ ಅವರ ಸಂಬಂಧಿ ಮಲ್ಲಿಕಾರ್ಜುನ ಎಂಬುವವರು ಮನೆ ಮುಂದೆ ತೆರಳುತ್ತಿದ್ದಾಗ ಮನೆಯ ಬಾಗಿಲು ತೆರೆದಿತ್ತು ಮನೆ ಮುಂದಿನ ಗೇಟ್‌ಗೆ ಬೀಗ ಹಾಕಲಾಗಿತ್ತು. ಇದನ್ನು ಗಮನಿಸಿದ ಅವರು, ಶೋಭ ಅವರ ಮೊಬೈಲ್‌ಗೆ ಕರೆ ಮಾಡಿದ್ದಾರೆ. ಈ ವೇಳೆ ಶೋಭಾ ಅವರು ಆಲೂರಿನಲ್ಲಿ ಇರುವುದಾಗಿ ತಿಳಿಸಿದ್ದಾರೆ. ಮನೆ ಬಾಗಿಲು ತೆರೆದಿರುವ ವಿಷಯ ತಿಳಿದ ಕೂಡಲೇ ಆಗಮಿಸಿದ ಶೋಭ, ಮನೆ ಪರಿಶೀಲಿಸಿದಾಗ ಬೀರುವಿನಲ್ಲಿದ್ದ ಚಿನ್ನಾಭರಣ ಕಳ್ಳತನವಾಗಿರುವುದು ಗೊತ್ತಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಪಟ್ಟಣ ಪೊಲೀಸ್ ಠಾಣೆಯ ಪೊಲೀಸರು ಭೇಟಿ, ನೀಡಿ ಪರಿಶೀಲಿಸಿದರು. ಬೆರಳಚ್ಚು ತಜ್ಞರು ಆಗಮಿಸಿ ಮಾಹಿತಿ ಕಲೆ ಹಾಕಿದರು. ಶ್ವಾನದಳವನ್ನು ಕರೆಸಲಾಗಿತ್ತು. ಈ ವೇಳೆ ಸುದ್ದಿಗಾರರೊಂದಿಗೆ ಮನೆಯ ಮಾಲೀಕರಾದ ಶೋಭಾ ಮಾತನಾಡಿ, ನನ್ನ ಪತಿ ನಿವೇಶನ ಮಾರಾಟ ಮಾಡಿ ಮಗಳ ಮದುವೆಗೆಂದು ಚಿನ್ನಾಭರಣ ಮಾಡಿಸಿಟ್ಟಿದ್ದರು. ಕಳ್ಳರು ಕಳ್ಳತನ ಮಾಡಿದ್ದಾರೆ ಎಂದರು.

> **6** ಮನೆಗೆ ಬೀಗ ಹಾಕಿ ಹೋಗುವ ಸಂದರ್ಭದಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ಹಾಗೂ ಅಕ್ಕ–ಪಕ್ಕದ ಮನೆಯವರಿಗೆ ತಿಳಿಸಬೇಕು. ಮನೆಯಲ್ಲಿ ಯಾರೂ ಇಲ್ಲ ಎಂಬುದನ್ನು ತೋರ್ಪಡಿಸಬಾರದು. ಇದನ್ನು ನಾಗರಿಕರು ಗಂಭೀರವಾಗಿ ಪರಿಗಣಿಸಬೇಕು. –ಉದೇಶ, ಎಎಸ್‌ಪಿ.

30 ಜೊತೆ ಓಲೆ, ಮೂರು ನೆಕ್ಲೆಸ್, ಒಂದು ಮುತ್ತಿನಹಾರ, ಎರಡು ಚಿನ್ನದ ಬಳೆ, ಐದು ಉಂಗುರ, ಕೆಜಿ ಗಟ್ಟಲೆ ಬೆಳ್ಳಿ ಸೇರಿ ಅಂದಾಜು 15 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ವಿಷಯ ತಿಳಿದು ಸ್ಥಳಕ್ಕೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಉದೇಶ, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ ಪಟ್ಟಣ ಠಾಣೆಯ ಇನ್‌ಸ್ಪೆಕ್ಟರ್ ತಿಮ್ಮರಾಜು, ಸಬ್ ಇನ್‌ಸ್ಪೆಕ್ಟರ್ ಉಮಾ ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಎಎಸ್‌ಪಿ ಉದೇಶ ಮಾತನಾಡಿ, ಬೀರುವಿನಲ್ಲಿಟ್ಟಿದ್ದ ಚಿನ್ನವನ್ನು ಕಳವು ಮಾಡಲಾಗಿದೆ. ಬೇರೆ ಕಡೆ ಇಟ್ಟಿದ್ದ ಚಿನ್ನವನ್ನು ಕಳವು ಮಾಡಿಲ್ಲ. ತನಿಖೆ ಪ್ರಗತಿಯಲ್ಲಿದೆ ಎಂದರು.

ಗಣಿಗಾರಿಕೆ ಸ್ಥಳದಲ್ಲಿ ನಿರ್ಲಕ್ಷ್ಯ ಸಹಿಸುವುದಿಲ್ಲ

ಗಣಿ ಸಂರಕ್ಷಣಾ ಕಾರ್ಯಾಗಾರದಲ್ಲಿ ಜಿಲ್ಲಾಧಿಕಾರಿಗೆ ಎಚ್ಚರಿಕೆ

ಚಾಮರಾಜನಗರ, ಫೆ.1– ಗಣಿ ಸುರಕ್ಷತಾ ನಿರ್ದೇಶನಾಲಯ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ವತಿಯಿಂದ ಗಣಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರ ಸುರಕ್ಷತೆ ಹಾಗೂ ಇನ್ನಿತರ ಕ್ರಮಗಳ ಪಾಲನೆ ಸಂಬಂಧ ಕಾರ್ಯಗಾರ ಹಾಗೂ ಸಂವಾದ ಇಂದು ನಗರದಲ್ಲಿ ನಡೆಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಗಾರ ಹಾಗೂ ಸಂವಾದಕ್ಕೆ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ಗಣಿಗಾರಿಕೆ ನಡೆಸುವವರು ಕಾನೂನಾತ್ಮಕವಾಗಿ ಎಲ್ಲಾ ಸುರಕ್ಷಾ ಕ್ರಮಗಳನ್ನು ನಿರ್ವಹಿಸಬೇಕು. ಗಣಿಗಳಲ್ಲಿ ಕಾರ್ಮಿಕರ ಸುರಕ್ಷತೆಗೆ ಮೊದಲ ಆದ್ಯತೆ ಇರಬೇಕು. ಗಣಿಗಾರಿಕೆ ಸ್ಥಳಗಳಲ್ಲಿ ಯಾವುದೇ ಅನಾಹುತಗಳಿಗೆ ಅವಕಾಶವಾಗದಂತೆ ಸುರಕ್ಷಾ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಗಣಿಗಾರಿಕೆ ನಡೆಸುವವರು ಗಣಿಗಾರಿಕೆ ಸ್ಥಳಗಳಲ್ಲಿ ಸುರಕ್ಷತಾ ವ್ಯವಸ್ಥಾ ಕ್ರಮಗಳಿಗೆ ಎಲ್ಲಾ ಅವಕಾಶ ಮಾಡಿಕೊಳ್ಳಬೇಕು. ಸುರಕ್ಷತೆ ಹಿತ ದೃಷ್ಟಿಯಿಂದ ಯಾವುದೇ ನಿರ್ಲಕ್ಷ್ಯ ವಹಿಸುವುದನ್ನು ಸಹಿಸುವುದಿಲ್ಲ. ನಿಯಮಾನುಸಾರ ಸುರಕ್ಷತಾ ಕ್ರಮಗಳಿಗೆ ಪೂರಕವಾಗಿರುವಂತೆ ಎಲ್ಲವನ್ನೂ ಸರಿಪಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ತಿಳಿಸಿದರು. ಗಣಿ ಸುರಕ್ಷತಾ ನಿರ್ದೇಶನಾಲಯದ ನಿರ್ದೇಶಕರಾದ ಮುರಳೀಧರ ಬಿದ್ರಿ ಅವರು ಮಾತನಾಡಿ ಗಣಿ ನಡೆಸುವ ಸ್ಥಳಗಳಲ್ಲಿ ತಾಂತ್ರಿಕವಾಗಿ ಯಾವುದೇ ಕ್ರಮ ಅನುಸರಿಸಬೇಕಾದರೂ ಪೂರ್ವಾನುಮತಿ ಪಡೆದುಕೊಳ್ಳಬೇಕು. ಕಾರ್ಮಿಕರ ಸುರಕ್ಷತೆ ಬಗ್ಗೆ ಪ್ರತಿಯೊಂದು ಹಂತದಲ್ಲಿಯೂ ಪೂರಕವಾಗಿರುವ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಬೇಕು. ತಜ್ಞರನ್ನು ನೇಮಿಸಿಕೊಳ್ಳಬೇಕು. ಯಾವುದೇ ಅವಘಡಗಳಿಗೆ ಆಸ್ಪದವಾಗದಂತೆ ವಹಿಸಬೇಕಿರುವ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು ಎಂದರು.

ಜಿಲ್ಲೆಯ ಗಣಿ ಗುತ್ತಿಗೆ, ಉದ್ಯಮದಾರರಿಗೆ ವಿವರವಾಗಿ ಅನುಸರಿಸಬೇಕಿರುವ ಸುರಕ್ಷತಾ ಕ್ರಮಗಳ ಬಗ್ಗೆ ವೀಡಿಯೋ ಹಾಗೂ ಪವರ್ ಪಾಯಿಂಟ್ ಮೂಲಕ ಕಾರ್ಯಗಾರದಲ್ಲಿ ತಿಳಿಸಿಕೊಡಲಾಯಿತು. ಗಣಿ ಸುರಕ್ಷತಾ ನಿರ್ದೇಶನಾಲಯದ ಉಪನಿರ್ದೇಶಕರಾದ ಸಾಕೇತ್ ಭಾರತಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪನಿರ್ದೇಶಕರಾದ ರಶ್ಮಿ, ವಿವಿಧ ಇಲಾಖೆಗಳ ಅಧಿಕಾರಿಗಳು ಭಾಗವಹಿಸಿದ್ದರು.

ಇಂದು, ನಾಳೆ ಕೆರೆಹಳ್ಳಿಯಲ್ಲಿ ದೇವಸ್ಥಾನ ಉದ್ಘಾಟನೆ, ಧಾರ್ಮಿಕ ಸಭೆ

ಚಾಮರಾಜನಗರ, ಫೆ.1– ತಾಲೂಕಿನ ಕೆರೆಹಳ್ಳಿ ಗ್ರಾಮದಲ್ಲಿ ಫೆ.2 ಮತ್ತು 3ರಂದು ಶ್ರೀಶಂಕರೇಶ್ವರಸ್ವಾಮಿ ದೇವಸ್ಥಾನದ ಪ್ರತಿಷ್ಠಾಪನೆ, ಪರಿವಾರ ದೇವತೆಗಳ ಪ್ರತಿಷ್ಠಾಪನೆ, ಕಳಸಾ ರೋಹಣ, ಅಷ್ಟ ಬಂಧನ, ಮಹಾ ಕುಂಭಾಭಿಷೇಕ ಹಾಗೂ ನೂತನ ದೇವಾಲಯದ ಉದ್ಘಾಟನೆ ಹಾಗೂ ಧಾರ್ಮಿಕ ಸಭೆ ನಡೆಯಲಿದೆ.

ಫೆ. 2ರಂದು ಬೆಳಗ್ಗೆ 8.30ಕ್ಕೆ ಗೋ ಪೂಜೆ, ವೀರಗಾಸೆ, ನೂತನ ವಿಗ್ರಹ, ಕಳಸ ಮಂಗಳವಾದ್ಯದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಆಲದ ಪ್ರಮೇಯ ಪೂಜೆ ನಡೆಯಲಿದೆ. ಫೆ. 3ರಂದು ಬೆಳಗ್ಗೆ 11ಗಂಟೆಗೆ ಧಾರ್ಮಿಕ ಸಭೆ ನಡೆಯಲಿದೆ. ದೇವನೂರು ಶ್ರೀಮಹಾಂತ ಸ್ವಾಮೀಜಿ, ದಿವ್ಯ ಸಾನಿಧ್ಯ ವಹಿಸುವರು. ಪಡಗೂರು ಮಠದ ಶ್ರೀಶಿವಲಿಂಗೇಶ್ವರ ಸ್ವಾಮೀಜಿ, ಸೋಮಹಳ್ಳಿ ಶ್ರೀ ಸಿದ್ದಮಲ್ಲಸ್ವಾಮೀಜಿ, ಮಾದಪಟ್ಟಣದ ಶ್ರೀ ಸದಾಶಿವಸ್ವಾಮೀಜಿ, ಹರವೆಯ ಸರ್ಪಭೂಷಣ ಸ್ವಾಮೀಜಿ, ಮರಿಯಾಲದ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ ಸೇರಿದಂತೆ ಇತರ ಶ್ರೀಗಳು ಪಾಲ್ಗೊಂಡಿದ್ದರು.

ವಿಶೇಷ ಆಹ್ವಾನಿತರಾಗಿ ಶಾಸಕ ಸಿ.ಎಸ್. ನಿರಂಜನಕುಮಾರ್, ಕಾಂಗ್ರೆಸ್‌ನ ಎಚ್.ಎಸ್. ಗಣೇಶ್‌ಪ್ರಸಾದ್ ಪಾಲ್ಗೊಳ್ಳಲಿದ್ದಾರೆ. ಮುಖ್ಯಭಾಷಣಕಾರರಾಗಿ ಸಾಹಿತಿ ಎಚ್.ಎಂ. ಪೃಥ್ವಿರಾಜ್ ಭಾಗವಹಿಸಲಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದರು.

ನಿರಾಶಾದಾಯಕ ಬಜೆಟ್



ಚಾಮರಾಜನಗರ, ಫೆ.1– ಹಣಕಾಸು ಸಚಿವೆ ನಿರ್ಮಲ ಸೀತಾರಾಮ್ ಅವರು ಬುಧವಾರ ಮಂಡಿಸಿದ ಬಜೆಟ್ ದೂರದೃಷ್ಟಿ ಇಲ್ಲದ ಬಜೆಟ್. ಇದೊಂದು ನಿರಾಶದಾಯಕ ಬಜೆಟ್ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ತಿಳಿಸಿದರು. ಕೇಂದ್ರ ಬಜೆಟ್‌ಗೆ ಪ್ರತಿಕ್ರಿಯೆಸಿರುವ ಅವರು, ಇದೊಂದು ನಿರಾಶದಾಯಕ ಬಜೆಟ್. ಬಜೆಟ್‌ನಲ್ಲಿ ಉದ್ಯೋಗ ಸೃಷ್ಟಿಸುವ ಯೋಜನೆಯನ್ನು ಪ್ರಕಟಿಸಿಲ್ಲ. ಕೃಷಿಗೆ ಹೆಚ್ಚಿನ ಒತ್ತು ನೀಡಿಲ್ಲ. ಕರ್ನಾಟಕದ ಮೇಕೆದಾಟು ಯೋಜನೆಗೆ ಅನುದಾನ ಒದಗಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೋವಿಡ್‌ಗೆ ಬಹಳಷ್ಟು ಮಂದಿ ಸಾವನ್ನಪ್ಪಿದ್ದಾರೆ. ಅಂತಹ ಕುಟುಂಬಗಳಿಗೆ ಪರಿಹಾರ ಒದಗಿಸಲು ಬಜೆಟ್‌ನಲ್ಲಿ ಕ್ರಮ ಕೈಗೊಂಡಿಲ್ಲ ಎಂದು ಧ್ರುವನಾರಾಯಣ್ ತಿಳಿಸಿದರು.

ಯಳಂದೂರಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ಶಾಲಾ ಕೊಠಡಿ ಕಾಮಗಾರಿ



ಯಳಂದೂರು ತಾಲೂಕಿನ ಗುಂಬಳ್ಳಿ ಗ್ರಾಮದಲ್ಲಿ ನಡೆದ ಕಲಿಕಾ ಹಬ್ಬ ಹಾಗೂ ನೂತನ ಶಾಲಾ ಕೊಠಡಿಗಳ ಉದ್ಘಾಟನಾ ಸಮಾರಂಭದಲ್ಲಿ ಶಾಸಕ ಎನ್. ಮಹೇಶ್ ಮಾತನಾಡಿದರು.

ಯಳಂದೂರು, ಫೆ.1– ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವೇಕಾ ಯೋಜನೆಯೂ ಸೇರಿದಂತೆ ಶಾಲಾ ಕೊಠಡಿಗಳಿಗೆ 10 ಕೋಟಿ ರೂ. ವಿನಿಯೋಗಿಸಲಾಗಿದ್ದು ಇದೊಂದು ದಾಖಲೆಯಾಗಿದೆ ಎಂದು ಶಾಸಕ ಎನ್. ಮಹೇಶ್ ತಿಳಿಸಿದರು.

ತಾಲೂಕಿನ ಗುಂಬಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಮಂಗಳವಾರ ನಡೆದ ಕಲಿಕಾಹಬ್ಬ ಹಾಗೂ ನೂತನ ಶಾಲಾ ಕೊಠಡಿಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಾನು ಶಿಕ್ಷಣ ಸಚಿವನಾಗಿದ್ದ ಸಮಯದಲ್ಲಿ ಕ್ಷೇತ್ರಕ್ಕೆ ವಿಶೇಷವಾಗಿ 8 ಕೋಟಿ ರೂ. ಅನುದಾನವನ್ನು ನೀಡಿದ್ದೆ. ಈಗ ನೂತನವಾಗಿ ವಿವೇಕಾ ಯೋಜನೆಯಡಿಯಲ್ಲಿ 100 ಶಾಲಾ ಕೊಠಡಿಗಳ ನಿರ್ಮಾಣವಾಗುತ್ತಿದ್ದು ಇದರಲ್ಲಿ 35 ಕಾಮಗಾರಿಗಳು ಪ್ರಗತಿಯಲ್ಲಿದೆ ಇದೊಂದು ಸಾರ್ಥಕ ಸೇವೆ ಮಾಡಿದ ಹೆಮ್ಮೆ ನನಗಿದೆ ಎಂದರು.

ಎನ್‌ಇಪಿ ಶಿಕ್ಷಣ ನೀತಿ ಜಾರಿಗೆ ಬಂದಿದ್ದು ಹೊಸ ಶಿಕ್ಷಣ ನೀತಿಯಿಂದ ಮಕ್ಕಳು ತಮ್ಮ ಸೃಜನಶೀಲತೆ ಬೆಳೆಸಿಕೊಳ್ಳಲು ಅನುಕೂಲವಾಗಿದೆ. ಕಲಿಕಾ ಹಬ್ಬ ವಿಭಿನ್ನ ಕಾರ್ಯಕ್ರಮವಾಗಿದೆ. ರಾಜ್ಯದ 35 ಜಿಲ್ಲೆಗಳಲ್ಲಿ 4103 ಕ್ಲಸ್ಟರ್‌ಗಳ 45 ಸಾವಿರ ಶಾಲೆಗಳಲ್ಲಿ 1 ಲಕ್ಷ ಶಿಕ್ಷಕರು ಮತ್ತು 9 ಲಕ್ಷ ಮಕ್ಕಳು ಈ ಹಬ್ಬದಲ್ಲಿ ಭಾಗವಹಿಸಿರುವುದು ಇದೆ ವಿಶೇಷತೆಯಾಗಿದೆ. ವಿದ್ಯಾರ್ಥಿಗಳೇ ಶಿಕ್ಷಕರನ್ನು ಕಲಿಕೆಗೆ ಹಚ್ಚುವುದು ಹೊಸ ಶಿಕ್ಷಣ ನೀತಿಯ ಭಾಗವಾಗಿದೆ. ಮಗುವಿನ ಅಂತರಾಳದ ಚೈತನ್ಯವನ್ನು ಹೊರತೆಗೆಯುವುದೆ ನಿಜವಾದ ಶಿಕ್ಷಣವಾಗಿದ್ದು ಈ ನಿಟ್ಟಿನಲ್ಲಿ ಶಿಕ್ಷಕರು ಮಕ್ಕಳಿಗೆ ಮೌಲ್ಯಯುತ ಶಿಕ್ಷಣವನ್ನು ನೀಡಬೇಕು ಎಂದು ಸಲಹೆ ನೀಡಿದರು.

ಇದಕ್ಕೂ ಮುಂಚೆ ನೂತನವಾಗಿ ನಿರ್ಮಿತಿ ಕೇಂದ್ರ ಹಾಗೂ ಪಂಚಾಯತ್ ರಾಜ್ ಇಲಾಖೆಯಿಂದ ನಿರ್ಮಾಣಗೊಂಡಿರುವ 2 ಶಾಲಾಕೊಠಡಿಗಳನ್ನು ಉದ್ಘಾಟಿಸಲಾಯಿತು. ಶಾಲಾ ಮಕ್ಕಳು ವಿವಿಧ ವೇಷಭೂಷಣ ಗಳನ್ನು ತೊಟ್ಟು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಇದರೊಂದಿಗೆ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವೂ ನಡೆಯಿತು. ಇಲ್ಲಿನ ಮಕ್ಕಳು ಸಂಜೆ ಉರಿಲಿಂಗಪೆದ್ದಿ ನಾಟಕವನ್ನು ಪ್ರದರ್ಶಿಸಿ ಗಮನ ಸೆಳೆದರು. ಗ್ರಾಪಂ ಅಧ್ಯಕ್ಷೆ ಮಮತಾ, ಉಪಾಧ್ಯಕ್ಷೆ ನಾಗುರಾಜಪ್ಪ ಸದಸ್ಯರಾದ ಚಂದ್ರಶೇಖರ್, ಮಂಜುಳಾ, ರಾಜೇಂದ್ರ, ಶ್ರೀನಿವಾಸ್, ನಂಜನಾಯಕ, ಶೋಭಾ, ಶಕುಂತಲಾ, ರಾಚಶೆಟ್ಟಿ, ಭಾಗ್ಯ, ಶಾಂತಮ್ಮ, ಮೀನಾ ಪುಟ್ಟಮಾಧವಿ ಜೆಇ ನಂದೀಶ್ ಡಿವೈಪಿಸಿ ಮಂಜುನಾಥ್, ಬಿಇಒ ಕೆ. ಕಾಂತರಾಜು, ಟಿಪಿಒ ಲಿಂಗರಾಜು ಬಿಆರ್‌ಸಿ ನಾಗೇಂದ್ರ, ಎಸ್‌ಡಿಎಂಸಿ ಅಧ್ಯಕ್ಷ ಕೃಷ್ಣ, ಮುಖ್ಯ ಶಿಕ್ಷಕ ವೀರಭದ್ರಸ್ವಾಮಿ, ಸಿಆರ್‌ಪಿ ರೇಚಣ್ಣ, ಶಿಕ್ಷಕರಾದ ಮಧುಕರ್ ಮಳವಳ್ಳಿ, ಕುಮಾರಸ್ವಾಮಿ, ಕಿರಣ್, ಮಹಾದೇವಸ್ವಾಮಿ ಪಿಎಸ್‌ಐ ಚಂದ್ರ ಹಾಸನಾಯಕ್ ಸೇರಿದಂತೆ ಅನೇಕರು ಹಾಜರಿದ್ದರು.

ಹರದನಹಳ್ಳಿ ಜ.ಸುರೇಶ್ ನಾಗ್‌ಗೆ ಸದ್ಭಾವನಾ ಪ್ರಶಸ್ತಿ

ಚಾಮರಾಜನಗರ, ಫೆ.1– ಜಾನಪದ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಗಣನೀಯ ಸೇವೆಯನ್ನು ಪರಿಗಣಿಸಿ ಹರದನಹಳ್ಳಿ ಜ.ಸುರೇಶ್‌ನಾಗ್ ಅವರಿಗೆ ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟ ವಿಜಯಪುರ ಜಿಲ್ಲಾ ಹಾಗೂ ತಾಲೂಕು ಘಟಕ ರಾಜ್ಯಮಟ್ಟದ ಸದ್ಭಾವನಾ ಪ್ರಶಸ್ತಿ ನೀಡಿ, ಗೌರವಿಸಿದೆ.

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ವಿಬಿಸಿ ಪ್ರೌಢಶಾಲಾ ಆವರಣದಲ್ಲಿ ನಡೆದ ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟ, ಬೆಂಗಳೂರು, ವಿಜಯಪುರ ಜಿಲ್ಲಾ ಹಾಗೂ ತಾಲೂಕು ಘಟಕ ಮುದ್ದೇಬಿಹಾಳ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವಿಜಯಪುರ, ಧರ್ಮಯುದ್ಧ ದಿನ ಪತ್ರಿಕಾ ಬಳಗ ಹಾಗೂ ಪ್ರಗತಿಪರ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಸ್ವಾಮಿ ವಿವೇಕಾನಂದ ಜಯಂತಿ ಅಂಗವಾಗಿ ನಡೆದ ರಾಜ್ಯಮಟ್ಟದ ಸದ್ಭಾವನಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾಜಿ ಸಚಿವರು ಹಾಲಿ ಶಾಸಕರಾದ ನಾಡಗೌಡ ಪಾಟೀಲ್ ಅಪ್ಪಾಜಿಯವರು ಸುರೇಶ್‌ನಾಗ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದ್ದಾರೆ. ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಯುವ ಒಕ್ಕೂಟದ ಅಧ್ಯಕ್ಷ ಜಾವಿದ್‌ಜಾಮಾದರ್, ರಾಜ್ಯ ಯುವ ಒಕ್ಕೂಟದ ಅಧ್ಯಕ್ಷ ಡಾ.ಬಾಲಾಜಿ, ಸ್ಥಳೀಯ ಮುಖಂಡರು ಹಾಜರಿದ್ದರು.

ಮೈಸೂರು ಮಿತ್ರ

ಚುನಾವಣೆ ಫಲ: ಬಜೆಟ್‌ನಲ್ಲಿ ಕರ್ನಾಟಕದ ಹೆಸರು ಪ್ರಸ್ತಾಪ!

ನವದೆಹಲಿ: ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಪ್ರಸ್ತಾಪವಾದ ಏಕೈಕ ರಾಜ್ಯದ ಹೆಸರು ಕರ್ನಾಟಕ. ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ಇನ್ನು ಕೆಲವೇ ತಿಂಗಳಿದ್ದು, ಈ ಚುನಾವಣೆಯನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಎಷ್ಟರ ಮಟ್ಟಿಗೆ ಗಂಭೀರವಾಗಿ ಪರಿಗಣಿಸಿದೆ ಎಂಬುದು ಬಜೆಟ್‌ನಲ್ಲಿ ಬಿಂಬಿತವಾಗಿದೆ. ಬಜೆಟ್ ಮಂಡನೆ ವೇಳೆ ನಿರ್ಮಲಾ ಸೀತಾರಾಮನ್ ಅವರು, ಬರಗಾಲ ಪೀಡಿತ ಮಧ್ಯ ಕರ್ನಾಟಕ ಪ್ರದೇಶದ ಭದ್ರಾ ಮೇಲ್ದಂಡೆ ಯೋಜನೆಯಲ್ಲಿ ಸೂಕ್ಷ್ಮ ನೀರಾವರಿ ಹಾಗೂ ಕುಡಿಯುವ ನೀರಿಗೆ ಕೆರೆ ತುಂಬಿಸುವ ಸಲುವಾಗಿ 5,300 ಕೋಟಿ ರೂ. ಕೇಂದ್ರ ಸಹಾಯಾನುದಾನ ನೀಡುತ್ತಿರುವುದಾಗಿ ಘೋಷಣೆ ಮಾಡಿದರು. ಒಂದು ರಾಜ್ಯದ ಹೆಸರನ್ನು ಉಲ್ಲೇಖಿಸಿದ್ದಷ್ಟೆ ಅಲ್ಲದೆ, ಒಂದು ರಾಜ್ಯಕ್ಕೆ ನಿರ್ದಿಷ್ಟವಾಗಿ ಘೋಷಣೆ ಮಾಡಿದ ಏಕೈಕ ಯೋಜನೆ ಇದಾಗಿದೆ. ಈ ನಡುವೆ ಕೇಂದ್ರ ಸರ್ಕಾರ ಭದ್ರಾ ಮೇಲ್ದಂಡೆ ಯೋಜನೆಗೆ ಅನುದಾನ ಘೋಷಿಸಿರುವುದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ. ನೀರಾವರಿ ಸಚಿವ ಗೋವಿಂದ ಕಾರಜೋಳ ಸೇರಿದಂತೆ ಹಲವು ನಾಯಕರು ಸಂತಸ ವ್ಯಕ್ತಪಡಿಸಿದ್ದಾರೆ.

ಒಂದನೇ ಪುಟದಿಂದ

7 ಲಕ್ಷಕ್ಕೆ ಏರಿಕೆ

ದರ 42% ವಿಶ್ವದಲ್ಲೇ ಅತ್ಯಧಿಕವಾಗಿದೆ. ಅತೀ ಹೆಚ್ಚು ಆದಾಯ ಗಳಿಸುವವರಿಗೆ ಸರ್ಚಾರ್ಜ್ ಅನ್ನು 37% ರಿಂದ 25% ಕ್ಕೆ ಇಳಿಸಲಾಗಿದೆ. ಗರಿಷ್ಠ ತೆರಿಗೆ ಪ್ರಮಾಣವನ್ನು ಶೇಕಡಾ 39ಕ್ಕೆ ಇಳಿಸಲಾಗಿದೆ. ನಮ್ಮ ದೇಶದಲ್ಲಿ ಅತ್ಯಧಿಕ ತೆರಿಗೆ ದರವು 42.74 ಶೇಕಡಾ. ಇದು ವಿಶ್ವದಲ್ಲೇ ಅತೀ ಹೆಚ್ಚು ಎನ್ನಲಾಗಿದೆ. ಹೊಸ ತೆರಿಗೆ ಪದ್ಧತಿಯಲ್ಲಿ ಅತ್ಯಧಿಕ ಸರ್ಚಾರ್ಜ್ ದರವನ್ನು ಶೇಕಡಾ 37 ರಿಂದ ಶೇಕಡಾ 25ಕ್ಕೆ ಇಳಿಸುವುದಾಗಿ ಪ್ರಸ್ತಾಪಿಸಿದ್ದಾರೆ. ಇದು ಗರಿಷ್ಠ ತೆರಿಗೆ ದರವನ್ನು ಶೇಕಡಾ 39ಕ್ಕೆ ಇಳಿಸಲು ಕಾರಣವಾಗುತ್ತದೆ ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ರಜೆ ನಗದೀಕರಣ: ನಿವೃತ್ತರಾದಾಗ ಸಿಗುವ ರಜೆ ನಗದೀಕರಣ (ಲೀವ್ ಎನ್‌ಕ್ಯಾಶ್‌ಮೆಂಟ್) ಸೌಲಭ್ಯದ ಮೇಲೆ ಈವರೆಗೆ 3 ಲಕ್ಷ ರೂಗೆ ಮಾತ್ರ ತೆರಿಗೆ ವಿನಾಯ್ತಿ ಇತ್ತು. ಈ ಮೊತ್ತವನ್ನು 25 ಲಕ್ಷ ರೂಗೆ ಹೆಚ್ಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಸ್ಫೂರ್ತಿಯಾಯ್ತು ನಮ್ಮ ಇಳಕಲ್ ಸೀರೆ...!

ಕಸೂತಿ ಮಾಡಿಸಿಕೊಡುವಂತೆ ಸೂಚಿಸಿದ್ದರು.ಕಸೂತಿ ಸೀರೆ ತಯಾರಿಕೆಯಲ್ಲಿ ಹೆಸರು ಗಳಿಸಿರುವ ಧಾರವಾಡದ ಆರತಿ ಕ್ರಾಫ್ಟ್ ಮಾಲೀಕರಾದ ಆರತಿ ಹಿರೇಮಠ ಅವರಿಗೆ ಸೀರೆಗಳಿಗೆ ಕಸೂತಿ ಮಾಡುವ ಹೊಣೆಗಾರಿಕೆಯನ್ನು ನೀಡಲಾಗಿತ್ತು.

ಇಂದು ವಿತ್ತ ಸಚಿವರು ಬಜೆಟ್ ಮಂಡನೆ ವೇಳೆ ಉಟ್ಟಿದ್ದ ಕೆಂಪು ಬಣ್ಣದ ಇಳಕಲ್ ರೇಷ್ಮೆ ಸೀರೆಗೆ ಸಾಂಪ್ರದಾಯಿಕ ಕಸೂತಿ ಹಾಕಲಾಗಿತ್ತು. 5.5 ಮೀಟರ್ ಉದ್ದವಿರುವ ಈ ಸೀರೆಗೆ ಚಿಕ್ಕ ಪರಾಸ್ ದಡಿ ಇದ್ದು, ತೇರು, ಗೋಪುರ, ನವಿಲು ಮತ್ತು ಕಮಲದ ಚಿತ್ರಗಳ ಕಸೂತಿಯನ್ನು ಆಕರ್ಷಕವಾಗಿ ರೇಷ್ಮೆ ಜರಿಯಿಂದ ಮಾಡಲಾಗಿದೆ. ಈ ಸೀರೆಯ ಅಂದಕ್ಕೆ ಮಾರುಹೋಗಿದ್ದ ನಿರ್ಮಲಾ ಸೀತರಾಮನ್ ಅವರು ಕೇಂದ್ರ ಬಜೆಟ್ ಮಂಡನೆಯ ವೇಳೆ ಈ ವಿಶೇಷ ಸೀರೆಯನ್ನುಟ್ಟು ಗಮನ ಸೆಳೆದಿದ್ದಾರೆ. ಕೇಂದ್ರ ಬಜೆಟ್ ಮಂಡಿಸುವ ಸಂದರ್ಭದಲ್ಲಿ ದೇಶ-ವಿದೇಶಗಳು ನಿರ್ಮಲಾ ಸೀತರಾಮನ್ ಅವರತ್ತ ದೃಷ್ಟಿ ನೆಟ್ಟಿರುತ್ತದೆ. ಅವರು ನಮ್ಮೂರಿನ ಸೀರೆಯಲ್ಲಿ ಬಲಿಷ್ಠ ಭಾರತ ದೇಶದ ಬಜೆಟ್ ಮಂಡಿಸಿರುವುದು ನಮ್ಮ ಜಿಲ್ಲೆ ಹಾಗೂ ರಾಜ್ಯಕ್ಕೆ ಹೆಮ್ಮೆ ಮೂಡಿಸಿದೆ. ಕಸೂತಿಯಂತಹ ಗ್ರಾಮೀಣ ಕಲೆಗಳಿಗೆ ಹಾಗೂ ಮಹಿಳೆಯರಿಗೆ ಕೇಂದ್ರ ವಿತ್ತ ಸಚಿವರು ಪ್ರೋತ್ಸಾಹಿಸಿ, ಬೆಂಬಲ ನೀಡಿದಂತಾಗಿದೆ ಎಂದು ಕಸೂತಿ ತಜ್ಞೆ ಆರತಿ ಹಿರೇಮಠ್ ಕೃತಜ್ಞತೆ ಸಲ್ಲಿಸಿದ್ದಾರೆ.

ಬಂಡವಾಳ ಹೂಡಿಕೆ

ಪ್ರವಾಸಿಗರನ್ನು ಆಕರ್ಷಿಸುವ ಉದ್ದೇಶದಿಂದ ರೈಲ್ವೆಯು ಇನ್ನೂ 100 ವಿಸ್ಟಾಡೋಮ್ ಕೋಚ್‌ಗಳನ್ನು ತಯಾರಿಸಲು ಮುಂದಾಗಿದೆ. ಬಜೆಟ್‌ನಲ್ಲಿ, 35 ಹೈಡ್ರೋಜನ್ ಇಂಧನ ಆಧಾರಿತ ರೈಲುಗಳು, 4,500 ಹೊಸ ವಿನ್ಯಾಸದ ಆಟೋ ಮೊಬೈಲ್ ಕ್ಯಾರಿಯರ್ ಕೋಚ್‌ಗಳು, 5,000 ಎಲ್‌ಹೆಚ್‌ಬಿ ಬೋಗಿಗಳು ಮತ್ತು 58,000 ವ್ಯಾಗನ್ ತಯಾರಿಕೆಯನ್ನು ಸರ್ಕಾರ ಬಜೆಟ್‌ನಲ್ಲಿ ಪ್ರಸ್ತಾಪಿಸಿದೆ. 2022-23ರ ಕೇಂದ್ರ ಬಜೆಟ್‌ನಲ್ಲಿ ರೈಲ್ವೆಗೆ 1.4 ಲಕ್ಷ ಕೋಟಿ ರೂ.ಗಳನ್ನು ಮೀಸಲಿಡಲಾಗಿದ್ದು, ಇದರಲ್ಲಿ 1.37 ಲಕ್ಷ ಕೋಟಿ ಬಂಡವಾಳ ವೆಚ್ಚ ಮತ್ತು 3,267 ಲಕ್ಷ ಕೋಟಿ ಆದಾಯ ವೆಚ್ಚಕ್ಕೆ ಮೀಸಲಿಡಲಾಗಿದೆ.

ಹೊಸ ನರ್ಸಿಂಗ್ ಕಾಲೇಜು ಸ್ಥಾಪನೆ

ಈ ಯೋಜನೆಯಿಂದ ಔಷಧ ವಲಯದಲ್ಲಿ ಸಂಶೋಧನೆ ಜತೆಗೆ ಹೂಡಿಕೆಯೂ ಹೆಚ್ಚಲಿದೆ. ಸಿಕಲ್ ಸೆಲ್ ಅನೀಮಿಯಾ ತಪಾಸಣೆ ಮಾಡಲಾಗುವುದು.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಫೆಬ್ರವರಿ 1 ರಂದು, ಫಾರ್ಮಾ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ನಾವೀನ್ಯತೆಗಳನ್ನು ಉತ್ತೇಜಿಸಲು ಕೇಂದ್ರವು ಹೊಸ ಕಾರ್ಯಕ್ರಮವನ್ನು ಹೊರತರಲಿದೆ ಎಂದು ಘೋಷಿಸಿದ್ದಾರೆ. ಇದನ್ನು ದೇಶದ ಶ್ರೇಷ್ಠತೆಯ ಕೇಂದ್ರಗಳ ಮೂಲಕ ಕೈಗೆತ್ತಿಕೊಳ್ಳಲಾಗುವುದು. ಫಾರ್ಮಾ ವಲಯದಲ್ಲಿ ಸಂಶೋಧನೆ ಮತ್ತು ಆವಿಷ್ಕಾರವನ್ನು ಉತ್ತೇಜಿಸಲು ಹೊಸ ಕಾರ್ಯಕ್ರಮವನ್ನು ಶ್ರೇಷ್ಠತೆಯ ಕೇಂದ್ರಗಳ ಮೂಲಕ ಕೈಗೆತ್ತಿಕೊಳ್ಳಲಾಗುವುದು. ನಿರ್ದಿಷ್ಟ ಆದ್ಯತೆಯ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಹೂಡಿಕೆ ಮಾಡಲು ನಾವು ಉದ್ಯಮವನ್ನು ಪ್ರೋತ್ಸಾಹಿಸುತ್ತೇವೆ ಎಂದು ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

2015 ರಿಂದ ಇಲ್ಲಿಯವರೆಗೆ 8700 ಅಟಲ್ ಟಿಂಕರಿಂಗ್ ಲ್ಯಾಬ್‌ಗಳನ್ನು ತೆರೆಯಲಾಗಿದೆ. ಉನ್ನತ ಶಿಕ್ಷಣಕ್ಕೆ ಹೆಣ್ಣು ಮಕ್ಕಳ ದಾಖಲಾತಿ ಶೇ.18ಕ್ಕಿಂತ ಹೆಚ್ಚಿದೆ. 53ರಷ್ಟು ವೈದ್ಯಕೀಯ ಸೀಟುಗಳು ಹೆಚ್ಚಿವೆ. ಆರು ಹೊಸ ಏಮ್ಸ್ ತೆರೆಯಲಾಗಿದೆ. 16 ಏಮ್ಸ್ ತೆರೆಯುವ ಹಂತದಲ್ಲಿದೆ. ಶಾಲಾ ಮಟ್ಟವನ್ನು ಸುಧಾರಿಸಲು, 2035 ರ ವೇಳೆಗೆ ಒಟ್ಟು ದಾಖಲಾತಿಯನ್ನು ಶೇಕಡಾ 50 ರಷ್ಟು ಹೆಚ್ಚಿಸುವ ಗುರಿಯನ್ನು ನಿಗದಿಪಡಿಸಲಾಗಿದೆ. ಇದಕ್ಕಾಗಿ ದೂರ ಮತ್ತು ಮುಕ್ತ ಕಲಿಕಾ ಪದ್ಧತಿಯ ನೆರವು ಪಡೆಯಲಾಗುವುದು. ಸ್ವಯಂ, ದೀಕ್ಷಾ, ಸ್ವಯಂ ಪ್ರಭಾ, ವರ್ಚುವಲ್ ಲ್ಯಾಬ್ ಗಳ ಸಂಖ್ಯೆ ಹೆಚ್ಚಿದೆ. 2774 ಇನ್ನೋವೇಶನ್ ಇನ್‌ಸ್ಟಿಟ್ಯೂಷನ್ ಕೌನ್ಸಿಲ್‌ಗಳನ್ನು ರಚಿಸಲಾಗಿದೆ.

ಮಹಿಳೆಯರಿಗೆ ಹೊಸ ಉಳಿತಾಯ ಯೋಜನೆ

ನಿರ್ಮಲಾ ಹೇಳಿದ್ದಾರೆ. ಪಿಎಂ-ಕಿಸಾನ್ ಸಮ್ಮಾನ್ ನಿಧಿ ಅಡಿಯಲ್ಲಿ ಸಣ್ಣ ರೈತರಿಗೆ ರೂ. 2.25 ಲಕ್ಷ ಕೋಟಿಗೂ ಹೆಚ್ಚು ಆರ್ಥಿಕ ನೆರವು ನೀಡಲಾಗಿದೆ. ಈ ಯೋಜನೆಯಡಿ ಸುಮಾರು 3 ಕೋಟಿ ಮಹಿಳಾ ರೈತರಿಗೆ ರೂ. 54 ಸಾವಿರ ಕೋಟಿ ಒದಗಿಸಲಾಗಿದೆ ಎಂದು ತಿಳಿಸಿದ್ದಾರೆ. ಹಿರಿಯ ನಾಗರಿಕರ ಉಳಿತಾಯ ಯೋಜನೆಯ ಮಿತಿಯನ್ನು ರೂ. 15 ಲಕ್ಷದಿಂದ ರೂ. 30ಲಕ್ಷಕ್ಕೆ ಹೆಚ್ಚಿಸಲಾಗಿದೆ. ಮಾಸಿಕ ಆದಾಯ ಯೋಜನೆಯ ಗರಿಷ್ಠ ಠೇವಣಿ ಮಿತಿಯನ್ನು ರೂ. 4.5 ಲಕ್ಷದಿಂದ ರೂ. 9 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಜಂಟಿ ಖಾತೆಯ ಮಿತಿ ರೂ. 9 ಲಕ್ಷದಿಂದ ರೂ. 15 ಲಕ್ಷಕ್ಕೆ ಹೆಚ್ಚಿಸಲಾಗಿದೆ.

ಸಹಕಾರ ಕ್ಷೇತ್ರಕ್ಕೆ ತೆರಿಗೆ ವಿನಾಯಿತಿ

ಸಹಕಾರ ಸೊಸೈಟಿ ಸ್ಥಾಪನೆಯಾದರೆ ಅವುಗಳಿಗೂ ಶೇ.15 ತೆರಿಗೆ ರಿಯಾಯಿತಿ ಸೌಲಭ್ಯ ಲಭಿಸಿದೆ. ಆದರೆ, ಆ ಸೊಸೈಟಿಗಳು 2024ರ ಮಾರ್ಚ್ ಒಳಗೆ ಉತ್ಪಾದನೆ ಆರಂಭಿಸಿದರೆ ಮಾತ್ರ ಈ ತೆರಿಗೆ ರಿಯಾಯಿತಿ ಅನ್ವಯಿಸಲಿದೆ ಎಂದು ಸಚಿವೆ ಹೇಳಿದರು.

ಮುಂದಿನ ಐದು ವರ್ಷಗಳಲ್ಲಿ, ಈವರೆಗೆ ಸಹಕಾರ ಸಂಘಗಳು ಇಲ್ಲದ ಪಂಚಾಯಿತಿ ಮತ್ತು ಹಳ್ಳಿಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಬಹು ಉದ್ದೇಶಿತ ಸಹಕಾರ ಸಂಘಗಳು, ಪ್ರಾಥಮಿಕ ಮೀನುಗಾರಿಕಾ ಸಂಘಗಳು ಹಾಗೂ ಹೈನುಗಾರಿಕೆ ಸಹಕಾರ ಸಂಘಗಳನ್ನು ಸ್ಥಾಪಿಸಲು ಸರ್ಕಾರ ಸೌಲಭ್ಯ ಒದಗಿಸಲಿದೆ ಎಂದು ಅವರು ಹೇಳಿದರು.

ರಾಷ್ಟ್ರೀಯ ಡಿಜಿಟಲ್ ಲೈಬ್ರರಿ

ಸಂಸ್ಕೃತಿಯನ್ನು ರೂಢಿಸಲು ಮತ್ತು ಕೋವಿಡ್ ಕಾಲದಲ್ಲಿ ಅವರಿಗಾದ ಕಲಿಕೆಯ ನಷ್ಟವನ್ನು ಸರಿದೂಗಿಸಿಕೊಡಲು 'ನ್ಯಾಷನಲ್ ಬುಕ್ ಟ್ರಸ್ಟ್', 'ಚಿಲ್ಡ್ರನ್ಸ್ ಬುಕ್ ಟ್ರಸ್ಟ್' ಮತ್ತು ಇತರ ಮೂಲಗಳನ್ನು ಪ್ರೋತ್ಸಾಹಿಸಲಾಗುವುದು ಎಂದು ಅವರು ತಿಳಿಸಿದರು. ಕಲಿಕಾ ಕ್ಷೇತ್ರದಲ್ಲಿ ಕೆಲಸ ಮಾಡುವ ಎನ್‌ಜಿಒಗಳ ಸಹಯೋಗವೂ ಈ ಉಪಕ್ರಮದ ಒಂದು ಭಾಗವಾಗಿರುತ್ತದೆ. ಹಣಕಾಸಿನ ಸಾಕ್ಷರತೆಯನ್ನು ಬೆಳೆಸಲು ಹಣಕಾಸು ವಲಯದ ನಿಯಂತ್ರಕರು ಮತ್ತು ಸಂಸ್ಥೆಗಳನ್ನು ಪ್ರೋತ್ಸಾಹಿಸಲಾಗುತ್ತದೆ ಎಂದು ನಿರ್ಮಲಾ ಬಜೆಟ್ ಭಾಷಣದಲ್ಲಿ ಉಲ್ಲೇಖಿಸಿದ್ದಾರೆ.

ಉಡುಗೊರೆಗಳ ಮೇಲೆ ನಿಗಾ ಇಡಿ

ಸಾಗಾಣಿಕೆ, ಮಾರಾಟದ ಮೇಲೆ ಕಣ್ಣಿಡಬೇಕು, ಇದಕ್ಕೆ ಸಂಬಂಧಿಸಿದಂತೆ ರೈಲು, ಬಂದರು ಹಾಗೂ ವಿಮಾನ ನಿಲ್ದಾಣಗಳಲ್ಲಿ ಇದಕ್ಕಾಗಿ ವಿಶೇಷ ನೋಡಲ್ ಅಧಿಕಾರಿಗಳನ್ನು ನಿಯೋಜಿಸಬೇಕು ಎಂದು ತಿಳಿಸಿದರು. ಹಣದ ರೂಪದಲ್ಲಿ ಮತ್ತು ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ಮೂಲಕ ನಡೆಯುವ ಚಲಾವಣೆಗಳ ಮೇಲೆ ಹೆಚ್ಚಿನ ನಿಗಾ ವಹಿಸಬೇಕು. ಯಾವುದೇ ರೀತಿಯ ಕಾನೂನು ಬಾಹಿರ ಚಟುವಟಿಕೆಗಳು ಕಂಡು ಬಂದಲ್ಲಿ ತಕ್ಷಣವೇ ಕ್ರಮ ಕೈಗೊಳ್ಳಬೇಕು. ಸಮಾಜಘಾತುಕ ಭಾಷಣ/ ಸಮಾಜದ ನೆಮ್ಮದಿ ಕದಡುವ ಹಾಗೂ ದ್ವೇಷವನ್ನು ಹರಡುವ ಮಾತುಗಳು ಮತ್ತು ಅಂತಹ ಸಭೆಗಳ ಮೇಲೆ ನಿಗಾ ವಹಿಸಬೇಕು. ಆ ರೀತಿಯ ಘಟನೆಗಳು ಕಂಡು ಬಂದಲ್ಲಿ ಆಯಾ ವ್ಯಾಪ್ತಿಯ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮಕೈಗೊಳ್ಳಬೇಕು ಎಂದು ತಿಳಿಸಿದರು.

ಮೈಸೂರಿನ ವಿವಿಧೆಡೆ ಪ್ರತಿಭಟನೆ; ಆಗ್ರಹ, ಆಕ್ರೋಶ

ನಮ್ಮ ಮತ ಮಾರಾಟಕ್ಕಿಲ್ಲ

● ಗಾಂಧಿ ಪ್ರತಿಮೆ ಎದುರು ಮತದಾರರ ಪ್ರತಿಜ್ಞೆ ● ಮತದಾರರಿಗೆ ಆಮಿಷ ಒಡ್ಡುವುದಕ್ಕೆ ಕಡಿವಾಣ ಹಾಕಲು ವಿವಿಧ ಸಂಘಟನೆಗಳ ಮುಖಂಡರ ಆಗ್ರಹ



ಮೈಸೂರು, ಫೆ.1(ಆರ್‌ಕೆಬಿ)- ನಮ್ಮ ಮತ ಮಾರಾಟಕ್ಕಿಲ್ಲ, ಚುನಾವಣೆಗಳಲ್ಲಿ ಹಣ, ಹೆಂಡ ಇತರೆ ಆಮಿಷಗಳಿಗೆ ಮತ ಮಾರಿಕೊಳ್ಳುವುದಿಲ್ಲ ಎಂದು ಮತದಾರರು ಪ್ರಜ್ಞಾಪೂರ್ವಕವಾಗಿ ಮತ ಚಲಾಯಿಸುವ ಅಗತ್ಯವಿದೆ ಈ ಮೂಲಕ ಸಂವಿಧಾನ ಉಳಿಸಿ, ಬೆಳೆಸುವ ದಿಟ್ಟ ನಿಲುವು ಪ್ರದರ್ಶಿಸಬೇಕು ಎಂದು ಆಗ್ರಹಿಸಿ, ವಿವಿಧ ಸಂಘಟನೆಗಳ ಮುಖಂಡರು ಬುಧವಾರ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಸಾಮೂಹಿಕ ಪ್ರತಿಜ್ಞೆ ಸ್ವೀಕರಿಸಿದರು.

ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಆಶ್ರಯದಲ್ಲಿ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿ, ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ರಾಜಕಾರಣಿಗಳು ಮತದಾರರಿಗೆ ಆಮಿಷ ಒಡ್ಡುವ ಸಾಧ್ಯತೆಗಳಿದ್ದು, ಇದಕ್ಕೆ ಸರ್ಕಾರ ಮತ್ತು ಚುನಾವಣಾ ಆಯೋಗ ಕಡಿವಾಣ ಹಾಕಬೇಕು. ಇದಕ್ಕೆ ಚುನಾವಣಾ ಆಯುಕ್ತರು ದಿಟ್ಟ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಂ, ಚುನಾವಣೆಗಳಲ್ಲಿ ಮತದಾರರು ಹಣ, ಹೆಂಡ ಇತರೆ ಆಮಿಷಗಳಿಗೆ ಮತ ಮಾರಿಕೊಳ್ಳುವುದಿಲ್ಲ ಎಂಬ ಪ್ರತಿಜ್ಞೆಯಂತೆ ಮುಂದೆ ಪ್ರಜ್ಞಾಪೂರ್ವಕವಾಗಿ ಮತ ಚಲಾಯಿಸಬೇಕಿದೆ. ಈ ಮೂಲಕ ಸಂವಿಧಾನವನ್ನು ಉಳಿಸಿ, ಬೆಳೆಸುವ ದಿಟ್ಟ ಆಶಯವನ್ನು ಮತದಾರರು ಪ್ರದರ್ಶಿಸಬೇಕು ಎಂದು ಹೇಳಿದರು.

ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ಬಹಿರಂಗ ಸಭೆಯಲ್ಲಿ ಮತದಾರರಿಗೆ ಪ್ರತಿ ಮತಕ್ಕೆ 6 ಸಾವಿರ ರೂ. ಕೊಟ್ಟು ಖರೀದಿ ಮಾಡುತ್ತೇವೆ ಎಂದು ಹೇಳುವ ಮೂಲಕ ಪ್ರಜಾಪ್ರಭುತ್ವವನ್ನು ಅಣಕಿಸಿದ್ದಾರೆ. ಇವರ ಮೇಲೆ ಚುನಾವಣಾ ಆಯೋಗ ಕ್ರಮ ಜರುಗಿಸಿ, ತನ್ನ ಶಕ್ತಿ ತೋರಿಸಬೇಕು. ಪ್ರಜಾಪ್ರಭುತ್ವದ ಆಶಯ ಈಡೇರಿಸದಿದ್ದರೆ ಚುನಾವಣಾ ಆಯೋಗಕ್ಕೆ ಬೆಲೆಯೇ ಇಲ್ಲದಂತಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಲೇಖಕ ಜಿ.ಪಿ. ಬಸವರಾಜು, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ನೆಲೆ ಹಿನ್ನೆಲೆ ಟ್ರಸ್ಟ್ ಅಧ್ಯಕ್ಷ ಕೆ.ಆರ್.ಗೋಪಾಲಕೃಷ್ಣ, ಪ್ರಗತಿಪರ ಚಿಂತಕ ಲ.ಜಗನ್ನಾಥ್, ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ, ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಮಹಿಳಾ ಮುಖಂಡರಾದ ವಿದ್ಯಾ, ಭವ್ಯಾ, ಮುಖಂಡರಾದ ಲೋಕೇಶ್‌ಕುಮಾರ್, ಮಹೇಂದ್ರ ಕಾಗಿನೆಲೆ, ನಿಹಾಲ್, ಆರ್.ಕೆ.ರವಿ, ಸುನಿಲ್, ನಾರಾಯಣ್, ರವಿ ಜೆ.ನಾಯಕ್, ರವಿ ನಜರ್‌ಬಾದ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ವಿವಿ ವಿರುದ್ಧ ಸಂಶೋಧಕರ ಸಂಘದ ಪ್ರತಿಭಟನೆ



ಮೈಸೂರು, ಫೆ.1(ಆರ್‌ಕೆಬಿ)- ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ಎಸ್‌ಸಿ/ಎಸ್‌ಟಿ ಸಂಶೋಧಕರಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಮಂಜೂರು ಮಾಡುವಂತೆ ಆಗ್ರಹಿಸಿ, ಮೈಸೂರು ವಿವಿ ಸಂಶೋಧಕರ ಸಂಘದ ಆಶ್ರಯದಲ್ಲಿ ಬುಧವಾರ ಮಾನಸಗಂಗೋತ್ರಿ ಮುಖ್ಯದ್ವಾರದಲ್ಲಿರುವ ಕುವೆಂಪು ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು ವಿವಿ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರು, ರಾಜ್ಯ ಸರ್ಕಾರ 2022ರ ನವೆಂಬರ್‌ನಲ್ಲಿ 2.57 ಕೋಟಿ ಹಣ ಬಿಡುಗಡೆ ಮಾಡಿದೆ. ಆದರೆ ಮೈಸೂರು ವಿವಿ ಅಧಿಕಾರಿಗಳು ವಿದ್ಯಾರ್ಥಿಗಳ ಖಾತೆಗೆ ಹಣ ಜಮಾ ಮಾಡುತ್ತಿಲ್ಲ. ಪರಿಶಿಷ್ಟ ಜಾತಿಗೆ 1125.25 ಲಕ್ಷ ಹಾಗೂ ಪರಿಶಿಷ್ಟ ಪಂಗಡದವರಿಗೆ 466 ಲಕ್ಷ ರೂ.ಗಳನ್ನು ಸಂಶೋಧನಾ ವಿದ್ಯಾರ್ಥಿಗಳಿಗೆ ಶಿಷ್ಯವೇತನವಾಗಿ ಹಣ ಬಿಡುಗಡೆಯಾಗಿದೆ. ಆದರೆ ಬೇರೆಲ್ಲಾ ವಿವಿಗಳು ಸರ್ಕಾರದ ಅನುದಾನವನ್ನು ವಿದ್ಯಾರ್ಥಿಗಳಿಗೆ ಬಿಡುಗಡೆ ಮಾಡಿದ್ದರೂ, ಮೈಸೂರು ವಿವಿ ಆಡಳಿತ ವರ್ಗ ಸಂಶೋಧಕರಿಗೆ ಪ್ರತಿದಿನ ನಾನಾ ಕಾರಣ ನೀಡಿ, ಕಾಲಹರಣ ಮಾಡುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಇದರ ಪರಿಣಾಮ ನಮ್ಮ ಶೈಕ್ಷಣಿಕ ಪ್ರಗತಿ, ಸಂಶೋಧನಾ ಕಾರ್ಯ ಚಟುವಟಿಕೆಗಳು ಮಂದಗತಿಯಲ್ಲಿ ಸಾಗುವಂತಾಗಿದೆ. ಸಿಂಡಿಕೇಟ್ ವ್ಯಾಪ್ತಿಗೆ ಒಳಪಡದ ಈ ವಿಷಯವನ್ನು ಸಿಂಡಿಕೇಟ್‌ನಲ್ಲಿ ಪ್ರಸ್ತಾಪಿಸುತ್ತೇವೆಂದು ನೆಪ ಒಡ್ಡುತ್ತಿದ್ದಾರೆ. ಹೀಗಾಗಿ ಇದರ ಬಗ್ಗೆ ಅನೇಕ ಪ್ರಶ್ನೆಗಳು ಉದ್ಭವವಾಗಿದ್ದು, ಮೈಸೂರು ವಿವಿ ಈ ಹಣವನ್ನು ದುರ್ಬಳಕೆ ಮಾಡಿಕೊಂಡಿರಬಹುದೆಂಬ ಸಂದೇಹ ಉಂಟಾಗಿದೆ ಎಂದು ದೂರಿದರು.

ಕೂಡಲೇ ಸಂಶೋಧಕರಿಗೆ ಹಣ ಬಿಡುಗಡೆ ಮಾಡಿ, ಸಮಸ್ಯೆ ಬಗೆಹರಿಸುವವರೆಗೂ ಪ್ರತಿಭಟನೆ ಹಿಂತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಪ್ರತಿಭಟನೆಯ ನೇತೃತ್ವ ವಹಿಸಿರುವ ಸಂಶೋಧಕರ ಸಂಘದ ಅಧ್ಯಕ್ಷ ನಟರಾಜ್ ಶಿವಣ್ಣ ತಿಳಿಸಿದ್ದಾರೆ.

ಪ್ರತಿಭಟನೆಯಲ್ಲಿ ಲಿಂಗರಾಜು, ಶ್ರೀಶಂಕರ, ರಂಗನಾಥ್, ಕೆಂಪರಾಜು, ಮಹದೇವಸ್ವಾಮಿ, ರಂಗಮ್ಮ, ಪ್ರದೀಪ್, ಕಲ್ಲಳ್ಳಿ ಕುಮಾರ್ ಇನ್ನಿತರರು ಭಾಗವಹಿಸಿದ್ದರು.

ಶ್ರೀರಾಮನ ಹಿಯ್ಯಾಳಿಸಿದ ಪ್ರೊ.ಕೆ.ಎಸ್.ಭಗವಾನ್ ವಿರುದ್ಧ ಹಿಂದೂ ರಾಷ್ಟ್ರ ಜಾಗೃತಿ ಕಾರ್ಯಕರ್ತರ ಪ್ರತಿಭಟನೆ



ಮೈಸೂರು, ಫೆ.1(ಆರ್‌ಕೆಬಿ)- ಶ್ರೀರಾಮ ಮತ್ತು ಶ್ರೀರಾಮಚರಿತ ಮಾನಸಗಳನ್ನು ಅವಮಾನಿಸುವವರನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿ, ಪ್ರೊ.ಕೆ. ಎಸ್.ಭಗವಾನ್ ಮತ್ತು ಬಿಹಾರ ಶಿಕ್ಷಣ ಸಚಿವ ಚಂದ್ರಶೇಖರ್ ಅವರ ಆಕ್ಷೇಪಾರ್ಹ ಹೇಳಿಕೆಗಳನ್ನು ಖಂಡಿಸಿ, ಹಿಂದೂ ರಾಷ್ಟ್ರಜಾಗೃತಿ ಸಮಿತಿ ಮತ್ತು ಹಿಂದೂ ಸಂಘಟನೆಗಳ ಕಾರ್ಯಕರ್ತರು ಬುಧವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಭಗವಾನ್ ಶ್ರೀರಾಮನು ತನ್ನ ಹೆಂಡತಿ ಸೀತೆಯೊಂದಿಗೆ ದಿನವಿಡೀ ಮದ್ಯ ಸೇವಿಸುತ್ತಿದ್ದರು. ರಾಮ ಆದರ್ಶ ರಾಜನಲ್ಲ ಎಂಬ ಆಕ್ಷೇಪಾರ್ಹ ಹೇಳಿಕೆಯನ್ನು ಪ್ರೊ.ಕೆ. ಎಸ್.ಭಗವಾನ್ ನೀಡಿದ್ದಾರೆ. ಇನ್ನು ಮುಂದೆ ಇಂತಹ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡುವುದಿಲ್ಲ ಎಂಬ ಷರತ್ತನ್ನು ವಿಧಿಸಲಾಗಿತ್ತು. ಈ ಷರತ್ತನ್ನು ಉಲ್ಲಂಘಿಸಿರುವ ಅವರ ಜಾಮೀನು ರದ್ದುಗೊಳಿಸಿ, ಅವರನ್ನು ತಕ್ಷಣ ಬಂಧಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನಾಕಾರರು, ಪ್ರೊ.ಕೆಎಸ್.ಭಗವಾನ್ ಮತ್ತು ಬಿಹಾರ ಶಿಕ್ಷಣ ಸಚಿವ ಚಂದ್ರಶೇಖರ್ ವಿರುದ್ಧ ಘೋಷಣೆಗಳನ್ನು ಕೂಗಿದರು. ಪ್ರಭು ಶ್ರೀರಾಮರಿಗೆ ಅಪಮಾನ ಮಾಡುವುದನ್ನು ಸಹಿಸುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹಿಂದೂ ರಾಷ್ಟ್ರ ಜಾಗೃತಿಯ ಕೆ.ಶಿವರಾಂ, ಶ್ರೀರಾಮಚರಿತ ಮಾನಸವು ದ್ವೇಷ ಹರಡುವ ಗ್ರಂಥವಾಗಿದ್ದರೆ ಹಿಂದೂಗಳು ಮತ್ತು ಹಿಂದೂ ಮಹಿಳೆಯರನ್ನು ಅಪಮಾನಿಸುವ ಗ್ರಂಥಗಳ ಬಗ್ಗೆ ಇವರು ಏನು ಹೇಳುತ್ತಾರೆ? ಈ ರೀತಿ ದೇವತೆಗಳು, ಧರ್ಮಗ್ರಂಥ, ಸಂತರು, ಧಾರ್ಮಿಕ ಕೃತಿಯ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡುವ ಚಲನಚಿತ್ರ, ನಾಟಕ, ಚಿತ್ರಕಲೆ, ಪುಸ್ತಕ ಇತ್ಯಾದಿಗಳ ಮೂಲಕ ಅಪಮಾನಿಸಲಾಗುತ್ತಿದೆ. ಈ ಅಪಮಾನವನ್ನು ಹಿಂದೂಗಳು ಸಹಿಸುವುದಿಲ್ಲ. ಇಂತಹ ಅಪಮಾನಗಳ ತಡೆಗೆ ಕೇಂದ್ರ ಸರ್ಕಾರ ರಾಷ್ಟ್ರಮಟ್ಟದಲ್ಲಿ ಧರ್ಮನಿಂದನೆ ತಡೆ ಕಾನೂನು ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಆನಂದ್, ಅಶೋಕ್‌ಕುಮಾರ್, ಸೌಮ್ಯ, ಶ್ರೀಲಕ್ಷ್ಮಿ, ಪುರುಷೋತ್ತಮ್, ವಸಂತ ಲಕ್ಷ್ಮಿ, ನಿತಿನ್ ಯಾದವ್, ಜಿ.ಎಲ್.ಹೆಗ್ಡೆ, ಶಿವಾನಂದರಾವ್ ಇನ್ನಿತರರು ಉಪಸ್ಥಿತರಿದ್ದರು.

ಡಿಸಿ ಕಚೇರಿ ಎದುರು ಬಿಸಿಯೂಟ ತಯಾರಕರ ಪ್ರತಿಭಟನೆ



ಮೈಸೂರು, ಫೆ1(ಆರ್‌ಕೆಬಿ)- ಸರ್ಕಾರಿ ಶಾಲೆಗಳಲ್ಲಿ ಹಲವಾರು ವರ್ಷಗಳಿಂದ ಮಧ್ಯಾಹ್ನದ ಬಿಸಿ ಊಟದ ಅಡುಗೆ ತಯಾರು ಮಾಡುವ ಮುಖ್ಯ ಅಡುಗೆಯವರು, ಅಡುಗೆ ಸಹಾಯಕರಿಗೆ ಬಜೆಟ್‌ನಲ್ಲಿ ಜೀವನ ಯೋಗ್ಯ ವೇತನ ನೀಡಬೇಕು. ಕ್ಷೀರ ಹಾಗೂ ಬಿಸಿಯೂಟ ಯೋಜನೆಯ ಖರ್ಚು ವೆಚ್ಚಗಳ ನಿರ್ವಹಣೆಯು ಮುಖ್ಯೋಪಾಧ್ಯಾಯರು ಹಾಗೂ ಅಡುಗೆಯವರ ಜಂಟಿ ಖಾತೆಯಲ್ಲಿದ್ದು, ಅದನ್ನು ಎಸ್‌ಡಿಎಂಸಿ ಅಧ್ಯಕ್ಷರು, ಮುಖ್ಯೋಪಾಧ್ಯಾಯರ ಜಂಟಿ ಖಾತೆಗೆ ವರ್ಗಾಯಿಸಲು ನೀಡಿರುವ ಆದೇಶವನ್ನು ವಾಪಸ್ ಪಡೆಯಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ, ರಾಜ್ಯ ಸಂಯುಕ್ತ ಅಕ್ಷರದಾಸೋಹ ಕಾರ್ಮಿಕರ ಸಂಘದ ಜಿಲ್ಲಾ ಸಮಿತಿ ಆಶ್ರಯದಲ್ಲಿ ಬುಧವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಯಿತು.

ಪ್ರಸ್ತುತ ರಾಜ್ಯದಲ್ಲಿ 118,586 ಬಿಸಿಯೂಟ ಕಾರ್ಮಿಕರು ಅಕ್ಷರ ದಾಸೋಹ ಯೋಜನೆಯಡಿ ಅತ್ಯಂತ ಕಡಿಮೆ ವೇತನಕ್ಕೆ ದುಡಿಯುತ್ತಿದ್ದಾರೆ. ಈ ಯೋಜನೆಯಡಿ ಬಿಸಿಯೂಟ ಕಾರ್ಮಿಕರು ಸಂಪೂರ್ಣ ಕಡೆಗಣಿಸಲ್ಪಟ್ಟಿದ್ದಾರೆ. ಸಕಾಲದಲ್ಲಿ ವೇತನ ಪಾವತಿಯಾಗುತ್ತಿಲ್ಲ. ಇಂದಿನ ಬೆಲೆ ಏರಿಕೆ ಪರಿಸ್ಥಿತಿಯಲ್ಲಿ ಕುಟುಂಬ ನಿರ್ವಹಣೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ಯೋಗ್ಯ ವೇತನ ನೀಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಹಾಗಾಗಿ ಈ ಬಾರಿಯ ಬಜೆಟ್‌ನಲ್ಲಿ ಜೀವನ ಯೋಗ್ಯ ವೇತನ ನೀಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಕೆಲಸ ಮಾಡುತ್ತಿರುವ ಹುದ್ದೆಗಳಲ್ಲೇ ಖಾಯಂಗೊಳಿಸಿ, ಇಲ್ಲವೇ ಈ ಹುದ್ದೆಗಳಲ್ಲಿ ಖಾಯಂಗೊಳಿಸುವವರೆಗೆ ಮುಖ್ಯ ಅಡುಗೆಯವರು, ಅಡುಗೆಯವರು, ಅಡುಗೆ ಸಹಾಯಕರ ಹುದ್ದೆಗಳಿಗೆ ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಕಾಯ್ದೆಯನ್ವಯ ಈಗಾಗಲೇ ಈ ಶೆಡ್ಯೂಲ್ ಹುದ್ದೆಗಳಿಗೆ ನಿಗದಿಪಡಿಸಿರುವ ಮಾಸಿಕ ವೇತನ, ಇಪಿಎಫ್, ಇಎಸ್‌ಐ ಸೌಲಭ್ಯಗಳನ್ನು ನೀಡಬೇಕು. ಪ್ರತೀ ತಿಂಗಳ 5ನೇ ತಾರೀಕಿನ ಒಳಗಾಗಿ ಕಾರ್ಮಿಕರ ಬ್ಯಾಂಕ್ ಖಾತೆಗೆ ಮಾಸಿಕ ವೇತನವನ್ನು ಪಾವತಿ ಮಾಡಬೇಕು. ಪ್ರತಿ ತಿಂಗಳು ವೇತನ ಚೀಟಿ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಎಐಟಿಯುಸಿ ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ್ ಮೇಟಿ, ರಾಜ್ಯ ಕಾರ್ಯದರ್ಶಿ ಪಿ.ಎಸ್.ಸಂಧ್ಯಾ, ಶಾಂತಮ್ಮ, ಲಕ್ಷ್ಮೀ ಜಯಪುರ, ರಾಜೇಶ್ವರಿ, ಸೌಮ್ಯ ವರಕೋಡು, ಶಿವಮ್ಮ ರಾಜೇಶ್ವರಿ, ಗಾಯಿತ್ರಿ, ಶೋಭಾ, ನಾಗರತ್ನ, ಮಂಗಳಮ್ಮ ಇನ್ನಿತರರು ಉಪಸ್ಥಿತರಿದ್ದರು.

ನಾಳೆಯಿಂದ 'ಮಧ್ವ-ಪುರಂದರ ನಮನ' ಕಾರ್ಯಕ್ರಮ



ಮೈಸೂರು,ಫೆ.1(ಪಿಎಂ)- ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ ವತಿಯಿಂದ ದಾಸ ಸಾಹಿತ್ಯ ಉಳಿಸಿ ಬೆಳೆಸುವ ನಿಟ್ಟಿನಲ್ಲಿ 'ಮಧ್ವ-ಪುರಂದರ ನಮನ' ಶೀರ್ಷಿಕೆಯಡಿ ಫೆ.3ರಿಂದ 5ರವರೆಗೆ ಮೂರು ದಿನಗಳ ಗಾಯನ ಮತ್ತು ಪ್ರವಚನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಸಂಸ್ಥಾಪಕ ಎಸ್.ರವಿಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷ್ಣಮೂರ್ತಿಪುರಂನ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ಕಾರ್ಯಕ್ರಮ ನಡೆಯಲಿದೆ. ಫೆ.3ರಂದು ಸಂಜೆ 5ರಿಂದ 6ರವರೆಗೆ ಭಜನೆ ಕಾರ್ಯಕ್ರಮ ನಡೆಯಲಿದ್ದು, ಸಂಜೆ 6ರಿಂದ ರಾತ್ರಿ 7ರವರೆಗೆ ಉದ್ಘಾಟನೆ ಮತ್ತು ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಇದೇ ವೇಳೆ ದಾಸ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿರುವ 95 ವರ್ಷದ ಹಿರಿಯರಾದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಅನಂತಾಚಾರ್ಯ ಕಟಗೇರಿ ದಾಸರನ್ನು ಸನ್ಮಾನಿಸಲಾಗುವುದು. ಇದೇ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಸಮಸ್ತ ಭಜನಾ ಮಂಡಳಿ ಒಕ್ಕೂಟ ಉದ್ಘಾಟಿಸಲಾಗುವುದು ಎಂದರು.

ಬಳಿಕ ಸಂಜೆ 7ಕ್ಕೆ ಗಾಯಕ ವಿದ್ವಾನ್ ಹುಸೇನ್ ಸಾಬ್ ಮತ್ತು ಸಂಗಡಿಗರು 'ಹರಿನಾಮ ಸಂಕೀರ್ತನೆ' ಸಾದರಪಡಿಸಲಿದ್ದಾರೆ. ಫೆ.4ರಂದು ಸಂಜೆ 4.30ಕ್ಕೆ ಭಜನಾ ಕಾರ್ಯಕ್ರಮ ನಡೆಯಲಿದ್ದು, ಸಂಜೆ 5.30ಕ್ಕೆ 'ಮಧ್ವಾಚಾರ್ಯರ ಪವಾಡಗಳು' ಕುರಿತು ಪಂಡಿತ್ ಬಾದರಾಯಣಾಚಾರ್ಯ ಪ್ರವಚನ ನೀಡಲಿದ್ದಾರೆ. ಸಂಜೆ 6.30ಕ್ಕೆ ಗಾಯಕರಾದ ಗಣೇಶ್ ದೇಸಾಯಿ, ಮೇಘನಾ ವೆಂಕಟೇಶ್ 'ದಾಸಮಂಜರಿ' ಗಾಯನ ಕಾರ್ಯಕ್ರಮ ಪ್ರಸ್ತುತಪಡಿಸಲಿದ್ದಾರೆ ಎಂದು ತಿಳಿಸಿದರು.

ಫೆ.5ರಂದು ಸಂಜೆ 4.30ಕ್ಕೆ ಭಜನಾ ಕಾರ್ಯಕ್ರಮ ನಡೆಯಲಿದ್ದು, ಸಂಜೆ 5.30ಕ್ಕೆ 'ವ್ಯಾಸ ಸಾಹಿತ್ಯಕ್ಕೆ ದಾಸರ ಕೊಡುಗೆ' ಕುರಿತು ಪಂಡಿತ್ ಅನಿರುದ್ಧಾಚಾರ್ಯ ಪಾಂಡುರಂಗಿ ಪ್ರವಚನ ನೀಡಲಿದ್ದಾರೆ. 'ಶ್ರೀ ಜಗನ್ನಾಥ ದಾಸರು' ಚಲನಚಿತ್ರ ತಂಡದಿಂದ ಸಂವಾದ ಮತ್ತು ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದರು. ಸಮಿತಿ ಖಜಾಂಚಿ ಜಯಶ್ರೀ ಗೋಷ್ಠಿಯಲ್ಲಿದ್ದರು.

ಶ್ರೀನಿವಾಸ್ ಕಾಂಗ್ರೆಸ್ ವಕ್ತಾರ



ಮೈಸೂರು, ಫೆ 1(ಆರ್‌ಕೆ)- ಮೈಸೂರು ನಗರದ ಕಾಂಗ್ರೆಸ್ ವಕ್ತಾರರನ್ನಾಗಿ ಕೆ.ಜಿ. ಕೊಪ್ಪಲಿನ ಟಿ.ಶ್ರೀನಿವಾಸ ಅವರನ್ನು ನೇಮಿಸಲಾಗಿದೆ ಎಂದು ಕೆಪಿಸಿಸಿ ಸಂಪರ್ಕ ಮತ್ತು ಸಾಮಾಜಿಕ ಮಾಧ್ಯಮ ವಿಭಾಗದ ಅಧ್ಯಕ್ಷ ಪ್ರಿಯಾಂಕ ಖರ್ಗೆ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಕಣ್ಣಿನ ತಪಾಸಣಾ ಶಿಬಿರ

ಮೈಸೂರು, ಫೆ. 1- ಮೈಸೂರಿನ ಡಾ. ಅಗರವಾಲ್ಸ್ ಕಣ್ಣಿನ ಆಸ್ಪತ್ರೆ ವತಿಯಿಂದ ಇಎಸ್‌ಐ ಕಾರ್ಡುದಾರರಿಗೆ ಮತ್ತು ಕುಟುಂಬ ವರ್ಗದವರಿಗೆ ಫೆ. 15 ರವರೆಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಕುವೆಂಪುನಗರ ಮತ್ತು ಸಯ್ಯಾಜಿರಾವ್ ರಸ್ತೆಯ ಆಸ್ಪತ್ರೆಯ ಶಾಖೆಗಳಿಗೆ ಭೇಟಿ ನೀಡಿ ಇದರ ಉಪಯೋಗ ಪಡೆದುಕೊಳ್ಳಲು ಕೋರಲಾಗಿದೆ. ಮಾಹಿತಿಗೆ ಮೊ. 8884477956 ಸಂಪರ್ಕಿಸಬಹುದು.

ಮೈಸೂರು ಇಂಗ್ಲಿಷ್ ಥಿಯೇಟರ್ ಫೋರಮ್‌ನಿಂದ

ನಾಳೆಯಿಂದ ಕಾಲೇಜು ವಿದ್ಯಾರ್ಥಿಗಳ ಇಂಗ್ಲಿಷ್ ನಾಟಕೋತ್ಸವ

ಮೂರು ದಿನಗಳಲ್ಲಿ 7 ನಾಟಕಗಳ ಪ್ರದರ್ಶನ



ಮೈಸೂರು,ಫೆ.1(ಪಿಎಂ)-ಹವ್ಯಾಸಿ ರಂಗತಂಡ 'ಮೈಸೂರು ಇಂಗ್ಲಿಷ್ ಥಿಯೇಟರ್ ಫೋರಮ್ (ಎಂಇಟಿಎಫ್)' ವತಿಯಿಂದ ಫೆ.3ರಿಂದ 5ರವರೆಗೆ ಕಾಲೇಜು ವಿದ್ಯಾರ್ಥಿಗಳ ಇಂಗ್ಲಿಷ್ ನಾಟಕೋತ್ಸವ ಆಯೋಜಿಸಲಾಗಿದೆ ಎಂದು ಫೋರಮ್ ಸದಸ್ಯ ಶಶಿಧರ ಡೋಂಗ್ರೆ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಮ್ಮ ಫೋರಮ್ ಪ್ರಾರಂಭವಾಗಿ ವರ್ಷ ಕಳೆದಿದೆ. ಸಕ್ರಿಯವಾಗಿರುವ ಇಂಗ್ಲಿಷ್ ಥಿಯೇಟರ್ ಮೈಸೂರು ನಗರಕ್ಕೆ ಅಗತ್ಯವೆಂದು ಫೋರಮ್ ಸ್ಥಾಪಿಸಲಾಗಿದೆ. ಫೋರಮ್ ವತಿಯಿಂದ ಇದೇ ಮೊದಲ ಬಾರಿಗೆ ಈ ನಾಟಕೋತ್ಸವ ಏರ್ಪಡಿಸಿದ್ದು, ವಿವಿಧ ಕಾಲೇಜು ವಿದ್ಯಾರ್ಥಿ ತಂಡಗಳು ನಾಟಕಗಳ ಪ್ರದರ್ಶನ ನೀಡಲಿವೆ ಎಂದರು.

ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ನಾಟಕಗಳ ಪ್ರದರ್ಶನ ನಡೆಯಲಿದೆ. ಫೆ.3ರಂದು ಮಧ್ಯಾಹ್ನ 3ಕ್ಕೆ ನಾಟಕೋತ್ಸವಕ್ಕೆ ಹಿರಿಯ ರಂಗಕರ್ಮಿ ಪ್ರೊ.ರಾಮೇಶ್ವರಿ ವರ್ಮಾ ಚಾಲನೆ ನೀಡಲಿದ್ದಾರೆ. ಉತ್ಸವದಲ್ಲಿ ನಾಟಕ ಪ್ರದರ್ಶಿಸುವ ಕಾಲೇಜುಗಳ ಪ್ರಾಂಶುಪಾಲರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕಾಲೇಜು ವಿದ್ಯಾರ್ಥಿಗಳಿಗೆ ಇಂಗ್ಲಿಷ್ ರಂಗಭೂಮಿ ಪರಿಚಯಿಸಲು ಈ ನಾಟಕೋತ್ಸವ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಫೆ.3ರಂದು ಸಂಜೆ 5ಕ್ಕೆ ಸಂತ ಜೋಸೆಫ್ ಬಿಎಡ್ ಕಾಲೇಜು ತಂಡವು 'ಡಾಕ್ಟರ್ ಫೌಸ್ಟಸ್' ನಾಟಕ ಪ್ರದರ್ಶಿಸಲಿದೆ. ಬಳಿಕ ಸಂಜೆ 7ಕ್ಕೆ ಎಸ್‌ಡಿಎಂ-ಎಂಎಂಕೆ ಕಾಲೇಜು ತಂಡವು 'ದಿ ರಿಫಂಡ್' ನಾಟಕ ಪ್ರದರ್ಶಿಸಲಿದೆ ಎಂದರು.

ಅಂತೆಯೇ ಫೆ.4ರಂದು ಮಧ್ಯಾಹ್ನ 3ಕ್ಕೆ ಸಂತ ಜೋಸೆಫ್ ಬಿಎಡ್ ಕಾಲೇಜಿನ ವಿದ್ಯಾರ್ಥಿ ತಂಡದಿಂದ 'ಲಾ ವಯೋಲೆನ್ಸಿಯಾ', ಸಂಜೆ 5ಕ್ಕೆ ಕ್ರೆಸ್ಟಾ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್, ಸೈನ್ಸ್ ಅಂಡ್ ಆರ್ಟ್ಸ್ ಕಾಲೇಜು ತಂಡದಿಂದ 'ಮರ್ಚೆಂಟ್ ಆಫ್ ವೆನಿಸ್', ಸಂಜೆ 7ಕ್ಕೆ ಮೈಸೂರು ವಿವಿ ಲಲಿತ ಕಲೆ ಕಾಲೇಜು ತಂಡದಿಂದ 'ಓನ್ ಡಾರ್ಕ್ ನೈಟ್' ನಾಟಕಗಳ ಪ್ರದರ್ಶನ ನಡೆಯಲಿದೆ. ಫೆ.5ರಂದು ಸಂಜೆ 5ಕ್ಕೆ ಸಂತ ಫಿಲೋಮಿನಾ ಕಾಲೇಜು ತಂಡದಿಂದ 'ಡಾಕ್ಟರ್ ಫೌಸ್ಟಸ್', ಸಂಜೆ 7ಕ್ಕೆ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ತಂಡದಿಂದ 'ದಿ ರಿಫಂಡ್' ನಾಟಕಗಳ ಪ್ರದರ್ಶನ ನಡೆಯಲಿದೆ ಎಂದು ವಿವರಿಸಿದರು.

ಫೋರಮ್‌ನ ಮತ್ತೊಬ್ಬ ಸದಸ್ಯ ಡಾ.ಎಂ.ಸಿ.ಮನೋಹರ ಮಾತನಾಡಿ, 7 ಕಾಲೇಜುಗಳಿಂದ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ನಾಟಕಗಳನ್ನು ಪ್ರದರ್ಶಿಸಲಿದ್ದಾರೆ. ರಂಗಮಂದಿರ, ಪ್ರಸಾದನ, ಬೆಳಕು ಮತ್ತು ಆತಿಥ್ಯದ ಜವಾಬ್ದಾರಿಯನ್ನು ಫೋರಮ್ ನಿರ್ವಹಿಸಲಿದೆ. ನಾಟಕ ಪ್ರದರ್ಶನಕ್ಕೆ ವಿದ್ಯಾರ್ಥಿಗಳಿಗೆ ಉಚಿತ ಅವಕಾಶ ಕಲ್ಪಿಸಲಾಗಿದೆ. ಪ್ರತಿವರ್ಷ ಜನವರಿ ಅಥವಾ ಫೆಬ್ರವರಿಯಲ್ಲಿ ಈ ನಾಟಕೋತ್ಸವ ಮುಂದುವರೆಸುವ ಉದ್ದೇಶ ಹೊಂದಿದ್ದೇವೆ ಎಂದರು.

ಫೋರಮ್‌ನ ಸದಸ್ಯೆ ಸೀಮಂತಿನಿ ಬಿ.ಶರ್ಮ ಮಾತನಾಡಿ, ನಾಟಕೋತ್ಸವದ ಪ್ರದರ್ಶನಗಳ ವೀಕ್ಷಣೆಗೆ ಟಿಕೆಟ್ ವ್ಯವಸ್ಥೆ ಮಾಡಲಾಗಿದೆ. ಒಂದು ದಿನದ ಎಲ್ಲಾ ಪ್ರದರ್ಶನ ವೀಕ್ಷಣೆಗೆ ತಲಾ 100 ರೂ. ಹಾಗೂ ಇಡೀ ನಾಟಕೋತ್ಸವದ ಎಲ್ಲಾ ನಾಟಕಗಳನ್ನು ವೀಕ್ಷಿಸಲು ತಲಾ 250 ರೂ. ದರದ ಟಿಕೆಟ್ ವ್ಯವಸ್ಥೆ ಮಾಡಲಾಗಿದೆ. ಇಂಗ್ಲಿಷ್ ರಂಗಭೂಮಿ ಬಗ್ಗೆ ಆಸಕ್ತಿ ಹೊಂದಿರುವ ಎಲ್ಲರನ್ನೂ ಸಂಘಟಿಸುವ ಗುರಿಯನ್ನು ನಮ್ಮ ಫೋರಮ್ ಹೊಂದಿದೆ. ಆಸಕ್ತರು ಫೋರಮ್‌ಗೆ ಸೇರಲು ಕೋರುತ್ತೇವೆ. ನಾಟಕೋತ್ಸವ, ನಮ್ಮ ಸಂಘಟನೆ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 98864 57987 ಅಥವಾ 99012 25074 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು.

ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಸಹಸ್ರ ಚಂದ್ರ ದರ್ಶನ ಶಾಂತಿ ಮಹೋತ್ಸವಕ್ಕೆ ಚಾಲನೆ

ಸಾಲಂಕೃತ ರಥದ ಭವ್ಯ ಮೆರವಣಿಗೆಯಲ್ಲಿ ಸಾಗಿದ ಗಣಪತಿ ಸಚ್ಚಿದಾನಂದ ಶ್ರೀಗಳು





ಇಂದು ಶ್ರೀ ಸಚ್ಚಿದಾನಂದೇಶ್ವರ ಸ್ವಾಮಿಗೆ ರುದ್ರಾಭಿಷೇಕ

ಸಹಸ್ರ ಚಂದ್ರ ದರ್ಶನ ಶಾಂತಿ ಹೋಮದ ಅಂಗವಾಗಿ ಫೆ.2ರ ಗುರುವಾರ ಬೆಳಗ್ಗೆ 7 ಗಂಟೆಗೆ ಪವಮಾನ ಹೋಮ, 10 ಗಂಟೆಗೆ ದೇವತಾ ಹೋಮ, 12 ಗಂಟೆಗೆ ಶ್ರೀ ಸಚ್ಚಿದಾನಂದೇಶ್ವರ ಸ್ವಾಮಿಗೆ ಏಕಾವರ ರುದ್ರಾಭಿಷೇಕ, ಮಧ್ಯಾಹ್ನ 3 ಗಂಟೆಗೆ ರುದ್ರ ಹೋಮ, ಸಂಜೆ 7ಕ್ಕೆ ರುದ್ರ ಹೋಮ ಪೂರ್ಣಾಹುತಿ ನಡೆಯಲಿದೆ.

ಮೈಸೂರು, ಫೆ.1(ಆರ್‌ಕೆಬಿ)– ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ 5 ದಿನಗಳ ಸಹಸ್ರ ಚಂದ್ರ ದರ್ಶನ ಶಾಂತಿ ಮಹೋತ್ಸವಕ್ಕೆ ಬುಧವಾರ ವೈಭವಯುತ ಚಾಲನೆ ದೊರೆಯಿತು. ಬೆಳಗ್ಗೆ ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ನೆರವೇರಿದ ಬಳಿಕ ವಿಷ್ಣು ಸಹಸ್ರ ಪಠಣ ನಡೆಯಿತು. ಆ ನಂತರ ಶ್ರೀಗಳು ಶ್ರೀ ದತ್ತವೆಂಕಟೇಶ್ವರಸ್ವಾಮಿ ದೇವಾಲಯದಿಂದ ಸಾಲಂಕೃತ ರಥದಲ್ಲಿ ಭವ್ಯ ಮೆರವಣಿಗೆ ಮೂಲಕ ನಾದ ಮಂಟಪಕ್ಕೆ ಆಗಮಿಸಿದರು.

ಮೆರವಣಿಗೆಯಲ್ಲಿ ಪೂಜಾ ಕುಣಿತ, ಪಟದ ಕುಣಿತ, ಡೊಳ್ಳು ಕುಣಿತ, ವೀರಗಾಸೆ ಕುಣಿತ, ಗಾರುಡಿ ಗೊಂಬೆಗಳು ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು ಭಾಗವಹಿಸಿ, ಮೆರವಣಿಗೆಗೆ ಮೆರುಗು ನೀಡಿದವು.

ಹಿಂದೆ ಪೂರ್ಣಕುಂಭ ಹೊತ್ತ ಮಹಿಳೆಯರು ಸಾಗುತ್ತಿದ್ದರೆ ಶ್ರೀ ಲಕ್ಷ್ಮೀ ಸಮೇತ ಶ್ರೀ ದತ್ತ ವೆಂಕಟೇಶ್ವರ, ಶ್ರೀ ಆಂಜನೇಯ, ಪಾರ್ವತಿದೇವಿಯ ಉತ್ಸವ ಮೂರ್ತಿಯೊಂದಿಗೆ ಗೋವು, ಕುದುರೆ ಮೆರವಣಿಗೆಯಲ್ಲಿ ಸಾಗಿದವು. ಮೆರವಣಿಗೆಯ ಮಧ್ಯೆ ರಥದಲ್ಲಿ ಆಸೀನರಾದ ಶ್ರೀ ಗಣಪತಿ ಸಚ್ಚಿದಾನಂದ ಶ್ರೀಗಳನ್ನು ಋತ್ವಿಕರು ಹಾಗೂ ಅವಧೂತ ದತ್ತಪೀಠದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರು ನಾದ ಮಂಟಪಕ್ಕೆ ಕರೆತಂದರು.

ನಂತರ ನಾದಮಂಟಪದಲ್ಲಿ ವಾರಂಗಲ್‌ನ ಗೋವಿಂದಸ್ವಾಮಿ ದೇವಾಲಯ ಹಾಗೂ ಇನ್ನಿತರೆ ದೇವಾಲಯಗಳಿಂದ ತರಲಾಗಿದ್ದ ತೀರ್ಥವನ್ನು ಶ್ರೀಗಳಿಗೆ ನೀಡಲಾಯಿತು. ಸ್ವಾಮೀಜಿಯವರು ಹಲವು ದೇವಾಲಯಗಳಿಂದ ಆಗಮಿಸಿದ್ದ ಋತ್ವಿಕರು ಹಾಗೂ ವಿದ್ವಾಂಸರನ್ನು ಗೌರವಿಸಿದರು. ನಂತರ ಕೃಚುರಾಭರಣ, ದಾನಸಂಕಲ್ಪದೊಂದಿಗೆ ಕೂಷ್ಮಾಂಡ ಹೋಮಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ಕಿರಿಯ ಶ್ರೀಗಳಾದ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರು ಭಕ್ತರನ್ನುದ್ದೇಶಿಸಿ ಆಶೀರ್ವಚನ ನೀಡಿ, ಈ ಸಹಸ್ರ ಚಂದ್ರ ದರ್ಶನ ಶಾಂತಿ ಮಹೋತ್ಸವದಲ್ಲಿ ಪಾಲ್ಗೊಳ್ಳುವುದು ಪುಣ್ಯದ ಕೆಲಸ ಎಂದರು.

ಸಾಮಾನ್ಯ ಮನುಷ್ಯರು ಮಾಡಿಕೊಳ್ಳುವ ಸಹಸ್ರ ಚಂದ್ರ ದರ್ಶನ ಶಾಂತಿಯಲ್ಲಿ ಭಾಗವಹಿಸುವುದೇ ಪುಣ್ಯದ ಕೆಲಸ. ಅಂತಹುದರಲ್ಲಿ ಆಧ್ಯಾತ್ಮಿಕ ಮೇರು ಪರ್ವತದಂತಿರುವ ಗುರುಗಳಾದ ಗಣಪತಿ ಸಚ್ಚಿದಾನಂದ ಶ್ರೀಗಳು ಸಹಸ್ರ ಚಂದ್ರ ದರ್ಶನ ಶಾಂತಿ ಮಹೋತ್ಸವದಲ್ಲಿ ಪಾಲ್ಗೊಳ್ಳುವುದು ನಿಜಕ್ಕೂ ಅತ್ಯಂತ ಪುಣ್ಯ ಪ್ರಾಪ್ತಿ ಎಂದು ತಿಳಿಸಿದರು. ಮೂರು ಬಾರಿ ಕೂಷ್ಮಾಂಡ ಹೋಮ, ಸಂಜೆ ಪವಮಾನ ಹೋಮ ನೆರವೇರಿತು.



ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಸಹಸ್ರ ಚಂದ್ರ ದರ್ಶನ ಶಾಂತಿ ಹೋಮ

ಮೈಸೂರು: ಮೈಸೂರು ನಂಜನಗೂಡು ರಸ್ತೆಯಲ್ಲಿರುವ ಶ್ರೀ ಅವಧೂತ ದತ್ತಪೀಠ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಪರಮಪೂಜ್ಯ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ 80ನೇ ವರ್ಷದ ಜನ್ಮದಿನೋತ್ಸವದ ಪ್ರಯುಕ್ತ ಫೆಬ್ರವರಿ 1ರಿಂದ 5ನೇ ತಾರೀಖಿನವರೆಗೆ ಸಹಸ್ರ ಚಂದ್ರ ದರ್ಶನ ಶಾಂತಿ ಹೋಮವನ್ನು ಆಶ್ರಮದಲ್ಲಿ ಏರ್ಪಡಿಸಲಾಗಿದೆ.

ಸಹಸ್ರಚಂದ್ರ ದರ್ಶನ ಕಾರ್ಯಕ್ರಮಗಳು

ನಾಳೆ ಫೆಬ್ರವರಿ 1 ಭೀಷ್ಮ ಏಕಾದಶಿ ಇದ್ದು ಬೆಳಗ್ಗೆ 8 ಗಂಟೆಗೆ ಆಶ್ರಮದ ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನದಲ್ಲಿ ವಿಷ್ಣು ಸಹಸ್ರನಾಮ ಪಠಣ ನಡೆಯಲಿದೆ. 9:00ಗೆ ನರಸಿಂಹ ಕಲ್ಯಾಣ, 10:00 ಗಂಟೆಗೆ ಪೂಜ್ಯ ಶ್ರೀ ಸ್ವಾಮೀಜಿಯವರು ಶ್ರೀ ದತ್ತ ವೆಂಕಟೇಶ್ವರ ದೇವಸ್ಥಾನದಿಂದ ನಾದಮಂಟಪಕ್ಕೆ ರಥದಲ್ಲಿ ಆಗಮಿಸುವರು. 11 ಗಂಟೆಗೆ ದಾನ ಸಂಕಲ್ಪ ಮೂರು ಬಾರಿ ಕೂಷ್ಮಾಂಡ ಹೋಮ ನಡೆಯಲಿದೆ. ಸಂಜೆ ಪವಮಾನ ಹೋಮ ಹಮ್ಮಿಕೊಳ್ಳಲಾಗಿದೆ.

ಫೆಬ್ರವರಿ 2 ದ್ವಾದಶಿ. ಬೆಳಿಗ್ಗೆ 7 ಗಂಟೆಗೆ ಪವಮಾನ ಹೋಮ 10 ಗಂಟೆಗೆ ಸಕಲ ದೇವತಾ ಹೋಮ, 12:00ಗೆ ಶ್ರೀ ಸಚ್ಚಿದಾನಂದೇಶ್ವರ ಸ್ವಾಮಿಗೆ ಏಕಾವರ ರುದ್ರಾಭಿಷೇಕ ನಡೆಯಲಿದೆ. ಮಧ್ಯಾಹ್ನ 3 ಗಂಟೆಗೆ ರುದ್ರ ಹೋಮ ಸಂಜೆ 7:00ಗೆ ರುದ್ರ ಹೋಮ ಪೂರ್ಣಾವತಿ ನಡೆಯಲಿದೆ.

ಫೆಬ್ರವರಿ 3 ತ್ರಯೋದಶಿ. ಬೆಳಗ್ಗೆ 7:00ಗೆ ಆಯುಷ್ಕಾಮೇಷ್ಟಿ ನಡೆಯಲಿದ್ದು 9 ಗಂಟೆಗೆ ಅಷ್ಟದ್ರವ್ಯ ಸಹಿತ ಸಹಸ್ರ ಮೋದಕ ಗಣಪತಿ ಹೋಮ, ಸಂಜೆ 4:00ಗೆ ನಾರಾಯಣ ಹೋಮ, ಸಂಜೆ 7:00ಗೆ ಪೂರ್ಣಾವತಿ ಇರಲಿದೆ.

ಫೆಬ್ರವರಿ 4 ಚತುರ್ದಶಿ. ಬೆಳಗ್ಗೆ 7 ಗಂಟೆಗೆ ಪ್ರಧಾನ ಯಾಗ – ಆಶಿಷ್ಯ ಹೋಮ ಮತ್ತು ಲಕ್ಷ್ಮೀನಾರಾಯಣ ಹೋಮ ನಡೆಯಲಿದೆ. 10 ಗಂಟೆಗೆ ಪೂರ್ಣಾಹುತಿ, ರಾಜ್ಯ ಅವೇಕ್ಷಣ ದಶದಾನ, 11ಗಂಟೆಗೆ ಮಹಾ ಅಭಿಷೇಕ(ಸ್ವರ್ಣ,ಕನಕ ಅಭಿಷೇಕ) ಪರಮಪೂಜ್ಯ ಗಣಪತಿ ಸ್ವಾಮೀಜಿ ಅವರಿಗೆ. ಪೂಜ್ಯ ಶ್ರೀ ಬಾಲ ಸ್ವಾಮೀಜಿಯವರಿಂದ ಸಂಜೆ 4 ಗಂಟೆಗೆ ಪುಣ್ಯ ವಾಚನ, ಸಂಜೆ 6:00ಗೆ ಗುರುಪೂಜೆ ಹಾಗೂ ಸ್ವಾಮೀಜಿಯವರಿಂದ ವಿಶೇಷ ಸಂದೇಶ ರಾತ್ರಿ 8:00ಗೆ ಪೂರ್ಣ ಚಂದ್ರನ ದರ್ಶನ.

ಫೆಬ್ರವರಿ 5 ಮಾಘ ಪೂರ್ಣಿಮಾ. ಬೆಳಗ್ಗೆ 7 ಗಂಟೆಗೆ ಪವಮಾನ ಹೋಮ ಮತ್ತು ದತ್ತ ಹೋಮ ಹಾಗೂ ಕಾರ್ಯ ಸಿದ್ಧಿ ಹನುಮಂತನಿಗೆ ವಿಶೇಷ ಅರ್ಚನೆ ನೆರವೇರಲಿದೆ. ಸಂಜೆ 6 ಶ್ರೀ ಸ್ವಾಮೀಜಿಯವರಿಗೆ ತೆಪ್ಪೋತ್ಸವ ನೆರವೇರಲಿದೆ.

ಫೆ.19ರಂದು ಸರ್ಕಾರಿ ಶಾಲಾ ಮಕ್ಕಳಿಗೆ ವಿವಿಧ ಸ್ಪರ್ಧೆ

ಕಾರ್ಯಕ್ರಮಕ್ಕೆ ದೇಣಿಗೆ ನೀಡಲು ಮನವಿ



ಮೈಸೂರು, ಫೆ.1(ಪಿಎಂ)– ಯೂತ್ ಫಾರ್ ಸೇವಾ ಮೈಸೂರು ಘಟಕದ ವತಿಯಿಂದ ಸರ್ಕಾರಿ ಶಾಲೆ ಮಕ್ಕಳಿಗೆ ಫೆ.19ರಂದು ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಿದ್ದು, ಈ ಕಾರ್ಯಕ್ರಮ ಆಯೋಜನೆಯ ಖರ್ಚು-ವೆಚ್ಚಕ್ಕಾಗಿ ಸಂಘ-ಸಂಸ್ಥೆ, ಉದ್ಯಮಗಳು ಹಾಗೂ ಸಾರ್ವಜನಿಕರು ದೇಣಿಗೆ ನೀಡಬೇಕೆಂದು ಸಂಘಟನೆಯ ರಾಜ್ಯ ಸಂಯೋಜಕ ಬಿ.ಎಸ್.ರಾಘವೇಂದ್ರ ಕೋರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೋಗಾದಿಯ ಅಮೃತ ಮಹಾವಿದ್ಯಾಲಯದ ಆವರಣದಲ್ಲಿ ಸ್ಪರ್ಧೆಗಳನ್ನು ನಡೆಸಲಾಗುವುದು. ಜಿಲ್ಲೆಯ 25 ಸರ್ಕಾರಿ ಶಾಲೆಯ 4ರಿಂದ 7ನೇ ತರಗತಿ ಮಕ್ಕಳನ್ನು ಸಾವಿರ ಸಂಖ್ಯೆಯಲ್ಲಿ ಒಗ್ಗೂಡಿಸಿ ಸ್ಪರ್ಧೆಗಳನ್ನು ನಡೆಸಲು ಯೋಜನೆ ರೂಪಿಸಲಾಗಿದೆ. ಸರ್ಕಾರಿ ಶಾಲೆ ಮಕ್ಕಳ ಶ್ರೇಯೋಭಿವೃದ್ಧಿಯ ಈ ಕಾರ್ಯಕ್ರಮಕ್ಕೆ ಆಸಕ್ತರು ದೇಣಿಗೆ ನೀಡಬಹುದು. ಜೊತೆಗೆ ಆಸಕ್ತರು ಸ್ವಯಂ ಸೇವಕರಾಗಿಯೂ ಸೇವೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಮೊ.ಸಂ. 96060 77016 ಅನ್ನು ಸಂಪರ್ಕಿಸಬಹುದು ಎಂದರು. ಸಂಘಟನೆಯ ಉದಿತ್‌ಗೌಡ, ಯಶ್ವಂತ್‌ಗೌಡ, ದೀಪಕ್, ವಿಷ್ಣು, ಮುಖಂಡ ಮುರಳಿ ಮೋಹನ್ ಗೋಷ್ಠಿಯಲ್ಲಿದ್ದರು.

ಕಾಂಗ್ರೆಸ್‌ಗೆ ಮರಳುವ ನಿರ್ಧಾರ ಪ್ರಕಟಿಸಿದ ಪುರುಷೋತ್ತಮ್

ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸ್ಥಾನ, ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ



ಮೈಸೂರು, ಫೆ.1(ಪಿಎಂ)– ಕಾಂಗ್ರೆಸ್ ತೊರೆದು ಬಿಎಸ್‌ಪಿ ಪಕ್ಷ ಸೇರಿದ್ದ ಮಾಜಿ ಮೇಯರ್ ಪುರುಷೋತ್ತಮ್, ಇದೀಗ ಮತ್ತೆ ಮರಳಿ ಕಾಂಗ್ರೆಸ್ ಸೇರ್ಪಡೆಗೊಳ್ಳುವ ನಿರ್ಧಾರ ಪ್ರಕಟಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ರಾಜ್ಯ ಪ್ರಧಾನ ಕಾರ್ಯದರ್ಶಿ ಸ್ಥಾನ ಮತ್ತು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿದ್ದು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನಾಯಕತ್ವ ಒಪ್ಪಿ ಕಾಂಗ್ರೆಸ್‌ಗೆ ಮರಳುತ್ತಿರುವುದಾಗಿ ತಿಳಿಸಿದರು.

ಕಳೆದ ಒಂದೂವರೆ ವರ್ಷದಿಂದ ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದೇನೆ. ಸದರಿ ಸ್ಥಾನದಲ್ಲಿ ಸಮರ್ಥವಾಗಿ ಕೆಲಸ ಮಾಡಿದ್ದೇನೆ. ಇದೀಗ ಮಲ್ಲಿಕಾರ್ಜುನ ಖರ್ಗೆಯವರ ನಾಯಕತ್ವ ಒಪ್ಪಿ ಕಾಂಗ್ರೆಸ್ ಸೇರುತ್ತಿದ್ದೇನೆ. ಪ್ರಸಕ್ತ ದಿನಗಳಲ್ಲಿ ಹರಿದುಹಂಚಿ ಹೋಗಿರುವ ದಲಿತ ಚಳವಳಿ ನಾಯಕರನ್ನು ಒಗ್ಗೂಡಿಸಲು, ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ವಿರುದ್ಧದ ಆಡಳಿತ ಕೊನೆಗಾಣಿಸಲು ಮತ್ತು ಸಂವಿಧಾನದ ಆಶಯಗಳನ್ನು ಬಲವಾಗಿ ಪುನರ್ ಪ್ರತಿಷ್ಠಾಪಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ಸೇರುತ್ತಿರುವುದಾಗಿ ಹೇಳಿದರು.

ಬಿಜೆಪಿ ಬಗ್ಗುಬಡಿದು ರಾಷ್ಟ್ರದ ಎಲ್ಲಾ ಜನತೆಗೆ ಅತ್ಯುತ್ತಮ ಆಡಳಿತ ನೀಡುವ ಪಕ್ಷವೆಂದರೆ ಅದು ಕಾಂಗ್ರೆಸ್ ಮಾತ್ರ. ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತರೆಲ್ಲರೂ ಒಗ್ಗೂಡಿ ಮುಂದಿನ ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಬೆಂಬಲಿಸುವ ಮೂಲಕ ರಾಷ್ಟ್ರ ಮತ್ತು ರಾಜ್ಯದಲ್ಲಿನ ದುರಾಡಳಿತ ತಪ್ಪಿಸಿ, ಸಂವಿಧಾನಬದ್ಧ ಸರ್ಕಾರ ರಚನೆಗೆ ಕಂಕಣಬದ್ಧರಾಗಬೇಕೆಂದು ಕೋರಿದರು.

ಭಾರತ್ ಜೋಡೋ ಯಾತ್ರೆ ಮೂಲಕ ರಾಜಕೀಯ ಧ್ರುವೀಕರಣಕ್ಕೆ ಸಂಚಲನ ಉಂಟು ಮಾಡಿರುವ ರಾಹುಲ್ ಗಾಂಧಿ, ಐದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಜನಪರ ಆಡಳಿತ ನೀಡಿದ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರಾಗಿ ಪಕ್ಷಕ್ಕೆ ಬಲ ತುಂಬುತ್ತಿರುವ ಡಿ.ಕೆ.ಶಿವಕುಮಾರ್ ಅವರ ಕೈ ಬಲಪಡಿಸಲು ಕಾಂಗ್ರೆಸ್‌ಗೆ ಮರಳುತ್ತಿದ್ದೇನೆ ಎಂದರು. ಕಾಂಗ್ರೆಸ್ ಮುಖಂಡರಾದ ಭುಗತಹಳ್ಳಿ ಕೆ.ಮಣಿಯಯ್ಯ, ಅಶೋಕಪುರಂ ರಾಜು, ನಾಡನಹಳ್ಳಿ ಪ್ರಸಾದ್, ಚೋರನಹಳ್ಳಿ ದೇವಣ್ಣ ಗೋಷ್ಠಿಯಲ್ಲಿದ್ದರು.

ಇಂಡಿಯನ್ ನ್ಯೂ ಕಾಂಗ್ರೆಸ್ ಪಾರ್ಟಿ ಅಭ್ಯರ್ಥಿಗಳ ಪಟ್ಟಿ ರೆಡಿ



ಮೈಸೂರು,ಫೆ.1(ಪಿಎಂ)– ಈ ಬಾರಿಯ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಇಂಡಿಯನ್ ನ್ಯೂ ಕಾಂಗ್ರೆಸ್ ಪಾರ್ಟಿ ಈಗಾಗಲೇ 140ಕ್ಕೂ ಹೆಚ್ಚು ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿದ್ದು, ಮೇ 2ರೊಳಗೆ ಪಟ್ಟಿ ಬಿಡುಗಡೆ ಮಾಡಲಾಗುವುದು ಎಂದು ಪಾರ್ಟಿಯ ರಾಷ್ಟ್ರೀಯ ಅಧ್ಯಕ್ಷ ಅಯೂಬ್‌ಖಾನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜನ ಬಯಸುವ ಪಕ್ಷದೊಂದಿಗೆ ಹೊಂದಾಣಿ ಮಾಡಿಕೊಳ್ಳಲು ಹಾಗೂ ಬೆಂಬಲ ನೀಡಲು ಪಕ್ಷ ಸಿದ್ಧವಾಗಿದೆ. ನಾನು ಮೈಸೂರಿನ ಎನ್‌ಆರ್ ಕ್ಷೇತ್ರದಲ್ಲಿ ಸ್ಪರ್ಧೆ ಮಾಡಲು ನಿರ್ಧರಿಸಿದ್ದೇನೆ. ಕ್ಷೇತ್ರದ ಮತದಾರರ ಬೆಂಬಲಕ್ಕಾಗಿ ಶೀಘ್ರದಲ್ಲಿ ಪಾದಯಾತ್ರೆ ನಡೆಸಲಿದ್ದೇನೆ. ಈ ಕ್ಷೇತ್ರದಲ್ಲಿ ಹಾಲಿ ಶಾಸಕರ ಅಭಿವೃದ್ಧಿ ಶೂನ್ಯವಾಗಿದೆ ಎಂದು ದೂರಿದರು.

ಜಯಪುರ ಗ್ರಾಪಂ ನೂತನ ಅಧ್ಯಕ್ಷರಾಗಿ ಜಯಮ್ಮ ಆಯ್ಕೆ



ಮೈಸೂರು, ಫೆ.1– ತಾಲೂಕಿನ ಜಯಪುರ ಗ್ರಾಮ ಪಂಚಾಯ್ತಿ ನೂತನ ಅಧ್ಯಕ್ಷರಾಗಿ ಸೋಲಿಗರ ಕಾಲೋನಿ ಗ್ರಾಮದ ಜಯಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ತಿಂಗಳ ಹಿಂದೆ ಅಧ್ಯಕ್ಷರಾಗಿದ್ದ ಜಯಪುರದ ಎಚ್.ಎನ್.ಮಹಾದೇವಿ ಜವರನಾಯಕ ಅವರು ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ನಡೆದ ಚುನಾವಣೆಯಲ್ಲಿ 20 ಸದಸ್ಯರ ಪೈಕಿ 16 ಮಂದಿ ಜಯಮ್ಮ ಅವರನ್ನು ಬೆಂಬಲಿಸುವ ಮೂಲಕ ಅವರನ್ನು ನೂತನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು. ರೇಷ್ಮೆ ಇಲಾಖೆಯ ಸಹಾಯಕ ನಿರ್ದೇಶಕ ದೇವೇಂದ್ರಪ್ಪ ಚುನಾವಣಾಧಿಕಾರಿಯಾಗಿದ್ದರು.

ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಜಯಮ್ಮ ಅವರನ್ನು ಶಾಸಕ ಜಿ.ಟಿ.ದೇವೇಗೌಡರು ಹಾಗೂ ಇನ್ನಿತರ ಮುಖಂಡರು ಅಭಿನಂದಿಸಿದರು. ಈ ವೇಳೆ ಜಯಪುರ ಗ್ರಾಪಂ ಸದಸ್ಯರಾದ ಮರಿಸಿದ್ದೇಗೌಡ, ಮಹದೇವಯ್ಯ, ಮಹಾದೇವಿ, ಬಸವಣ್ಣ, ಸುಮಾ, ಬೈರೇಶ್, ಹರೀಶ್, ನವೀನಮ್ಮ, ಬಿ.ರೇಣುಕಾ, ನಾಗರಾಜು, ಅಭಿವೃದ್ಧಿ ಅಧಿಕಾರಿ ಬಸವಣ್ಣ, ಕಾರ್ಯದರ್ಶಿ ನಾಗವೇಣಿ, ಲೆಕ್ಕಸಹಾಯಕ ಆನಂದೇಗೌಡ, ಮುಖಂಡರಾದ ಜೆ.ಎಂ ಜವರನಾಯಕ, ಅಬ್ದುಲ್ ಮುತಾಲಿಫ್ ಹಾಗೂ ಸೋಲಿಗರ ಕಾಲೋನಿ ಗ್ರಾಮಸ್ಥರು ಉಪಸ್ಥಿತರಿದ್ದರು.

ಮುಖೇಶ್ ಅಂಬಾನಿ, ಮತ್ತೆ ಭಾರತದ ನಂ.1 ಶ್ರೀಮಂತ



ನವದೆಹಲಿ, ಫೆ.1– ಫೋರ್ಬ್ಸ್ ರಿಯಲ್-ಟೈಮ್ ಬಿಲಿಯನೇರ್‌ಗಳ ಪಟ್ಟಿ ಬಿಡುಗಡೆ ಮಾಡಿದ್ದು, ರಿಲಯನ್ಸ್ ಇಂಡಸ್ಟ್ರೀಸ್ ಅಧ್ಯಕ್ಷ ಮುಖೇಶ್ ಅಂಬಾನಿ ಅವರು ಉದ್ಯಮಿ ಗೌತಮ್ ಅದಾನಿಯನ್ನು ಹಿಂದಿಕ್ಕಿ ಮತ್ತೆ ವಿಶ್ವದ ಅತ್ಯಂತ ಶ್ರೀಮಂತ ಭಾರತೀಯ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ.

ಅದಾನಿ ಗ್ರೂಪ್ ಅಧ್ಯಕ್ಷ ಗೌತಮ್ ಅದಾನಿ ಅವರನ್ನು ಹಿಂದಿಕ್ಕಿದ ಮುಖೇಶ್ ಅಂಬಾನಿ ಅವರು 84.3 ಶತಕೋಟಿ ಡಾಲರ್ ನಿವ್ವಳ ಮೌಲ್ಯದೊಂದಿಗೆ ವಿಶ್ವದ ಅತ್ಯಂತ ಶ್ರೀಮಂತ ಭಾರತೀಯ ಎಂದು ಗುರುತಿಸಿಕೊಂಡಿದ್ದಾರೆ. ಅಮೆರಿಕ ಮೂಲದ ಹೂಡಿಕೆ ಸಂಶೋಧನಾ ಸಂಸ್ಥೆ ಹಿಂಡನ್‌ಬರ್ಗ್ ರಿಸರ್ಚ್‌ನ ವರದಿಯ ಬಳಿಕ ಅದಾನಿ ಕಂಪನಿಯ ಷೇರುಗಳ ಬೆಲೆಯಲ್ಲಿ ಭಾರಿ ಕುಸಿತವಾಗಿದ್ದು, ಅದಾನಿ 9ನೇ ಸ್ಥಾನಕ್ಕೆ ಕುಸಿದಿದ್ದಾರೆ. ವಿಶ್ವದ ಮೊದಲ 500 ಶ್ರೀಮಂತ ಪುರುಷರು ಮತ್ತು ಮಹಿಳೆಯರ ಪಟ್ಟಿಯಲ್ಲಿ, ಅದಾನಿ 2023ನೇ ವರ್ಷದಲ್ಲಿ ಅತಿದೊಡ್ಡ ಕುಸಿತ ಕಂಡಿದ್ದಾರೆ. ವಿಶ್ವದ ಹತ್ತು ಶ್ರೀಮಂತರ ಪಟ್ಟಿಯಲ್ಲಿ ಸದ್ಯ ಬರ್ನಾರ್ಡ್ ಅರ್ನಾಲ್ಟ್ ಮೊದಲ ಸ್ಥಾನದಲ್ಲಿದ್ದಾರೆ. ಎಲಾನ್ ಮಸ್ಕ್ ಅವರು 178.3 ಬಿಲಿಯನ್ ಡಾಲರ್ ನಿವ್ವಳ ಆದಾಯದೊಂದಿಗೆ ಎರಡನೇ ಸ್ಥಾನದಲ್ಲಿದ್ದು, 126.3 ಬಿಲಿಯನ್ ಡಾಲರ್ ಆದಾಯ ಹೊಂದಿರುವ ಜೆಫ್ ಬಿಜೋಸ್ ಅವರು ಮೂರನೇ ಸ್ಥಾನದಲ್ಲಿದ್ದಾರೆ.



ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಹರೀಶ್ ಗೌಡ ಅವರಿಗೆ ಮೈಮುಲ್ ಮಾಜಿ ಅಧ್ಯಕ್ಷ ಹಾಗೂ ಹಾಲಿ ನಿರ್ದೇಶಕ ಕೆ. ಉಮಾಶಂಕರ್ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಶಾಸಕ ಜಿ.ಟಿ. ದೇವೇಗೌಡ, ಬೆಳವಾಡಿ ಶಿವಮೂರ್ತಿ, ಮುಖಂಡರಾದ ಲೋಕೇಶ್, ಗೋಪಾಲ್‌ಪುರದ ಬಸವೇಗೌಡ, ರಾಜಶೇಖರ್ ಮೂರ್ತಿ ಹಾಗೂ ಇನ್ನಿತರ ಜೆಡಿಎಸ್ ಮುಖಂಡರು ಉಪಸ್ಥಿತರಿದ್ದರು.



ಶ್ರೀ ಮಡಿವಾಳ ಮಾಚಿದೇವರ ಜಯಂತಿ ಅಂಗವಾಗಿ ಮೈಸೂರು ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಮೆರವಣಿಗೆ ನಡೆಸಲಾಯಿತು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ಹಾಗೂ ಕಲ್ಪವೃಕ್ಷ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಪಿ.ಪ್ರಶಾಂತ್‌ಗೌಡ, ಮಡಿವಾಳ ಸಮಾಜದ ಮುಖಂಡರಾದ ರವಿ, ವೆಂಕಟೇಶ್, ನಾಗೇಶ್ ಇತರರು ಮಾಚಿದೇವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ನಿಧನ



ಎಂ.ಪಾರ್ವತಮ್ಮ

ಮೈಸೂರು: ಶ್ರೀ ಕೃಷ್ಣ ರಾಜೇಂದ್ರ ಸಹಕಾರ ಬ್ಯಾಂಕ್ ಮಾಜಿ ಅಧ್ಯಕ್ಷರು, ಹಾಲಿ ನಿರ್ದೇಶಕರು ಹಾಗೂ ಕಾಂಗ್ರೆಸ್ ಮುಖಂಡರಾದ ಶ್ರೀಮತಿ ಎಂ.ಪಾರ್ವತಮ್ಮ ಅವರು ಇಂದು ಸಂಜೆ ನಿಧನರಾದರು. ಇವರಿಗೆ 74 ವರ್ಷ ವಯಸ್ಸಾಗಿತ್ತು.

ಮೃತರು ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ, ಸ್ನೇಹಿತರನ್ನು ಅಗಲಿದ್ದಾರೆ. ಇವರು ಮೈಸೂರು ವಿಜಯ ನಗರ 3ನೇ ಹಂತದ ನಿವಾಸಿಯಾಗಿದ್ದು, ಇವರ ಅಂತ್ಯಕ್ರಿಯೆ ನಾಳೆ (ಗುರುವಾರ) ಮಧ್ಯಾಹ್ನ 2 ಗಂಟೆಗೆ ಮೈಸೂರು ವಿದ್ಯಾರಣ್ಯಪುರಂ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಇವರ ನಿಧನಕ್ಕೆ ಕೆ.ಆರ್.ಬ್ಯಾಂಕ್ ಆಡಳಿತ ಮಂಡಳಿ ತೀವ್ರ ಸಂತಾಪ ವ್ಯಕ್ತಪಡಿಸಿದೆ. ಮೃತರ ಗೌರವಾರ್ಥ ನಾಳೆ (ಗುರುವಾರ) ಬ್ಯಾಂಕಿಗೆ ರಜೆ ಘೋಷಿಸಲಾಗಿದೆ.

ಗಿಲ್ ಘರ್ಜನೆಗೆ ಕಿವೀಸ್ ತತ್ತರ: ಟಿ20 ಸರಣಿ ಗೆದ್ದ ಭಾರತ



ರನ್ ದಾಪುಗಾಲು
50 ರನ್ 33 ಎಸೆತ
100 ರನ್ 58 ಎಸೆತ
150 ರನ್ 87 ಎಸೆತ
200 ರನ್ 104 ಎಸೆತ
234 ರನ್ 120 ಎಸೆತ

ಅಹಮದಾಬಾದ್, ಫೆ.1– ಶುಭಮನ್ ಗಿಲ್ ಬ್ಯಾಟಿಂಗ್ ವೈಭವ ಮತ್ತು ಟೀಂ ಇಂಡಿಯಾದ ಬೌಲರ್‌ಗಳ ಮಾರಕ ದಾಳಿಗೆ ಕಂಗಾಲಾದ ಪ್ರವಾಸಿ ನ್ಯೂಜಿಲೆಂಡ್ 3ನೇ ಟಿ20 ಪಂದ್ಯದಲ್ಲಿ ಕೇವಲ 66 ರನ್‌ಗಳಿಗೆ ಆಲೌಟ್ ಆಯಿತು. ಈ ಮೂಲಕ ಭಾರತ 168 ರನ್‌ಗಳ ಭರ್ಜರಿ ಜಯದೊಂದಿಗೆ ಟಿ20 ಸರಣಿಯನ್ನು 2–1 ಅಂತರದಲ್ಲಿ ತನ್ನದಾಗಿಸಿಕೊಂಡಿದೆ.

235 ರನ್‌ಗಳ ಬೃಹತ್ ಗುರಿ ಬೆನ್ನಟ್ಟಿದ ನ್ಯೂಜಿಲೆಂಡ್ ಬ್ಯಾಟ್ಸ್‌ಮನ್‌ಗಳು ಬಂದ ಪುಟ್ಟ ಹೋದ ಪುಟ್ಟ ಎಂಬಂತೆ ಒಬ್ಬರ ಹಿಂದೆ ಒಬ್ಬರಂತೆ ಪೆವಿಲಿಯನ್ ಪರೇಡ್ ನಡೆಸಿದರು. ಪರಿಣಾಮ ಕೇವಲ 12.1 ಓವರ್‌ಗಳಲ್ಲಿ 66 ರನ್‌ಗಳಿಗೆ ಆಲೌಟ್ ಆಯಿತು.

ನ್ಯೂಜಿಲೆಂಡ್ ಪರ ಡೇರಿಲ್ ಮಿಚೆಲ್ 35 ರನ್ (25 ಎಸೆತ, 1 ಬೌಂಡರಿ, 3 ಸಿಕ್ಸ್) ಮತ್ತು ಮಿಚೆಲ್ ಸ್ಯಾಂಟ್ನರ್ 13 ರನ್ (13 ಎಸೆತ, 1 ಬೌಂಡರಿ) ಸಿಡಿಸಿದನ್ನು ಹೊರತುಪಡಿಸಿ ಉಳಿದ 5 ಮಂದಿ ಆಟಗಾರರು ಒಂದಂಕಿ ಮೊತ್ತಕ್ಕೆ ಔಟ್ ಆದರೆ ಮೂವರು ಶೂನ್ಯ ಸುತ್ತಿದರು.

ಈ ಮೊದಲು ಟಾಸ್ ಗೆದ್ದ ಭಾರತ ಮೊದಲು ಬ್ಯಾಟಿಂಗ್ ಮಾಡಲು ನಿರ್ಧರಿಸಿತು. ಆದರೆ ಉತ್ತಮ ಆರಂಭ ಪಡೆಯುವಲ್ಲಿ ವಿಫಲವಾಯಿತು. ಇಶಾನ್ ಕಿಶನ್ ಕೇವಲ 1 ರನ್‌ಗೆ ವಿಕೆಟ್ ಒಪ್ಪಿಸಿ ಹೊರನಡೆದರು. ಬಳಿಕ ಒಂದಾದ ರಾಹುಲ್ ತ್ರಿಪಾಠಿ ಮತ್ತು ಶುಭಮನ್ ಗಿಲ್ ನ್ಯೂಜಿಲೆಂಡ್ ದಾಳಿಯನ್ನು ದಿಟ್ಟವಾಗಿ ಎದುರಿಸಿದರು.

ಈ ಜೋಡಿ ಹೊಡಿಬಡಿ ಆಟದ ಮೂಲಕ ತಂಡದ ರನ್ ಹೆಚ್ಚಿಸಿತು. 2ನೇ ವಿಕೆಟ್‌ಗೆ ಈ ಜೋಡಿ 80 ರನ್ (42 ಎಸೆತ) ಜೊತೆಯಾಟವಾಡಿ ಬೇರ್ಪಟ್ಟಿತು. ತ್ರಿಪಾಠಿ 44 ರನ್ (22 ಎಸೆತ, 4 ಬೌಂಡರಿ, 3 ಸಿಕ್ಸ್) ಸಿಡಿಸಿ ದೊಡ್ಡ ಹೊಡೆತಕ್ಕೆ ಕೈ ಹಾಕಿ ವಿಕೆಟ್ ಒಪ್ಪಿಸಿ ಹೊರ ನಡೆದರು. ಬಳಿಕ ಬಂದ ಸೂರ್ಯಕುಮಾರ್ ಯಾದವ್ ಬಿರುಸಿನ 24 ರನ್ (13 ಎಸೆತ, 1 ಬೌಂಡರಿ, 2 ಸಿಕ್ಸ್) ಸಿಡಿಸಿ ಔಟ್ ಆದರು.

ಗಿಲ್ ಘರ್ಜನೆ: ಇತ್ತ ಶುಭಮನ್ ಗಿಲ್ ಅಬ್ಬರ ಮಾತ್ರ ಕಡಿಮೆಯಾಗಲಿಲ್ಲ. ನ್ಯೂಜಿಲೆಂಡ್ ಬೌಲರ್‌ಗಳ ಬೆವರಿಳಿಸಿದ ಗಿಲ್ ಸ್ಫೋಟಕ ಆಟಕ್ಕೆ ಮುಂದಾದರು. ನಾಯಕ ಪಾಂಡ್ಯ ಜೊತೆಗೂಡಿ ಸಿಡಿಲಬ್ಬರದ ಬ್ಯಾಟಿಂಗ್ ನಡೆಸಿದ ಗಿಲ್ ಟಿ20 ಕ್ರಿಕೆಟ್‌ನಲ್ಲಿ ಚೊಚ್ಚಲ ಶತಕ ಸಿಡಿಸಿ ಮಿಂಚಿದರು. ಗಿಲ್ ಶತಕದ ಬೆನ್ನಲ್ಲೇ ಪಾಂಡ್ಯ 30 ರನ್ (17 ಎಸೆತ, 4 ಬೌಂಡರಿ, 1 ಸಿಕ್ಸ್) ಬಾರಿಸಿ ಔಟ್ ಆದರು. ಈ ಮೊದಲು ಈ ಜೋಡಿ 4ನೇ ವಿಕೆಟ್‌ಗೆ 103 ರನ್ (40 ಎಸೆತ) ಜೊತೆಯಾಟವಾಡಿತು. ಅಂತಿಮವಾಗಿ ಗಿಲ್ ಅಜೇಯ 126 ರನ್ (63 ಎಸೆತ, 12 ಬೌಂಡರಿ, 7 ಸಿಕ್ಸ್) ನೆರವಿನಿಂದ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 234 ರನ್‌ಗಳ ಬೃಹತ್ ಮೊತ್ತ ಪೇರಿಸಿತು.

ಕೊಹ್ಲಿ, ರೋಹಿತ್ ಜೊತೆ ಎಲೈಟ್ ಪಟ್ಟಿಗೆ ಗಿಲ್ ಸೇರ್ಪಡೆ

ಅಹಮದಾಬಾದ್, ಫೆ.1– ಯುವ ಭರವಸೆಯ ಆರಂಭಿಕ ಬ್ಯಾಟರ್ ಶುಭಮನ್ ಗಿಲ್, ಟ್ವೆಂಟಿ-20 ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಚೊಚ್ಚಲ ಶತಕ ಸಾಧನೆ ಮಾಡಿದ್ದಾರೆ.



ಎಲ್ಲ ಮಾದರಿಗಳಲ್ಲೂ ಶತಕ ಸಾಧನೆ: ಇದರೊಂದಿಗೆ ಶುಭಮನ್ ಗಿಲ್, ಎಲ್ಲ ಪ್ರಕಾರದ ಕ್ರಿಕೆಟ್‌ನಲ್ಲಿ (ಟ್ವೆಂಟಿ-20, ಏಕದಿನ, ಟೆಸ್ಟ್) ಶತಕ ಸಾಧನೆ ಮಾಡಿದ್ದಾರೆ. ಈ ಮೂಲಕ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ, ಸುರೇಶ್ ರೈನಾ, ಕೆ.ಎಲ್ ರಾಹುಲ್ ಅವರೊಂದಿಗೆ ಎಲೈಟ್ ಪಟ್ಟಿಗೆ ಸೇರಿದ್ದಾರೆ. ಅಲ್ಲದೆ ಭಾರತದ ಪರ ಈ ಸಾಧನೆ ಮಾಡಿದ ಐದನೇ ಬ್ಯಾಟರ್ ಎನಿಸಿದ್ದಾರೆ.

ಅತ್ಯಧಿಕ ವೈಯಕ್ತಿಕ ಸ್ಕೋರ್: ಭಾರತದ ಪರ ಟ್ವೆಂಟಿ-20 ಕ್ರಿಕೆಟ್‌ನಲ್ಲಿ ಅತ್ಯಧಿಕ ವೈಯಕ್ತಿಕ ಮೊತ್ತ ಗಳಿಸಿದ ದಾಖಲೆಗೂ ಗಿಲ್ ಭಾಜನರಾದರು. 63 ಎಸೆತಗಳನ್ನು ಎದುರಿಸಿದ ಗಿಲ್ 12 ಬೌಂಡರಿ ಹಾಗೂ 7 ಸಿಕ್ಸರ್ ನೆರವಿನಿಂದ 126 ರನ್ ಗಳಿಸಿ ಔಟಾಗದೆ ಉಳಿದರು.

2022ರಲ್ಲಿ ದುಬೈನಲ್ಲಿ ಅಫ್ಘಾನಿಸ್ತಾನದ ವಿರುದ್ಧ ವಿರಾಟ್ ಕೊಹ್ಲಿ ಅಜೇಯ 122 ರನ್ ಗಳಿಸಿರುವುದು ಈವರೆಗಿನ ವೈಯಕ್ತಿಕ ಗರಿಷ್ಠ ಸ್ಕೋರ್ ಆಗಿತ್ತು. 2017ರಲ್ಲಿ ರೋಹಿತ್ ಶರ್ಮಾ, ಶ್ರೀಲಂಕಾ ವಿರುದ್ಧ ಇಂದೋರ್‌ನಲ್ಲಿ ಗಳಿಸಿದ್ದ 118 ರನ್ ಸಾಧನೆಯನ್ನು ಗಿಲ್ ಹಿಮ್ಮೆಟ್ಟಿಸಿದ್ದಾರೆ.

ನ್ಯೂಜಿಲೆಂಡ್ ವಿರುದ್ಧ ಗರಿಷ್ಠ ವೈಯಕ್ತಿಕ ಸ್ಕೋರ್: ನ್ಯೂಜಿಲೆಂಡ್ ವಿರುದ್ಧ ಏಕದಿನ ಹಾಗೂ ಟ್ವೆಂಟಿ-20 ಕ್ರಿಕೆಟ್‌ನಲ್ಲಿ ವೈಯಕ್ತಿಕ ಗರಿಷ್ಠ ಮೊತ್ತ ಗಳಿಸಿದ ಹಿರಿಮೆಗೂ ಗಿಲ್ ಪಾತ್ರರಾದರು. ಇತ್ತೀಚೆಗಷ್ಟೇ ಅಂತ್ಯಗೊಂಡ ಏಕದಿನ ಸರಣಿಯಲ್ಲಿ ಗಿಲ್ ಚೊಚ್ಚಲ ದ್ವಿಶತಕ (208) ಗಳಿಸಿದ್ದರು.

54 ಎಸೆತಗಳಲ್ಲಿ ಶತಕ: ಶುಭಮನ್ ಗಿಲ್ 54 ಎಸೆತಗಳಲ್ಲಿ ಚೊಚ್ಚಲ ಶತಕದ ಮೈಲಿಗಲ್ಲು ತಲುಪಿದರು. 35 ಎಸೆತಗಳಲ್ಲಿ ಅರ್ಧಶತಕದ ಗಡಿ ದಾಟಿದ್ದ ಗಿಲ್, ಬಳಿಕದ 50 ರನ್‌ಗಾಗಿ ಕೇವಲ 19 ಎಸೆತಗಳನ್ನಷ್ಟೇ ಎದುರಿಸಿದರು.

ಬನ್ನೂರಲ್ಲಿ ಹೇಮಾದ್ರಂಭ ಜಾತ್ರಾ ಮಹೋತ್ಸವ





ಬನ್ನೂರು, ಫೆ.1– ತಲಕಾಡು ಗಂಗರ ಆಳ್ವಿಕೆಯ ಅವಧಿಯಲ್ಲಿ ಎರಡನೇ ರಾಜಧಾನಿ ವಹ್ನಿಪುರ ಎಂದೇ ಕರೆಯಲ್ಪಟ್ಟಿದ್ದ ಬನ್ನೂರಿನಲ್ಲಿ ಆಚರಿಸುವ ಗ್ರಾಮದ ಅಧಿದೇವತೆ ಹೇಮಾದ್ರಂಭ ದೇವಿಯ ಜಾತ್ರಾ ಮಹೋತ್ಸವ ಸಂಭ್ರಮ. ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ ಇಡೀ ಊರಿನಲ್ಲೇ ಮಾಂಸಾಹಾರವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಪಟ್ಟಣದ ಅಧಿದೇವತೆ ಹೇಮಾದ್ರಂಭ ಜಾತ್ರೆ ಸುತ್ತಮುತ್ತಲೆಲ್ಲಾ ಪ್ರಸಿದ್ಧಿ ಪಡೆದಿದ್ದು, ಜಾತ್ರೆಯಲ್ಲಿ ನಡೆಯುವ ಬಂಡೀಉತ್ಸವ, ರಥೋತ್ಸವ ಸೇರಿದಂತೆ ತೆಪ್ಪೋತ್ಸವ ಬಲು ಆಕರ್ಷಣೀಯವಾಗಿದೆ. ಎಲ್ಲ ವರ್ಗದವರು ಒಟ್ಟಾಗಿ ಸೇರಿಕೊಂಡು ಆಚರಿಸುವ ಹಬ್ಬ ಇದಾಗಿದೆ. ಗ್ರಾಮದ ಹಬ್ಬಕ್ಕೆಂದೇ ನೆಂಟರು, ಬಂಧುಬಳಗದವರು ಪಟ್ಟಣಕ್ಕೆ ಆಗಮಿಸುತ್ತಿದ್ದು, ಎಲ್ಲರ ಮನೆಗಳು ಹಬ್ಬಕ್ಕೆಂದೇ ಸುಣ್ಣಬಣ್ಣಗಳಿಂದ ಕಂಗೊಳಿಸುತ್ತಿದೆ.

ಜಾತ್ರೆಯ ಪ್ರಮುಖ ಕಾರ್ಯಗಳು: ಫೆ.3 ರಂದು ಆದಿಜಾಂಬವ ಜನಾಂಗದಿಂದ ಹಸಿರು ಚಪ್ಪರದ ಸೇವಾರ್ಥ ಯಳಂಗಾರ್ ಜನಾಂಗದವರಿಂದ ಅನ್ನಡಿಕೆ ಬಂಡಿ ಸೇವೆ ಜರುಗಲಿದ್ದು, ರಾತ್ರಿ ನಾಡಗೌಡ ಬಿ.ಸಿ. ಪಾರ್ಥಸಾರಥಿಯವರಿಂದ ಅಂಕುರಾರ್ಪಣೆಯ ಸೇವೆ ಜರುಗಲಿದೆ.

ಫೆ4ರಂದು ಅಭಿಷೇಕ, ಅರ್ಚನೆ ಹರಿಜನ ಬಾಂಧವರಿಂದ ಅನ್ನ ನೈವೇದ್ಯಕ್ಕೆ ಆಹ್ವಾನದ ಕಾರ್ಯ ಜರುಗಲಿದೆ. ಫೆ.5 ರಂದು ಮಾಘಶುದ್ಧ ಪೌರ್ಣಿಮಿಯಂದು ಅಭಿಷೇಕ, ಮಹಾಮಂಗಳಾರತಿ, ನಾಯಕರ ದೇವಿ ತೋಪಿನ ಮಡುವಿನಲ್ಲಿ ಅವಭೃತ ಸ್ನಾನ ಮತ್ತು ಹರಿಜನ ಬಾಂಧವರಿಂದ ಅನ್ನ ನೈವೇದ್ಯ ನಡೆಯಲಿದ್ದು, ಮಧ್ಯಾಹ್ನ ಪ್ರಸಿದ್ಧ ಬಂಡೀ ಜಾತ್ರೆಯು, ರಾತ್ರಿ ಶಿವಜ್ಯೋತಿಪಣ ಉತ್ಸವ ನಡೆಯಲಿದೆ.

ಫೆ6ರಂದು ದಿವಂಗತ ಸುಬ್ರಹ್ಮಣ್ಯ ಆಚಾರ್ ಕುಟುಂಬದವರಿಂದ ಮಂಟಪೋತ್ಸವ ನಡೆಯಲಿದೆ. ಫೆ.7ರಂದು ಬಣಜಿಗ ಶೆಟ್ಟರ ಜನಾಂಗದವರಿಂದ ಪಲ್ಲಕ್ಕಿ ಉತ್ಸವ ನಡೆಯಲಿದೆ. ಫೆ.8ರಂದು ಈಡಿಗ ಜನಾಂಗದವರಿಂದ ಶೇಷ ಗಜವಾಹನೋತ್ಸವ, ಫೆ.9ರಂದು ನಾಯಕ ಜನಾಂಗದವರಿಂದ ಗಜವಾಹನೋತ್ಸವ, ಫೆ10ರಂದು ವೀರಶೈವ ಜನಾಂಗದವರಿಂದ ವಿಭುವೋತ್ಸವ, ಫೆ11ರಂದು ಪೊಲೀಸ್ ಇಲಾಖೆಯಿಂದ ಗರುಡೋತ್ಸವ ಕಾರ್ಯ ನಡೆಯಲಿದೆ.

ಫೆ12ರಂದು ಪ್ರಾತಃಕಾಲ ಹೋಮ ಅಭಿಷೇಕ, ಸಂಪ್ರೋಕ್ಷಣೆ ನಡೆದು ಒಕ್ಕಲಿಗ ಜನಾಂಗದವರಿಂದ ಹೇಮಾದ್ರಂಭ ದೇವಿಯ ದಿವ್ಯ ಮಹಾರಥೋತ್ಸವ ಜರುಗಲಿದ್ದು, ಸಾಯಂಕಾಲ ತೇರಡಿ ಉತ್ಸವವು ಬ್ರಾಹ್ಮಣರ ಸಂಘದ ವತಿಯಿಂದ ನಡೆಯಲಿದೆ. ಪೌರ ಕಾರ್ಮಿಕರಿಂದ ವಾದ್ಯವು ಮೊಳಗಲಿದೆ.

ಹಾಗೆಯೇ ಫೆ13ರಂದು ಅಭಿಷೇಕ, ಮಹಾ ಮಂಗಳಾರತಿ ಮತ್ತು ಮಧ್ಯಾಹ್ನ ಮಾಕನಹಳ್ಳಿ ಗ್ರಾಮಸ್ಥರಿಂದ ನಾಯಕ ಜನಾಂಗದ ಸಹಕಾರದೊಂದಿಗೆ ತೆಪ್ಪೋತ್ಸವ ಜರುಗಲಿದೆ. ರಾತ್ರಿ ನಯನಕ್ಷತ್ರಿಯ ಜನಾಂಗದವರಿಂದ ಪಲ್ಲಕ್ಕಿ ಉತ್ಸವವು ನಡೆಯಲಿದೆ.

ಫೆ14ರಂದು ವೈಮಾಳಿಗೋತ್ಸವ ನಡೆಯಲಿದೆ. ಫೆ15ರಂದು ಅಭಿಷೇಕ, ಅರ್ಚನೆ ಮಹಾಮಂಗಳಾರತಿಯ ಕಾರ್ಯಕ್ರಮವು ನಡೆಯಲಿದ್ದು, ಜಾತ್ರೆಗೆ ತೆರೆಬೀಳಲಿದೆ.

ಜೆಡಿಎಸ್ ರಾಜ್ಯ ವಕ್ತಾರರಾಗಿ ನೇಮಕ



ತಿ.ನರಸೀಪುರ, ಫೆ. 1– ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕ ಸಂಘಟನೆಯ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಅವರನ್ನು ಜಾತ್ಯತೀತ ಜನತಾ ದಳದ ರಾಜ್ಯ ವಕ್ತಾರರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.



ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡರ ಹುಟ್ಟು ಹಬ್ಬದ ಅಂಗವಾಗಿ ಅಭಿಮಾನಿಗಳು ಹೊರನಾಡು ಅನ್ನಪೂರ್ಣೇಶ್ವರಿ ಸನ್ನಿಧಿಯಲ್ಲಿ ವಿಶೇಷ ಪೂಜೆ ಮತ್ತು ಅನ್ನಸಂತರ್ಪಣೆ ಏರ್ಪಡಿಸಿದ್ದರು. ಈ ಸಂದರ್ಭದಲ್ಲಿ ಹಿರಿಕ್ಯಾತನಹಳ್ಳಿ ವ್ಯವಸಾಯ ಸೇವಾ ಸಹಕಾರ ಬ್ಯಾಂಕಿನ ಹಾಲಿ ನಿರ್ದೇಶಕರೂ ಆದ ಮಾಜಿ ಅಧ್ಯಕ್ಷೆ ಜ್ಯೋತಿ ಪುಟ್ಟರಾಜ್, ಪುಟ್ಟರಾಜು, ಗ್ರಾಪಂ ಮಾಜಿ ಅಧ್ಯಕ್ಷ ದಾ.ರಾ. ಮಹೇಶ್ ಹನಗೂಡು, ಸೊಸೈಟಿ ಅಧ್ಯಕ್ಷ ರವಿಕುಮಾರ್, ಹನುಮ ಜವನಿಕುಪ್ಪೆ, ಶ್ರೀನಿವಾಸ್, ಪ್ರಭಾಕರ್, ಅಜ್ಜೀಗೌಡ, ಲೋಕೇಶ್ ಮತ್ತಿತರರು ಹಾಜರಿದ್ದರು

ಹಿಂದುಳಿದ ವರ್ಗಗಳ ಬಗ್ಗೆ ಕಾಳಜಿಯಿರುವ ಪಕ್ಷ ಬಿಜೆಪಿ



ತಿ.ನರಸೀಪುರ, ಫೆ.1– ಬಿಜೆಪಿ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಯವರಿಗೆ ಶೇ.15 ರಿಂದ ಶೇ.17ಕ್ಕೆ, ಪರಿಶಿಷ್ಟ ಪಂಗಡದವರಿಗೆ ಶೇ.4 ರಿಂದ ಶೇ.7ಕ್ಕೆ ಮೀಸಲಾತಿಯನ್ನು ಹೆಚ್ಚಿಸುವುದರ ಮೂಲಕ ಹಿಂದುಳಿದ ವರ್ಗಗಳ ಬಗ್ಗೆ ಇರುವ ಕಾಳಜಿಯನ್ನು ತೋರಿಸಿದೆ ಎಂದು ವರುಣಾ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡರು ಮತ್ತು ಮೈಸೂರು ಜಿಲ್ಲಾ ಸಾಮಾಜಿಕ ಜಾಲತಾಣ ಸಂಚಾಲಕರೂ ಆದ ಶರತ್ ಪುಟ್ಟಬುದ್ಧಿ ತಿಳಿಸಿದ್ದಾರೆ.

ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚಟ್ಟನಹಳ್ಳಿ ಪಾಳ್ಯ, ಚಟ್ಟನಹಳ್ಳಿ, ಪುಟ್ಟೇಗೌಡನ ಹುಂಡಿ, ದುದ್ದಗೆರೆ ಗ್ರಾಮಗಳಲ್ಲಿ ಬಿಜೆಪಿ ವತಿಯಿಂದ ವಿಜಯ ಸಂಕಲ್ಪ ಅಭಿಯಾನದ ಅಂಗವಾಗಿ ಮನೆ ಮನೆಗೆ ತೆರಳಿ ಕರಪತ್ರ ವಿತರಣೆ ಮಾಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿ ಮಾಡಿರುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡುವುದರ ಜೊತೆಗೆ, ಗೋಡೆ ಬರಹಗೆ, ಕಾರ್ಯಕರ್ತರ ನೋಂದಾವಣೆ ಮಾಡಿ ಮಾತನಾಡಿ ಕೇಂದ್ರದಲ್ಲೂ ಕೂಡ ನರೇಂದ್ರ ಮೋದಿಯವರ ಸರ್ಕಾರ 2014 ರಿಂದಲೂ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಪ್ರಚಲಿತಗೊಳಿಸುವ ಉದ್ದೇಶದಿಂದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದರು.

ಜವಾಹರ್‌ಲಾಲ್ ನೆಹರು ಮತ್ತು ಕಾಂಗ್ರೆಸ್ ಪಕ್ಷದವರು ಮೊದಲಿನಿಂದಲೂ ಅಂಬೇಡ್ಕರ್ ಅವರಿಗೆ ಮತ್ತು ಎಲ್ಲಾ ದಲಿತ ವರ್ಗದವರಿಗೆ ಮೋಸ ಮಾಡಿ ಅವರ ಏಳಿಗೆ ಬಗ್ಗೆ ಸುಳ್ಳು ಹೇಳಿಕೊಂಡೆ ಬರುತ್ತಿದ್ದಾರೆ. ಅಂಬೇಡ್ಕರ್ ಅವರನ್ನು ನೆಹರುರವರು ಲೋಕಸಭಾ ಚುನಾವಣೆಯಲ್ಲಿ ಸೋಲಿಸಿ ಅವರೇ ಬರೆದ ಸಂವಿಧಾನದ ಚೌಕಟ್ಟಿನಲ್ಲಿ ನಡೆಯುವ ಲೋಕಸಭಾ ಸದನದೊಳಗೆ ಅವರು ಕಾಲಿಡದಂತೆ ನೋಡಿಕೊಂಡರು. ಅಂಬೇಡ್ಕರ್ ಅವರ ನಿಧನದ ನಂತರ ಅವರ ಅಂತ್ಯಕ್ರಿಯೆಗೆ 6 ಅಡಿ ಜಾಗವನ್ನು ಕೊಡದೆ ಕ್ರೂರತನ ಪ್ರದರ್ಶಿಸಿದರು. ಇಂತ ಕ್ರೌರ್ಯದ ಪರಮಾವಧಿಯನ್ನು ಮೆರೆದ ಕಾಂಗ್ರೆಸ್‌ಗೆ ಯಾವುದೇ ಕಾರಣಕ್ಕೂ ಮತ ಹಾಕದೆ ವರುಣಾ ಕ್ಷೇತ್ರದ ಜನ ಈ ಬಾರಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಬಿಜೆಪಿ ಅಭ್ಯರ್ಥಿಯನ್ನು ಶಾಸಕನನ್ನಾಗಿ ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಗಾಪಂ ಸದಸ್ಯರಾದ ಪುಟ್ಟೇಗೌಡನಹುಂಡಿ ಮಹೇಶ್, ಬೂತ್ ಅಧ್ಯಕ್ಷ ಮಹದೇವಸ್ವಾಮಿ, ವರುಣಾ ಯುವ ಮೋರ್ಚಾ ಉಪಾಧ್ಯಕ್ಷ ಚಂದ್ರಸ್ವಾಮಿ, ರಾಜೇಶ್, ಸ್ವಾಮಿ, ಮಹಾದೇವ, ದುದ್ದಗೆರೆ ರವಿ, ಕೀಳನಪುರ ಪ್ರಕಾಶ್ ಮುಂತಾದವರು ಭಾಗಿಯಾಗಿದ್ದರು.

ಕೆಡಿಪಿ ಸಭೆಗೆ ಬಾರದ ಅಧಿಕಾರಿಗಳಿಗೆ ನೋಟೀಸ್ ನೀಡಲು ಶಾಸಕ ಸೂಚನೆ



ಹುಣಸೂರು, ಫೆ.1– ಶಾಸಕರ ಕೆಡಿಪಿ ಸಭೆಗೆ ಬಾರದೆ ಸಿಬ್ಬಂದಿಗಳನ್ನು ಕಳುಹಿಸಿರುವ ಅಧಿಕಾರಿಗಳಿಗೆ ನೋಟೀಸ್ ನೀಡಿ ಎಂದು ಆಡಳಿತಾಧಿಕಾರಿಗೆ ಸೂಚನೆ ನೀಡಿದ ಶಾಸಕ ಹೆಚ್.ಪಿ. ಮಂಜುನಾಥ್, ಸಭೆಗೆ ಬಂದಿರುವ ಸಿಬ್ಬಂದಿಯನ್ನು ವಾಪಸ್ ಕಳುಹಿಸುವಂತೆ ತಿಳಿಸಿದರು.

ನಗರಸಭಾ ಸಭಾಂಗಣದಲ್ಲಿ ಶಾಸಕ ಮಂಜುನಾಥ್ ಅಧ್ಯಕ್ಷತೆಯಲ್ಲಿ ನಡೆದ ಕೆಡಿಪಿ ಸಭೆಗೆ ಅಧಿಕಾರಿಗಳು ಮೊದಲ ಆದ್ಯತೆ ನೀಡಿ ಹಾಜರಾಗಬೇಕು. ಅದನ್ನು ಬಿಟ್ಟು ಬೇರೆ ಕೆಲಸಗಳಿಗೆ ಹೋಗಿರುವ ತಾಲೂಕು ಮಟ್ಟದ ಅಧಿಕಾರಿಗಳಿಗೆ ನೋಟೀಸ್ ನೀಡಿ ಹಾಗೂ ಇಂದಿನ ಸಭೆಯ ಅನುಪಾಲನ ವರದಿಯನ್ನು ಸಭೆಗೆ ಮಂಡಿಸಿ ಎಂದು ಅಧಿಕಾರಿಗಳಿಗೆ ಅವರು ತಾಕೀತು ಮಾಡಿದರು.

ನಿರ್ಮಿತಿ ಕೇಂದ್ರದ ಎಇಇ ಭ್ರಷ್ಟ ಅಧಿಕಾರಿ ತಪ್ಪುಗಳನ್ನು ಸಭೆಯಲ್ಲಿ ಪ್ರಶ್ನಿಸುತ್ತೇವೆ ಎಂದು ಬೇರೆ ನೆಪ ಹೇಳಿ ಸಭೆಗೆ ಗೈರಾಗಿದ್ದಾರೆ. ಈತನಿಗೆ ನೋಟೀಸ್ ನೀಡಿ ಶಿಸ್ತುಕ್ರಮ ಕೈಗೊಳ್ಳಿ. ಅದೇ ರೀತಿ ಹನಗೋಡು ಹೋಬಳಿಯ ಆಡಿಗನಹಳ್ಳಿ ಗ್ರಾಮದ ನಿಂಗರಾಜ್‌ರವರಿಂದ ಜಮೀನಿನ ಸರ್ವೆ ಕಾರ್ಯ ಮಾಡಿಕೊಡಲು ಸರ್ವೆಯರ್ ಜಯಕುಮಾರ್ 15 ಸಾವಿರ ಲಂಚದ ಬೇಡಿಕೆ ಇಟ್ಟು ಕಳೆದ ಆರು ತಿಂಗಳಿನಿಂದ ಸತಾಯಿಸುತ್ತಿದ್ದು, ಈತನ ಮೇಲೆ ಶಿಸ್ತುಕ್ರಮಕ್ಕೆ ಶಿಫಾರಸು ಮಾಡಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಇದೇ ರೀತಿ ಅಸಹಾಯಕ ಗ್ರಾಮೀಣ ಜನರಿಗೆ ಪೌತಿಖಾತೆ ಮಾಡಿಕೊಡಲು 20 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟು ಹಣ ನೀಡದಿದ್ದ ಕಾರಣ ಪೌತಿಖಾತೆ ಮಾಡಿಕೊಡಲು ವಿಳಂಬವಾಗಿ ಫಲಾನುಭವಿ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಬಿಜೆಪಿ ಸರ್ಕಾರದ ಅಧಿಕಾರವಧಿಯಲ್ಲಿ ಭ್ರಷ್ಟತೆ ತಾಂಡವವಾಡುತ್ತಿದ್ದು, ಲಂಚದ ಪರಕಾಷ್ಠೆ ಮುಗಿಲು ಮುಟ್ಟಿದೆ ಹಾಗೂ ಕೆಲಸವಾಗದ ಅಸಹಾಯಕರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ ಎಂದು ಶಾಸಕರು ವಿಷಾದ ವ್ಯಕ್ತಪಡಿಸಿದರು.

ಅರಸು ಭವನ ಪೂರ್ಣಗೊಂಡಿದ್ದು, ಒಳಾಂಗಣದ ಸಣ್ಣ ಪುಟ್ಟ ಕೆಲಸಗಳು ಬಾಕಿ ಇದೆ. ಇದಕ್ಕಾಗಿ 2 ಕೋಟಿ ಹಣ ಇದ್ದರೂ ಅದನ್ನು ಬಳಕೆ ಮಾಡದೆ ಭವನದ ಉದ್ಘಾಟನೆಯನ್ನು ಮುಂದೂಡುತ್ತಿದ್ದಾರೆ. ಇದು ಹುಣಸೂರು ತಾಲೂಕಿಗೆ ತೋರುತ್ತಿರುವ ತಾರತಮ್ಯವಾಗಿದೆ. ದಳದ ಶಾಸಕರು ಇರುವ ಕ್ಷೇತ್ರಕ್ಕೆ 45 ಕೋಟಿ, ಬಿಜೆಪಿ ಶಾಸಕರು ಇರುವ ಕ್ಷೇತ್ರಕ್ಕೆ 100 ಕೋಟಿ, ಕಾಂಗ್ರೆಸ್ ಶಾಸಕನಾದ ನನ್ನ ಕ್ಷೇತ್ರಕ್ಕೆ ಕೇವಲ 10 ಕೋಟಿ ರೂ. ನೀಡಿ ಬಿಜೆಪಿ ಸರ್ಕಾರ ತಾರತಮ್ಯ ಮಾಡುವ ಮೂಲಕ ಅನ್ಯಾಯ ಮಾಡುತ್ತಿದೆ ಎಂದು ಅವರು ಹೇಳಿದರು.

ಸಿದ್ದರಾಮಯ್ಯನವರ ಅಧಿಕಾರವಧಿಯಲ್ಲಿ ಹುಣಸೂರಿಗೆ 2,500 ಕೋಟಿಗೂ ಹೆಚ್ಚು ಅನುದಾನ ತಂದು ಸಾಕಷ್ಟು ಅಭಿವೃದ್ಧಿ ಕೆಲಸಗಳು ಮಾಡಿದ್ದು, ಈ ಭ್ರಷ್ಟ ಬಿಜೆಪಿ ಸರ್ಕಾರವಧಿಯಲ್ಲಿ ಕೇವಲ 10 ಕೋಟಿ ನೀಡಿ ಯಾವ ಇಲಾಖೆಯೂ ಜನಪರ ಕೆಲಸಗಳನ್ನು ಮಾಡಲು ಅಸಾಧ್ಯವಾಗಿದೆ ಎಂದು ಕಿಡಿಕಾರಿದರು. ಸಭೆಯಲ್ಲಿ ತಾಪಂ ಆಡಳಿತಾಧಿಕಾರಿ ನಂದ, ಕಾರ್ಯ ನಿರ್ವಹಣಾಧಿಕಾರಿ ಮನು, ಪೌರಾಯುಕ್ತೆ ಮಾನಸ, ತಹಶೀಲ್ದಾರ್ ಡಾ.ಅಶೋಕ್, ನಾಮನಿರ್ದೇಶನ ಸದಸ್ಯರಾದ ಶಿರೇನಹಳ್ಳಿ ಬಸವರಾಜ್, ಬಿಳಿಕೆರೆ ಕಾಂತರಾಜ್, ಹಿರಿಕ್ಯಾತನಹಳ್ಳಿ ಸತೀಶ್, ಅಸ್ವಾಳ್ ಮಂಜುಳ ಉಪಸ್ಥಿತರಿದ್ದರು.

ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಬೆಳದಿಂಗಳ ಸಂಗೀತ



ಮೈಸೂರು, ಫೆ.1– ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಶ್ರೀ ಸುತ್ತೂರು ಮಠದಲ್ಲಿ ಫೆ.5 ರಂದು ಸಂಜೆ 6 ಗಂಟೆಗೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರ ಸಾನ್ನಿಧ್ಯದಲ್ಲಿ ಬೆಳದಿಂಗಳ ಸಂಗೀತ–251ರ ಅಂಗವಾಗಿ ಡಾ. ಸುಮಾ ಸುಧೀಂದ್ರ ಮತ್ತು ವಿದ್ವಾನ್ ಡಾ. ಪ್ರಕಾಶ್ ಸೊಂಟಕ್ಕೆ ಅವರಿಂದ ವೀಣಾ–ಗಿಟಾರ್ ಜುಗಲ್ಬಂದಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ವಿದ್ವಾನ್ ಬಿ.ಸಿ. ಮಂಜುನಾಥ್ –ಮೃದಂಗ, ಪಂಡಿತ್ ಕಾರ್ತಿಕ್ ಭಟ್ –ತಬಲ ಅವರು ಪಕ್ಕವಾದ್ಯದಲ್ಲಿ ಸಹಕಾರ ನೀಡಲಿದ್ದಾರೆ.

ಎರಡೂವರೆ ಸಾವಿರ ಕೋಟಿ ರೂ. ಅನುದಾನದ ಮಾಹಿತಿ ಬಹಿರಂಗಪಡಿಸಿ

ಮಾಜಿ ಶಾಸಕ ಕೆ.ವೆಂಕಟೇಶ್‌ಗೆ ಹಾಲಿ ಶಾಸಕ ಕೆ.ಮಹದೇವ್ ಸವಾಲು



ಪಿರಿಯಾಪಟ್ಟಣ, ಫೆ.1– ತಮ್ಮ ಅವಧಿಯಲ್ಲಿ ತಾಲೂಕಿಗೆ ಎರಡೂವರೆ ಸಾವಿರ ಕೋಟಿ ರೂ.ಗಳ ಅನುದಾನವನ್ನು ತಂದು ತಾಲೂಕನ್ನು ಅಭಿವೃದ್ಧಿಪಡಿಸಿದ್ದೇನೆ ಎಂದು ಎಲ್ಲೆಡೆ ಬಡಾಯಿ ಕೊಚ್ಚಿಕೊಳ್ಳುತ್ತಿರುವ ಮಾಜಿ ಶಾಸಕ ಕೆ.ವೆಂಕಟೇಶ್ ಸಾರ್ವಜನಿಕವಾಗಿ ಆ ಅನುದಾನದ ಮಾಹಿತಿಯನ್ನು ಬಹಿರಂಗಪಡಿಸಲಿ ಎಂದು ಹಾಲಿ ಶಾಸಕ ಕೆ.ಮಹದೇವ್ ಸವಾಲು ಹಾಕಿದ್ದಾರೆ.

ತಾಲೂಕಿನ ಪೋನಾಡಹಳ್ಳಿ ಗ್ರಾಮದಲ್ಲಿ ಜೆಡಿಎಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ಐದು ವರ್ಷ ಶಾಸಕರಾಗಿ, ಒಂದು ಬಾರಿ ಸಚಿವರಾಗಿ, ಒಂದು ಬಾರಿ ಮಂಡಳಿ ಅಧ್ಯಕ್ಷರಾಗಿ ಬೆಂಗಳೂರಿನಲ್ಲಿ ವಿಲಾಸ ಜೀವನ ನಡೆಸುತ್ತಿದ್ದರೆ ವಿನಹ ತಾಲೂಕಿನ ಸಾಮಾನ್ಯ ಜನತೆಗೆ ಅವರು ಸ್ಪಂದಿಸಿಲ್ಲ ಎಂದು ಆರೋಪಿಸಿದರು.

ನಾನು ಎರಡು ವರ್ಷಗಳ ಕಾಲ ಕೊರೋನಾ ಹಾಗೂ ಅತಿವೃಷ್ಟಿಯಿಂದಾಗಿ ತಾಲೂಕಿನ ಅಭಿವೃದ್ಧಿಯ ಬಗ್ಗೆ ಸರ್ಕಾರದ ಯಾವುದೇ ಅನುದಾನವಿಲ್ಲದೆ ಕೆಲಕಾಲ ಅಭಿವೃದ್ಧಿಯ ವಿಚಾರದಲ್ಲಿ ನಿಸ್ಸಹಾಯಕನಾದೆ. ನಂತರ ಮೂರು ವರ್ಷದ ಅವಧಿಯಲ್ಲಿ ನನ್ನ ಕೈ ಮೀರಿ ಸರ್ಕಾರದ ವಿವಿಧ ಇಲಾಖೆಯ ಸಚಿವರ ಕೈಕಾಲು ಹಿಡಿದು ತಾಲೂಕಿನ ಅಭಿವೃದ್ಧಿಗೆ ಸಮಗ್ರವಾಗಿ ಹೋರಾಟ ಮಾಡಿದ್ದೇನೆ. ಇದರ ಫಲಶೃತಿಯಾಗಿ ನನಗೆ ನೀವು ಮುಂದಿನ ಚುನಾವಣೆಯಲ್ಲಿ ನನ್ನನ್ನು ಬೆಂಬಲಿಸುವುದರ ಮೂಲಕ ರಾಜ್ಯದಲ್ಲಿ ಕುಮಾರಸ್ವಾಮಿ ಸರ್ಕಾರಕ್ಕೆ ನೀವು ಅವಕಾಶ ನೀಡಬೇಕೆಂದು ಮನವಿ ಮಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಕೊನೆಯ ಅವಧಿಯಲ್ಲಿ ರೈತರ ಕಣ್ಮಣಿ ಹೆಚ್.ಡಿ. ದೇವೇಗೌಡರ ಆಸೆಯನ್ನು ಈಡೇರಿಸಿ ರಾಜ್ಯದಲ್ಲಿ ಕುಮಾರಸ್ವಾಮಿ ಸರ್ಕಾರವನ್ನು ರಚಿಸಲು ನೀವು ಸಹಕರಿಸಿ. ಈ ದೇಶದ ರೈತರ ಬೆನ್ನೆಲುಬಾಗಿ ಕೇಂದ್ರದಲ್ಲಿ, ರಾಜ್ಯದಲ್ಲಿ ಹೋರಾಟ ಮಾಡಿದ ಧೀಮಂತ ನಾಯಕರಿದ್ದರೆ ಅದು ಹೆಚ್.ಡಿ.ದೇವೇಗೌಡರು ಮಾತ್ರ ಎಂದರು.

ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಮಾತನಾಡಿ, ರಾಜ್ಯದಲ್ಲಿ ಆರೋಗ್ಯ ಶಿಕ್ಷಣ ಹಾಗೂ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಿದ ಸರ್ಕಾರ ಏನಾದರೂ ಇದ್ದರೆ ಅದು ಜೆಡಿಎಸ್ ಸರ್ಕಾರ ಮಾತ್ರ ಈ ಸಾರಿ ಕುಮಾರಸ್ವಾಮಿ, ಜಿ.ಟಿ. ದೇವೇಗೌಡರು ಹಾಗೂ ನಮ್ಮ ತಂದೆಯವರ ಕೊನೆಯ ಚುನಾವಣೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ನಮ್ಮ ತಂದೆ ಮಹದೇವಣ್ಣನವರು ತಾಲೂಕಿನಾದ್ಯಂತ ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಇದೊಂದು ಸಾರಿ ನಮ್ಮ ತಂದೆಯವರಿಗೆ ನೀವು ಅವಕಾಶ ನೀಡಿ, ಇಲ್ಲದಿದ್ದರೆ ನಾನು ಇನ್ನು ಮುಂದೆ ರಾಜಕೀಯಕ್ಕೆ ಬರುವುದಿಲ್ಲ ಎಂದರು.

ಮುಖಂಡರುಗಳಾದ ಗೋವಿಂದೇಗೌಡ, ರಾಜೇಂದ್ರ, ರಾಮು ಐಲಾಪುರ, ಅಣ್ಣಯ್ಯ ಶೆಟ್ಟಿ, ಚಂದ್ರಶೇಖರಯ್ಯ, ರಂಗಸ್ವಾಮಿ, ಹೇಮಂತ್ ಕುಮಾರ್, ರಘುನಾಥ್ ಸೇರಿದಂತೆ ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು.

ನರಸೀಪುರದಲ್ಲಿ ಕಾಂಗ್ರೆಸ್ ಗೆಲ್ಲಿಸಲು ಬೂತ್ ಮಟ್ಟದಲ್ಲಿ ಸಜ್ಜಾಗಿ



ತಿ.ನರಸೀಪುರ,ಫೆ.1– ರಾಜ್ಯ ವಿಧಾನಸಭಾ ಚುನಾವಣೆ ಯಾವುದೇ ಸಂದರ್ಭದಲ್ಲಿ ಘೋಷಣೆಯಾಗುವ ಸಾಧ್ಯತೆಯಿದ್ದು, ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಲು ಕಾರ್ಯಕರ್ತರು ಹಾಗೂ ಮುಖಂಡರು ಬೂತ್ ಮಟ್ಟದಲ್ಲಿ ಸಜ್ಜಾಗಿರಬೇಕು ಎಂದು ವಸತಿ ಯೋಜನೆ ಜಾಗೃತ ಸಮಿತಿಯ ಮಾಜಿ ಅಧ್ಯಕ್ಷ ಹಾಗೂ ಟಿಕೆಟ್ ಆಕಾಂಕ್ಷಿ ಸುನೀಲ್ ಬೋಸ್ ಕರೆ ನೀಡಿದ್ದಾರೆ.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಅಸ್ತಿತ್ವಕ್ಕೆ ತಂದಿರುವ ಸುನೀಲ್ ಬೋಸ್ ಯುವ ಬ್ರಿಗೇಡ್ ಸಂಘಟನೆಯ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಸ್ವಾಯತ್ತ ಸಂಸ್ಥೆಗಳನ್ನೂ ನಿಯಂತ್ರಣದಲ್ಲಿಟ್ಟುಕೊಂಡಿರುವ ಕೇಂದ್ರ ಸರ್ಕಾರ ಚುನಾವಣೆ ಆಯೋಗದ ಮೂಲಕ ಯಾವುದೇ ಸಂದರ್ಭದಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆಯನ್ನು ಘೋಷಿಸುವ ಸಾಧ್ಯತೆಗಳಿವೆ ಹಾಗಾಗಿ ಬೂತ್ ಮಟ್ಟದಲ್ಲಿ ಪಕ್ಷದ ಸಂಘಟನೆಯತ್ತ ಎಲ್ಲರ ಗಮನವಿರಲಿ ಎಂದರು.

ಮೊದಲು ಮೇ ನಲ್ಲಿ ಚುನಾವಣೆ ಆಗುವ ನಿರೀಕ್ಷೆಯಿತ್ತು. ರಾಜ್ಯದಲ್ಲಿ ಕಾಂಗ್ರೆಸ್ ಅಲೆಯಿರುವುದನ್ನ ಸೂಕ್ಷ್ಮವಾಗಿ ಗಮನಿಸಿರುವ ಬಿಜೆಪಿ ಕೇಂದ್ರ ನಾಯಕರು ಫೆಬ್ರವರಿಯ ಮಾಸಾಂತ್ಯ ಅಥವಾ ಮಾರ್ಚ್ ಮೊದಲ ವಾರದಲ್ಲಿಯೇ ಚುನಾವಣೆ ನಡೆಸಲು ಮುಂದಾಗಿದ್ದಾರೆ. ರಾಜ್ಯ, ಜಿಲ್ಲೆ ಹಾಗೂ ವಿಧಾನಸಭಾ ಕ್ಷೇತ್ರದಲ್ಲಿಯೂ ಕಾಂಗ್ರೆಸ್‌ಗೆ ಜನರ ಒಲವಿದೆ. ಬಿಜೆಪಿಯ ಡಬಲ್ ಇಂಜಿನ್ ಸರ್ಕಾರಗಳ ಆಡಳಿತ ವೈಫಲ್ಯ ಹಾಗೂ ಕೆಟ್ಟ ಆರ್ಥಿಕ ನೀತಿಯಿಂದ ನೊಂದು ಬೇಸತ್ತಿರುವ ಮಧ್ಯಮ ವರ್ಗ ಮತ್ತು ಬಡ ಜನರು ಕಾಂಗ್ರೆಸ್ ಕೈಗೆ ಮತ್ತೆ ಅಧಿಕಾರ ಕೊಡಲು ಉತ್ಸುಕರಾಗಿದ್ದಾರೆ. ಅವರನ್ನು ಭೇಟಿಯಾಗಿ ನಿಮ್ಮೊಂದಿಗೆ ನಾವಿದ್ದೇವೆ ಎಂಬ ಆತ್ಮವಿಶ್ವಾಸ ತುಂಬುವ ಕೆಲಸವನ್ನು ನಾವೆಲ್ಲರೂ ಮಾಡಬೇಕೆಂದು ಸಲಹೆ ನೀಡಿದರು.

ಕ್ಷೇತ್ರದಲ್ಲಿ ಮಹದೇವಪ್ಪ ಅವರು ಅಥವಾ ನಾನೇ ಅಭ್ಯರ್ಥಿಯಾಗಿ ಕಣಕ್ಕಿಳಿದರೂ ಗೆಲ್ಲುವ ಅವಕಾಶವಿದೆ. ಅಪ್ಪನೋ, ಇಲ್ಲ ಮಗ ನಿಲ್ಲುತ್ತಾನೋ ಅನ್ನೋ ಯಾವುದೇ ಗೊಂದಲ ಬೇಡ. ಬದಲಿಗೆ ಕಾಂಗ್ರೆಸ್ ಗೆಲ್ಲುವುದು ಮುಖ್ಯವಾಗಬೇಕು. ಏಕಕಾಲಕ್ಕೆ ಎಲ್ಲಾ ಬೂತ್‌ಗಳಿಗೂ ನಾನೇ ಖುದ್ದಾಗಿ ಭೇಟಿ ನೀಡಲು ಸಾಧ್ಯವಿಲ್ಲ. ಈ ಹಿಂದೆ ಹೇಳಿರುವಂತೆ ಬೂತ್ ಸಮಿತಿಗೆ ಚುನಾವಣೆ ಹೊಣೆಯನ್ನು ನೀಡುವುದರಿಂದ ಕಾರ್ಯಕರ್ತರು ಹಾಗೂ ಮುಖಂಡರು ಜವಾಬ್ದಾರಿ ಅರಿತು ಚುನಾವಣೆ ಗೆಲುವಿಗೆ ಕಾರ್ಯತಂತ್ರ ರೂಪಿಸುವ ಕಡೆಗೆ ಕಾರ್ಯೋನ್ಮುಖರಾಗಬೇಕು ಎಂದು ಸುನೀಲ್ ಬೋಸ್ ಮನವಿ ಮಾಡಿದರು.

ಗ್ರಾಮ ಪಂಚಾಯಿತಿ ಸದಸ್ಯರ ಒಕ್ಕೂಟದ ರಾಜ್ಯ ಉಪಾಧ್ಯಕ್ಷೆ ಬೃಂದಾ ಕೃಷ್ಣೇಗೌಡ ಮಾತನಾಡಿದರು.

ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಎಂ.ಎಸ್.ಶಿವಮೂರ್ತಿ, ಎಪಿಎಂಸಿ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ, ತಾಪಂ ಮಾಜಿ ಉಪಾಧ್ಯಕ್ಷ ಪ್ರಸನ್ನ, ಮಾಜಿ ಸದಸ್ಯರಾದ ಎಂ.ರಮೇಶ್, ಕುಕ್ಕೂರು ಗಣೇಶ್, ಎಸ್ಸಿ, ಎಸ್ಟಿ ಹಿತರಕ್ಷಣಾ ಸಮಿತಿ ಸದಸ್ಯ ಸೋಸಲೆ ಮಹದೇವಸ್ವಾಮಿ, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕಿ ಲತಾ ಜಗದೀಶ್, ಮಹಿಳಾ ಅಧ್ಯಕ್ಷೆ ವೀಣಾ ಶಿವಕುಮಾರ್, ಗ್ರಾಪಂ ಅಧ್ಯಕ್ಷರಾದ ಎಂ.ಮಹೇಶ್, ಡಿ.ಜಯರಾಮು, ರಘು, ಸದಸ್ಯ ನಾಗೇಂದ್ರ, ಮಾಜಿ ಅಧ್ಯಕ್ಷರಾದ ಚಂದ್ರಶೇಖರ್, ಚಿಕ್ಕಣ್ಣ, ಆರ್.ಸೋಮಣ್ಣ, ಮಾಜಿ ಉಪಾಧ್ಯಕ್ಷ ಕೆ.ಶಂಕರ್, ಮಾಜಿ ಸದಸ್ಯ ಎನ್. ನಿಂಗಯ್ಯ, ಯುವ ಬ್ರಿಗೇಡ್ ಸಂಚಾಲಕರಾದ ಕುಮಾರ್ ರಾಮೇಗೌಡ, ಮಧು ಕನ್ನಾಯಕನಹಳ್ಳಿ, ಕುರುಬರ ಸಂಘದ ನಿರ್ದೇಶಕ ಹೆಚ್.ಸಿ.ಅರುಣ್ ಕುಮಾರ್, ಬೇನಕನಹಳ್ಳಿ ಗಂಗಾಧರ, ಲೋಹಿತ್, ರವಿ ಕೆಬ್ಬೆಹುಂಡಿ, ಜಿ.ಮಹೇಶ್, ಟಿ.ಚರಣ್, ಆನಂದ್ ತಲಕಾಡು, ಭರತರಾಜ್, ಜೆ. ಅನೂಪ್ ಗೌಡ, ಚತುರ್ ಗೌಡ, ಕನಕ ಶಂಕರ್, ಬಣ್ಣ ಮಹೇಶ್, ರಜತ್ ಗೌಡ, ಕೋಳಿಮಲ್ಲನಹುಂಡಿ ಕೃಷ್ಣ, ತೊಟ್ಟವಾಡಿ ರವಿ ಹಾಗೂ ಇನ್ನಿತರರು ಹಾಜರಿದ್ದರು.

ಮಗನ ಸಾವಿಗೆ ಕಾರಣನಾದ ಕಾರು ಚಾಲಕನ ಬಂಧನಕ್ಕೆ ಆಗ್ರಹಿಸಿ ಪೋಷಕರ ಪ್ರತಿಭಟನೆ



ಅಜಾಗರೂಕತೆಯಿಂದ ಕಾರು ಚಾಲನೆ ಮಾಡಿ ಮಗನ ಸಾವಿಗೆ ಕಾರಣವಾಗಿರುವ ಚಾಲಕನನ್ನು ಬಂಧಿಸುವಂತೆ ಒತ್ತಾಯಿಸಿ ಮೃತ ಯುವಕನ ಪೋಷಕರು ಪಟ್ಟಣ ಪೊಲೀಸ್ ಠಾಣೆ ಮುಂಭಾಗ ಪ್ರತಿಭಟನೆ ನಡೆಸಿದರು.

ನಂಜನಗೂಡು, ಫೆ.1– ಅಜಾಗರೂಕತೆಯಿಂದ ಕಾರು ಚಲಾಯಿಸಿ ತಮ್ಮ ಮಗನ ಸಾವಿಗೆ ಕಾರಣವಾಗಿರುವ ಚಾಲಕನನ್ನು ಬಂಧಿಸುವಂತೆ ಒತ್ತಾಯಿಸಿ ಮೃತನ ಪೋಷಕರು ಸ್ಥಳೀಯರೊಡಗೂಡಿ ಬುಧವಾರ ನಗರದ ಪಟ್ಟಣ ಪೊಲೀಸ್ ಠಾಣೆ ಮುಂಭಾಗ ಪ್ರತಿಭಟನೆ ಸತ್ಯಾಗ್ರಹ ನಡೆಸಿದರು.

ತಾಲೂಕಿನ ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನಗರಸಭೆ ಮಾಜಿ ಸದಸ್ಯರಾದ ಸುಧಾ ಮಹೇಶ್ ಹಾಗೂ ಮಹೇಶ್ ದಂಪತಿ ಪುತ್ರ ಪ್ರವೀಣ್(23) 2020ರ ಮೇ ತಿಂಗಳ 18ರಂದು ಕೆಲಸ ಮುಗಿಸಿಕೊಂಡು ಮನೆಗೆ ಹಿಂತಿರುಗುತ್ತಿದ್ದ ವೇಳೆ ಹಿಂಬದಿಯಿಂದ ವೇಗವಾಗಿ ಬಂದ ಕಾರುಚಾಲಕ ನೋರ್ವ ಬೈಕಿಗೆ ಗುದ್ದಿದ್ದರಿಂದ ತೀವ್ರವಾಗಿ ಗಾಯಗೊಂಡು ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದನು.

ಅಪಘಾತ ನಡೆದು 2 ವರ್ಷ 9 ತಿಂಗಳಾದರೂ ಕಾರು ಚಾಲಕನನ್ನು ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಲು ಪೊಲೀಸರು ಮುಂದಾಗಿಲ್ಲ ಎಂದು ಆರೋಪಿಸಿ ಮೃತ ಯುವಕನ ತಂದೆ ಪುರಸಭೆ ಮಾಜಿ ಸದಸ್ಯ ಮಹೇಶ್ ಹಾಗೂ ತಾಯಿ ನಗರಸಭೆ ಮಾಜಿ ಸದಸ್ಯೆ ಸುಧಾ ಮಹೇಶ್ ಸ್ಥಳೀಯರೊಡಗೂಡಿ ಪೊಲೀಸ್‌ಠಾಣೆ ಮುಂಭಾಗ ಪ್ರತಿಭಟನೆ ನಡೆಸಿದರು.

ಈ ಸಂದರ್ಭ ಮೃತ ಯುವಕನ ತಂದೆ ಮಹೇಶ್ ಮಾತನಾಡಿ, ಮದ್ಯ ಸೇವಿಸಿದ್ದ ಕಾರು ಚಾಲಕ ಅಜಾಗರೂಕತೆಯಿಂದ ವಾಹನ ಚಾಲನೆ ಮಾಡಿ ನಮ್ಮ ಮಗನ ಸಾವಿಗೆ ಕಾರಣವಾಗಿದ್ದಾನೆ. ಆರೋಪಿಯನ್ನು ಬಂಧಿಸುವಂತೆ ಕಳೆದ ಎರಡೂವರೆ ವರ್ಷಗಳಿಂದ ಪೊಲೀಸರ ಮೇಲೆ ಒತ್ತಡ ಹೇರಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಎರಡು ಬಾರಿ ಗುಜರಾತಿಗೆ ತೆರಳಿದ್ದ ಪೊಲೀಸರು ಆತನನ್ನು ವಶಕ್ಕೆ ಪಡೆಯಲು ಮುಂದಾಗಿಲ್ಲ. ನಮ್ಮ ಮಗನ ಸಾವಿಗೆ ನ್ಯಾಯಕೊಡಿಸದ ಹೊರತಾಗಿ ಪ್ರತಿಭಟನೆ ಹಿಂತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಹೇಳಿದರು.

ಸ್ಥಳಕ್ಕೆ ಎಎಸ್ಪಿ ನಂದಿನಿ ಭೇಟಿ ನೀಡಿ ಒಂದು ತಿಂಗಳ ಕಾಲಾವಕಾಶ ನೀಡಿ, ಸಮಸ್ಯೆ ಬಗೆಹರಿಸುತ್ತೇವೆ ಎಂದು ಭರವಸೆ ನೀಡಿದ ಬಳಿಕ ಪ್ರತಿಭಟನೆ ಹಿಂಪಡೆಯಲಾಯಿತು. ಪ್ರತಿಭಟನೆಯಲ್ಲಿ ನಗರಸಭೆ ಸದಸ್ಯ ಪ್ರದೀಪ್, ನಗರಸಭೆ ಮಾಜಿ ಸದಸ್ಯ ಕೆ.ಜಿ.ಆನಂದ್, ಗಜ, ವೀರಶೈವ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎನ್.ಸಿ.ಬಸವಣ್ಣ, ಗಣೇಶ್, ಉಮೇಶ್ ಮೋದಿ ಮತ್ತಿತರರು ಭಾಗವಹಿಸಿದ್ದರು.

ಜಾತ್ರೆಯಲ್ಲಿ ಬಾಂಬೆ, ಕೋಲ್ಕತ್ತಾ ತೋರಿಸುವಂತಿದೆ ಬಜೆಟ್

ಬೆಂಗಳೂರು, ಫೆ.1– ಕೇಂದ್ರದ ಬಜೆಟ್ ನಿರಾಶ ದಾಯಕ ಬಜೆಟ್. ಇದು ಜಾತ್ರೆಯಲ್ಲಿ ಬಾಂಬೆ, ಕೋಲ್ಕತ್ತಾ ತೋರಿಸುವ ರೀತಿ ಇದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಲೇವಡಿ ಮಾಡಿದ್ದಾರೆ.



ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಸಿದ್ದರಾಮಯ್ಯ, ಕೇಂದ್ರದ ಟ್ರಬಲ್ ಎಂಜಿನ್ ಸರ್ಕಾರ ಕಳೆದ ಎಂಟು ವರ್ಷಗಳಿಂದ ಪಾಲಿಸಿಕೊಂಡು ಬಂದಿರುವ 'ಅಮೀರ್ ಕೆ ಸಾಥ್, ಗರೀಬ್ ಕಾ ವಿನಾಶ್ (ಶ್ರೀಮಂತರ ಪೋಷಣೆ ಮತ್ತು ಬಡವರ ವಿನಾಶ) ಎಂಬ ಜನವಿರೋಧಿ ನೀತಿಯ ಮುಂದುವರಿದ ಭಾಗವಾಗಿ ಕೇಂದ್ರದ ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ ಬಜೆಟ್ ಮಂಡಿಸಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ. ನಿರುದ್ಯೋಗದ ಪ್ರಮಾಣದಲ್ಲಿ ಹೆಚ್ಚಾಗಿದೆ. ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಅಂದರೆ ಸುಮಾರು ಶೇ.54ರಷ್ಟು ಉದ್ಯೋಗವನ್ನು ಸೃಷ್ಟಿಸುವ ಮತ್ತು ದೇಶದ ಆರ್ಥಿಕತೆಗೆ ದೊಡ್ಡ ಕೊಡುಗೆಯನ್ನು ನೀಡುವ ಕೃಷಿ ಕ್ಷೇತ್ರವನ್ನು ಬಜೆಟ್‌ನಲ್ಲಿ ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ 2022–23ರ ಬಜೆಟ್‌ಗೆ ಹೋಲಿಸಿದರೆ ಈ ಬಜೆಟ್‌ನಲ್ಲಿ ಕೃಷಿಕ್ಷೇತ್ರಕ್ಕೆ ರೂ.8.468.21 ಕೋಟಿಯಷ್ಟು ಹಣ ಕಡಿಮೆ ನೀಡಲಾಗಿರುವುದೇ ಈ ನಿರ್ಲಕ್ಷ್ಯಕ್ಕೆ ಸಾಕ್ಷಿ. ಸಣ್ಣ ಮತ್ತು ಮಧ್ಯಮ ರೈತರನ್ನು ಕೂಡಾ ಕಡೆಗಣಿಸಲಾಗಿದೆ ಎಂದು ವಾಗ್ದಾಳಿ ನಡೆಸಿದರು.

ಅಲ್ಲದೆ ಕರ್ನಾಟಕದ ಭದ್ರಾ ಮೇಲ್ದಂಡೆ ಯೋಜನೆಗೆ ರೂ.5300 ಕೋಟಿ ರೂಪಾಯಿಯನ್ನು ನಿಗದಿಪಡಿಸ ಲಾಗಿದೆ. ಈ ಯೋಜನೆ ಪೂರ್ಣಗೊಳ್ಳಬೇಕಾದರೆ ರೂ.23,000 ಕೋಟಿ ಅವಶ್ಯಕತೆಯಿದೆ. ಕೇಂದ್ರ ಸರ್ಕಾರ ನೀಡಲು ಒಪ್ಪಿರುವುದು ಯೋಜನಾ ವೆಚ್ಚದ ಕಾಲುಭಾಗ ಮಾತ್ರ. ಈ ಹಣದಲ್ಲಿ 40% ಕಮಿಷನ್ ಕಳೆದರೆ ಕೊನೆಗೆ ಯೋಜನೆಗೆ ಸಿಗಲಿರುವುದು ರೂ.3000 ಕೋಟಿಗಿಂತಲೂ ಕಡಿಮೆ. ನಿಗದಿ ಪಡಿಸಿರುವ ಹಣ ಕೂಡಾ ಒಂದು ವರ್ಷಕ್ಕೋ ಐದು ವರ್ಷಕ್ಕೋ ಎನ್ನುವುದನ್ನೂ ಸ್ಪಷ್ಟಪಡಿಸಿಲ್ಲ. ಬಹಳ ಮುಖ್ಯವಾಗಿ ಕೃಷ್ಣಾ ಜಲಾನಯನ ಪ್ರದೇಶದ ವ್ಯಾಪ್ತಿಯಲ್ಲಿರುವ ಈ ಯೋಜನೆ ಅನುಷ್ಠಾನ ಗೊಳ್ಳಬೇಕಾದರೆ ಬಿ ಸ್ಕೀಮ್‌ಗೆ ಸಂಬಂಧಿಸಿದ ವ್ಯಾಜ್ಯ ಇತ್ಯರ್ಥವಾಗಬೇಕು. ಅಲ್ಲಿಯವರೆಗೆ ಈ ಹಣವನ್ನು ಖರ್ಚು ಮಾಡುವ ಹಾಗಿಲ್ಲ. ಕೃಷ್ಣಾ ಮೇಲ್ದಂಡೆ, ಮಹದಾಯಿ, ಮೇಕೆದಾಟು ಯೋಜನೆಗಳಿಗೆ ಪೈಸೆ ಹಣವನ್ನೂ ನೀಡಿಲ್ಲ ಎಂದು ಟೀಕಿಸಿದರು.

ಉತ್ಸವಕ್ಕೆ ಕೋಟಿ ಖರ್ಚು ಮಾಡುತ್ತೀರಿ; ಶಾಲಾ ಮಕ್ಕಳಿಗೆ ಸಮವಸ್ತ್ರ ಕೊಡಲು ಕಾಸಿಲ್ಲವೇ: ಹೈಕೋರ್ಟ್ ಛೀಮಾರಿ

ಬೆಂಗಳೂರು, ಫೆ.1– ರಾಜ್ಯದ ಸರ್ಕಾರಿ ಶಾಲೆಗಳ ಮಕ್ಕಳಿಗೆ ಎರಡು ಜೊತೆ ಸಮವಸ್ತ್ರ ಒಂದು ಜೊತೆ ಶೂ ಮತ್ತು ಎರಡು ಜೊತೆ ಕಾಲು ಚೀಲ ನೀಡಬೇಕು ಎಂಬ ಆದೇಶ ಪಾಲಿಸದ ರಾಜ್ಯ ಸರ್ಕಾರದ ವಿರುದ್ಧ ಕರ್ನಾಟಕ ಹೈಕೋರ್ಟ್ ಕಿಡಿಕಾರಿದೆ.


ಸರ್ಕಾರಿ ಶಾಲೆಗಳ ಮಕ್ಕಳಿಗೆ ಒಂದು ಜೊತೆ ಸಮವಸ್ತ್ರ ಮತ್ತು ಶೂ ಒದಗಿಸಲು ಆಗದ ರಾಜ್ಯ ಸರ್ಕಾರಕ್ಕೆ ಉತ್ಸವಗಳನ್ನು ನಡೆಸಲು ಕೋಟ್ಯಾಂತರ ರೂಪಾಯಿ ಖರ್ಚು ಮಾಡಲು ಮನಸ್ಸಿದೆ. ಆದರೆ, ಮಕ್ಕಳ ಹಕ್ಕು, ಶಿಕ್ಷಣಗಳ ವಿಚಾರದಲ್ಲಿ ತನ್ನ ಸಾಂವಿಧಾನಿಕ ಹೊಣೆಗಾರಿಕೆಯನ್ನು ನಿರ್ವಹಿಸಲು ಮಾತ್ರ ಆಗುತ್ತಿಲ್ಲ. ಅಧಿಕಾರಿಗಳಿಗಂತೂ ಮಾನ ಮರ್ಯಾದೆ, ಆತ್ಮಸಾಕ್ಷಿ ಯಾವುದೂ ಇಲ್ಲವಾಗಿದೆ. ಸರ್ಕಾರಿ ಶಾಲೆಗಳ ಮಕ್ಕಳ ಬಗ್ಗೆ ಅವರಲ್ಲಿ ಕಿಂಚಿತ್ ಮಾನವೀಯತೆಯೂ ಉಳಿದಿಲ್ಲ. ಈಗಲಾದರೂ ಕಣ್ಣು ತೆರೆದು ಸಮವಸ್ತ್ರ ಒದಗಿಸಲಿ ಎಂದು ಉಚ್ಚ ನ್ಯಾಯಾಲಯ ಛೀಮಾರಿ ಹಾಕಿದೆ.

ಸರ್ಕಾರಿ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಎರಡು ಜೊತೆ ಸಮವಸ್ತ್ರ ಒಂದು ಜೊತೆ ಶೂ ಮತ್ತು ಎರಡು ಜೊತೆ ಕಾಲುಚೀಲಗಳನ್ನು ನೀಡಬೇಕು ಎಂದು 2018ರ ಆಗಸ್ಟ್‌ನಲ್ಲಿ ಹೈಕೋರ್ಟ್ ಹೊರಡಿಸಿರುವ ಆದೇಶ ಪಾಲನೆಯಾಗಿಲ್ಲ ಎಂದು ಆರೋಪಿಸಿ ಕೊಪ್ಪಳ ಜಿಲ್ಲೆಯ ಮಾಸ್ಟರ್ ಮಂಜುನಾಥ್ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.


ವಿಚಾರಣೆ ವೇಳೆ ಸರ್ಕಾರ ಸಲ್ಲಿಸಿದ ಪ್ರಮಾಣ ಪತ್ರದಲ್ಲಿನ ಲೋಪವನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಮೂರ್ತಿ ಬಿ.ವೀರಪ್ಪ ಅವರು, ಸರಿಯಾದ ರೀತಿಯಲ್ಲಿ ಸಮವಸ್ತ್ರವನ್ನು ಯಾಕೆ ನೀಡಿಲ್ಲ. ಸಮವಸ್ತ್ರ ಶೂ, ಕಾಲುಚೀಲ ವಿತರಣೆ ಹೊಣೆ ಹೊತ್ತಿರುವ ಅಧಿಕಾರಿ ಯಾರು ಎಂಬುದನ್ನು ತಿಳಿಸಿ. ಅವರ ವಿರುದ್ಧ ನ್ಯಾಯಾಂಗ ನಿಂದನೆ ಆರೋಪ ನಿಗದಿ ಮಾಡಲಾಗುತ್ತದೆ ಎಂದು ಸರ್ಕಾರಿ ವಕೀಲರಿಗೆ ತಾಕೀತು ಮಾಡಿದರು.


ಎರಡು ಜೊತೆ ಸಮವಸ್ತ್ರಕ್ಕೆ ಹಣ ಕಳುಹಿಸಿರುವುದಾಗಿ ಪ್ರಮಾಣ ಪತ್ರದಲ್ಲಿ ಹೇಳಲಾಗಿದೆ ಆದರೆ, ದಾಖಲೆಗಳನ್ನು ನೋಡಿದರೆ ಒಂದು ಜೊತೆಗೆ ಮಾತ್ರವೇ ಹಣ ಒದಗಿಸಿರುವುದು ಕಾಣುತ್ತಿದೆ. ಕೊಟ್ಟಿರುವ ಸಮವಸ್ತ್ರದಲ್ಲೂ ಮೇಲಿನದು ಇದ್ದರೆ ಕೆಳಗಿನದು ಇರುವುದಿಲ್ಲ. ಒಂದು ಕಾಲುಚೀಲ ಮತ್ತು ಒಂದು ಶೂಗಷ್ಟೇ ಹಣ ಕಳುಹಿಸಿರಬೇಕು! ಫಲಾನುಭವಿ ಮಕ್ಕಳಿಗೆ ದಕ್ಕಬೇಕಾದ ಸಮವಸ್ತ್ರ, ಶೂ–ಕಾಲುಚೀಲಗಳು ದಕ್ಕಿವೆಯೇ ಎಂಬುದು ಆ ದೇವರಿಗೆ ಮಾತ್ರವೇ ಗೊತ್ತು ಎಂದು ವ್ಯಂಗ್ಯವಾಡಿದರು.






















ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ, ನಂ.1 ಹೇಮಾವತಿ ಎಡದಂಡೆ ನಾಲಾ ವಿಭಾಗ, ಚನ್ನರಾಯಪಟ್ಟಣ, ದೂರವಾಣಿ: 08176–252204

ಟೆಂಡರ್ ಪ್ರಕಟಣೆ – 18/2022–23 ದಿನಾಂಕ :31.01.2023/ ಐಟಂವಾರು ಟೆಂಡರ್ (ಇ–ಪ್ರೊಕ್ಯೂರ್ ಮೆಂಟ್ ಮುಖಾಂತರ ಮಾತ್ರ) Single tender System

ವ್ಯವಸ್ಥಾಪಕ ನಿರ್ದೇಶಕರು, ಕಾನೀನಿನಿ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಈ ಕೆಳಗೆ ಕಾಣಿಸಿದ ಕಾಮಗಾರಿಗಳಿಗೆ ಕೆಪಿಡಬ್ಲ್ಯುಡಿ/ ಸಿಪಿಡಬ್ಲ್ಯೂಡಿ ಹಾಗೂ ಇತರೆ ಸಾರ್ವಜನಿಕ ವಲಯದ ಸಂಸ್ಥೆಗಳ ಅರ್ಹ ಗುತ್ತಿಗೆದಾರರುಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ಸಂಖ್ಯೆ 2 ಕಾಮಗಾರಿಗಳು ಕಾಮಗಾರಿಗಳ ವಿವರ ನಾಗಮಂಗಲ ಶಾಖಾ ನಾಲಾ ಸರಪಳಿ:5.100 ಕಿ.ಮೀ. ನಿಂದ ಲಿಫ್ಟ್ ಮುಖೇನ ನೀರನ್ನು ಎತ್ತಿ ಚನ್ನರಾಯಪಟ್ಟಣ ತಾಲ್ಲೂಕಿನ ನುಗ್ಗೇಹಳ್ಳಿ ಹೋಬಳಿಯ ಸಂತೇಶಿವರ ಹಾಗೂ ಇತರೆ ಎರಡು ಕೆರೆಗಳನ್ನು ಕುಡಿಯುವ ನೀರಿಗಾಗಿ ತುಂಬಿಸುವ ಕಾಮಗಾರಿ ಹಾಗೂ ಬಾಗೂರು ನವಿಲೆ ಸುರಂಗದ ಆಗಮನ ಕಾಲುವೆಯ ಸೂಪರ್ ಪ್ಯಾಸೇಜ್ ಅಭಿವೃದ್ಧಿ ಕಾಮಗಾರಿಯ ಡಿ.ಪಿ.ಆರ್. ತಯಾರಿಕಾ ಕಾಮಗಾರಿಗಳು. ಟೆಂಡರ್‌ಗಿಟ್ಟ ಕಾಮಗಾರಿಗಳ ಮೊತ್ತ ರೂ. 3.47 ರಿಂದ ರೂ. 15.65 ಲಕ್ಷಗಳು. ಇ.ಎಂ.ಡಿ. ಮೊತ್ತ ರೂ.9000/– ರಿಂದ ರೂ. 40000/– ಇ–ಪ್ರೋಕ್ಯೂರ್‌ಮೆಂಟ್‌ನಿಂದ ಟೆಂಡರ್ ದಾಖಲೆಗಳನ್ನು ದಿನಾಂಕ:01.02.2023 ರಿಂದ ಡೌನ್‌ಲೋಡ್ ಮಾಡಿಕೊಂಡು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:15.02.2023 ರ 16.00 ಘಂಟೆಯವರೆಗೆ, ಸ್ವೀಕೃತ ಟೆಂಡರ್‌ಗಳನ್ನು ದಿನಾಂಕ:17.02.2023 ರಂದು 16.00 ಗಂಟೆಗೆ ತೆರೆಯಲಾಗುವುದು. ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿರುವ ಟೆಂಡರ್‌ಗಿಟ್ಟ ಅಂದಾಜುಮೊತ್ತ ಹಾಗೂ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತ ಮತ್ತು ಇ.ಎಂ.ಡಿ. ಮೊತ್ತವು ಅಂತಿಮವಾಗಿರುತ್ತದೆ ಮತ್ತು ಪ್ರಚಲಿತದಲ್ಲಿರುವ ತೆರಿಗೆಗಳು ಅನ್ವಯವಾಗುತ್ತದೆ. ಸೂಚನೆ: ಹೆಚ್ಚಿನ ವಿವರ/ ಮಾಹಿತಿಗಳನ್ನು https://eproc.karnataka.gov.in ವೆಬ್‌ಸೈಟ್‌ನಲ್ಲಿ ಹಾಗೂ ಕಛೇರಿಯಲ್ಲಿ ಪಡೆಯ ಬಹುದಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ.1,
ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿ(ನಿ), ಚನ್ನರಾಯಪಟ್ಟಣ

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/1030/2022–23



ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

ಅರಣ್ಯ ಸಂರಕ್ಷಣಾಧಿಕಾರಿಯವರ ಕಚೇರಿ, ಕಾರ್ಯಯೋಜನೆ ವೃತ್ತ

ಅರಣ್ಯ ಭವನ, ಅಶೋಕಪುರಂ, ಮೈಸೂರು–570008
ಇ–ಮೇಲ್:cfwpmys@gmail.com ದೂ/ಫ್ಯಾಸಂ: 0821–2483917
ಸಂಖ್ಯೆ: ಎ2/ಬಿಯುಡಿ/ಕಾಂಪಾ/ಇ–ಟೆಂಡರ್/ಸಿಆರ್–2/2022–23
ದಿನಾಂಕ: 25.01.2023

ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ–13/2022–23

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ) (e-procurement)

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಅರಣ್ಯ ಸಂರಕ್ಷಣಾಧಿಕಾರಿಗಳವರ ತಾಂತ್ರಿಕ ಸಹಾಯಕರು, ಕಾರ್ಯಯೋಜನೆ, ಮೈಸೂರು ರವರು 2022–23ನೇ ಸಾಲಿನಲ್ಲಿ ಈ ಕಛೇರಿಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಕಾಂಪಾ ಲೆಕ್ಕಶೀರ್ಷಿಕೆಯಡಿಯಲ್ಲಿ ಈ ಕೆಳಗಿನ ಟೇಬಲ್–1 ರಲ್ಲಿ ನಮೂದಿಸಿರುವ ಕೆಲಸಗಳಿಗಾಗಿ ಅಲ್ಪಾವಧಿ ಇ–ಟೆಂಡರ್‌ನ್ನು ಆಹ್ವಾನಿಸಲಾಗಿತ್ತು. ಸದರಿ ಇ–ಟೆಂಡರ್‌ನಲ್ಲಿ ಒಬ್ಬರೇ ಗುತ್ತಿಗೆದಾರರು ಭಾಗವಹಿಸಿದ್ದರಿಂದ ಮತ್ತೊಮ್ಮೆ ಅಲ್ಪಾವಧಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರ್‌ದಾರರು ಟೆಂಡರ್ ಫಾರಂಗಳನ್ನು ವೆಬ್‌ಸೈಟ್ www.eproc.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ದಿ: 04.02.2023ರ ಸಂಜೆ: 4.00 ಗಂಟೆಯವರೆಗೆ ಟೆಂಡರ್ ಅನ್ನು ಸಲ್ಲಿಸಬಹುದು. ತಾಂತ್ರಿಕ ಬಿಡ್ ಅನ್ನು ದಿ: 06.02.2023 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್ ಅನ್ನು ದಿ: 07.02.2023 ರಂದು ಸಂಜೆ: 4.00 ಗಂಟೆಗೆ ತೆರೆಯಲಾಗುವುದು. ಇ.ಎಂ.ಡಿ ಹಣವನ್ನು ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ ಆನ್‌ಲೈನ್‌ನಲ್ಲಿಯೇ ಸಂಬಂಧಿಸಿದ ಬ್ಯಾಂಕ್‌ನಲ್ಲಿ ಪಾವತಿಸಬೇಕಾಗುತ್ತದೆ. ಇನ್ನುಳಿದ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ, ಕಛೇರಿ ವೇಳೆಯಲ್ಲಿ ಪಡೆಯಬಹುದು. ಮೇಲಿನ ದಿನಾಂಕಗಳಂದು ಸಾರ್ವತ್ರಿಕ ರಜೆಯಿದ್ದಲ್ಲಿ/ ಸಾರ್ವತ್ರಿಕ ರಜೆಯೆಂದು ಘೋಷಣೆಯಾದಲ್ಲಿ ಮುಂದಿನ ದಿನಾಂಕಗಳನ್ನು ಪರಿಗಣಿಸುವುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಕಾರ್ಯಯೋಜನೆ, ಮೈಸೂರು.

DIPR/DDMYS/KSMCA/950/2022-23

ಕರ್ನಾಟಕ ಸರ್ಕಾರ – ಧಾರ್ಮಿಕ ದತ್ತಿ ಇಲಾಖೆ

ಕಾರ್ಯನಿರ್ವಾಹಕ ಅಧಿಕಾರಿಗಳವರ ಕಛೇರಿ, ಶ್ರೀ ಶ್ರೀ ಕಂಠೇಶ್ವರಸ್ವಾಮಿ ದೇವಸ್ಥಾನ, ನಂಜನಗೂಡು, ಮೈಸೂರು ಜಿಲ್ಲೆ.

ದೂರವಾಣಿ: 08221:226245, ಇಮೇಲ್: sstnanjangud@gmail.com
ಸಂಖ್ಯೆ: ಎಸ್‌ಎಸ್‌ಟಿ/ತೀರ್ಥಬಾಟಲ್/ಸಿಆರ್–5/2022–23 ದಿನಾಂಕ: 01.02.2023

ಇ–ಟೆಂಡರ್ ಪ್ರಕಟಣೆ

ನಂಜನಗೂಡು ಶ್ರೀ ಶ್ರೀಕಂಠೇಶ್ವರ ದೇವಾಲಯದ 2023–24ನೇ ಸಾಲಿನ ಶ್ರೀ ಶ್ರೀಯವರ ದೇವಾಲಯಕ್ಕೆ ಅಗತ್ಯವಾದ ತೀರ್ಥದ ಬಾಟಲುಗಳು ಹಾಗೂ 250ಎಂಎಲ್, 750 ಎಂ.ಎಲ್ ಕಂಟೈನರ್ಸ್‌ಗಳನ್ನು ಸರಬರಾಜು ಮಾಡಲು ಇ–ಪ್ರಕ್ಯೂರ್‌ಮೆಂಟ್ ಇ–ಟೆಂಡರ್‌ಯಡಿಯಲ್ಲಿ ಟೆಂಡರ್ ಕರೆಯಲಾಗಿದೆ. ಆಸಕ್ತರು ಟೆಂಡರ್‌ಗಳನ್ನು ಇ–ಪ್ರಕ್ಯೂರ್‌ಮೆಂಟ್ **(http:eproc.karnataka.gov.in)** ಮೂಲಕ ಸಲ್ಲಿಸಬಹದಾಗಿದೆ. ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ **(Technical Bid /Qualification criteria)** ದ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯಿಂದ ಹಾಗೂ ದೂರವಾಣಿ ಮೂಲಕ ಮಾಹಿತಿ ಪಡೆಯಬಹುದಾಗಿದೆ.

ಕ್ರಸಂ	ಟೆಂಡರ್ ವಿವರ	ಟೆಂಡರ್‌ಗೆ ಅಂದಾಜಿಸಲಾದ ಮೊಬಲಾಗು	ಇ.ಎಂ.ಡಿ ಮೊತ್ತ
1.	2023–24ನೆ ಸಾಲಿಗೆ ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಬೇಕಾಗುವ ಉತ್ತಮ ಗುಣಮಟ್ಟದ 250, 750 ಎಂ.ಎಲ್ ಕಂಟೈನರ್‌ಗಳನ್ನು ದೇವಾಲಯದ ಇಂಡೆಂಟ್‌ಗೆ ಅನುಗುಣವಾಗಿ ಸರಬರಾಜು ಮಾಡುವ ಗುತ್ತಿಗೆ ಹಕ್ಕಿನ ಬಗ್ಗೆ.	–	25,000/–
2.	2023–24ನೆ ಸಾಲಿನ ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯಕ್ಕೆ ಬೇಕಾಗುವ ಉತ್ತಮ ಗುಣಮಟ್ಟದ ತೀರ್ಥದ ಬಾಟಲ್‌ಗಳನ್ನು ದೇವಸ್ಥಾನಕ್ಕೆ ದೇವಾಲಯದ ಇಂಡೆಂಟ್‌ಗೆ ಅನುಗುಣವಾಗಿ ಸರಬರಾಜು ಮಾಡುವ ಗುತ್ತಿಗೆ ಹಕ್ಕಿನ ಬಗ್ಗೆ.	–	25,000/–

ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಇ–ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ

1.	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಚಾಲ್ತಿಗೆ ಬರುವ ದಿನಾಂಕ	02–02–2023	ರ ನಂತರ
2.	ಇ–ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಕಾಲ	15–02–2023	ಸಂಜೆ: 5.00 ಗಂಟೆಯವರೆಗೆ
3.	ಇ–ಟೆಂಡರ್ ತೆರೆಯಲು ದಿನಾಂಕ ಮತ್ತು ಕಾಲ	17–02–2023	11.00A.M ನಂತರ

ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು, ಶ್ರೀ ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು